ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 22 ಮೇ 26-ಜೂನ್ 1, 1997 ಬೆಲೆ ರೂ. 2.00

ಆಹಾ! ಮಹಿಳಾ ಸಮಾನತೆಯ ವಿರುದ್ಧ ಎಂತಹ ನಾಚಿಕೆಗೇಡಿ ಕೂಟ!

ಮಹಿಳಾ ಮೀಸಲಾತಿ ಮಸೂದೆಯ ವಿರುದ್ಧ ಸಂಸತ್ತಿನಲ್ಲಿನ ರಂಪಕ್ಕೆ ಮಹಿಳಾ ಸಂಘಟನೆಗಳ ಪ್ರತಿಭಟನೆ

ಮೇ 16 ರಂದು ಪ್ರಧಾನ ಮಂತ್ರಿಗಳು ಶಾಸನ ಸಭೆಗಳಲ್ಲಿ ಮಹಿಳಾ ಮೀಸಲಾತಿ ಕುರಿತಂತೆ 81 ನೇ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಲು ಬಿಡದೆ ಜನತಾದಳ, ಬಿಜೆಪಿ, ಸಮತಾ ಪಾರ್ಟಿ, ಮತ್ತಿತರ ಪಕ್ಷಗಳ ಸದಸ್ಯರು ಎಬ್ಬಿಸಿದ ರಂಪವನ್ನು ಅಖಿಲ ಭಾರತ ಪ್ರಜಾಪ್ರಭುತ್ವವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ) ಬಲವಾಗಿ ಖಂಡಿಸಿದೆ. ರಾಜಕೀಯದಲ್ಲಿ ಪುರುಷರ ಗುತ್ತೇದಾರಿಕೆಯ ಪ್ರತಿಗಾಮಿ ನಿಲುವನ್ನು ಹೇರಲು ಎಡಪಕ್ಷಗಳು ಬಿಟ್ಟು ಬೇರೆಲ್ಲಾ ಪಕ್ಷಗಳು ಯಾವುದೇ ನಾಚಿಕೆಯಿಲ್ಲದೆ ಒಂದಾಗಿವೆ ಎಂದು ಎಐಡಿಡಬ್ಲ್ಯುಎ ಕಟುವಾಗಿ ಟೀಕಿಸಿದೆ. ಮಹಿಳಾ ಮೀಸಲಾತಿ ಮಸೂದೆಯನ್ನು ತಕ್ಷಣ ಅಂಗೀಕರಿಸಬೇಕೆಂದು ಒತ್ತಾಯಿಸಿ ಒಂದು ರಾಷ್ಟ್ರವ್ಯಾಪಿ ಪ್ರಚಾರಾಂದೋಲನ ನಡೆಸಲು ಅದು ಕರೆ ನೀಡಿದೆ. ಈ ಪ್ರಚಾರಾಂದೋಲನದ ಕೊನೆಯಲ್ಲಿ ಎಲ್ಲಾ ರಾಜ್ಯಗಳ ರಾಜಧಾನಿಗಳಲ್ಲಿ ಮಹಿಳೆಯರು ಸಹಸ್ರ-ಸಹಸ್ರ ಸಂಖ್ಯೆಯಲ್ಲಿ ಬಂಧನಕ್ಕೂ ಸಿದ್ದರಾಗುತ್ತಾರೆ ಎಂದು ಅದು ಎಚ್ಚರಿಸಿದೆ.

ಈ ಮಸೂದೆಯನ್ನು ತಡೆಯುವ ಪ್ರಯತ್ನ ಕಳೆದ ಚುನಾವಣೆಗಳಲ್ಲಿ ಜನರ ತೀರ್ಪನ್ನು ಅಲ್ಲಗಳೆಯುವ ಪ್ರಯತ್ನವಲ್ಲದೆ ಮತ್ತೇನೂ ಅಲ್ಲ, ಏಕೆಂದರೆ ಆ ಚುನಾವಣೆಗಳಲ್ಲಿ ಜನತಾದಳ ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳು ಮಹಿಳೆಯರಿಗೆ ಶಾಸನ ಸಭೆಗಳಲ್ಲಿ 33% ಮೀಸಲಾತಿಯ ಭರವಸೆ ನೀಡಿದ್ದವು ಎಂದು ನೆನಪಿಸಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್‌ರವರು ಕೂಡಾ ಈ ಮಸೂದೆಯ ವಿರುದ್ಧ ಬಂದಿರುವ ಧಾಳಿಗಳನ್ನು ದೃಢ ನಿರ್ಧಾರದಿಂದ ಎದುರಿಸಬೇಕು, ಒಂದು ವಿಶೇಷ ಅಧಿವೇಶನ ನಡೆಸಿ ಇದನ್ನು ಅಂಗೀಕರಿಸಬೇಕು ಎಂದು ಒತ್ತಾಯಿಸಿದ್ದಾರೆ. ಮಹಿಳಾ ಮೀಸಲಾತಿಯ ಬಗ್ಗೆಯೂ ಆರಂಭದಿಂದಲೂ ಒಂದು ದೃಢ ನಿಲುವು ಪ್ರತಿಪಾದಿಸಿದ ಪಕ್ಷಗಳೆಂದರೆ ಸಿಪಿಐ(ಎಂ), ಸಿಪಿಐ, ಆರ್.ಎಸ್.ಪಿ. ಮತ್ತು ಫಾವರ್ಡ್‌ಬ್ಲಾಕ್ - ಈ ಎಡಪಕ್ಷಗಳು ಮಾತ್ರ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

50 ವರ್ಷಗಳ ಸ್ವಾತಂತ್ರ್ಯದ ನಂತರವೂ ಮಹಿಳೆಯರ ಪರಿಸ್ಥಿತಿಯಲ್ಲಿ ತೀವ್ರ ಬದಲಾವಣೆಯೇನೂ ಆಗಿಲ್ಲ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಜನಸಂಖ್ಯೆಯಲ್ಲಿ ಅರ್ಧದಷ್ಟಿದ್ದು ವಿವಿಧ ಆರ್ಥಿಕ ಚಟುವಟಿಕೆಗಳಲ್ಲೂ ತೊಡಗಿ ಕುಟುಂಬದ ಆಪಾಯಕ್ಕೆ ಗಮನಾರ್ಹ ಕಾಣಿಕೆ ಸಲ್ಲಿಸುತ್ತಿದ್ದರೂ ಅವರು ಸಾಮಾಜಿಕ, ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವಂತಿಲ್ಲ. ಮೇ 16 ರಂದು ಸಂಸತ್ತಿನಲ್ಲಿ ಕಂಡುಬಂದುದು ಇದೇ ಪ್ರತಿಗಾಮಿ ನಿಲುವಿನ ನಾಚಿಕೆಗೇಡಿ ಪ್ರದರ್ಶನ.

ಕಳೆದ ಎರಡು ಮೂರು ದಶಕಗಳಲ್ಲಿ ಹಲವು ಮಹಿಳಾ ಸಂಘಟನೆಗಳು ಸಮಾಜದಲ್ಲಿ ಸಮಾನತೆಗಾಗಿ ಹೋರಾಟ ನಡೆಸಿದ ಫಲವಾಗಿ, ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ 33% ಮಹಿಳಾ ಮೀಸಲಾತಿಯ ಯಶಸ್ಸಿನ ನಂತರ ಕೊನೆಗೂ ಕಳೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಎಲ್ಲಾ ರಾಜಕೀಯ ಪಕ್ಷಗಳೂ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಮಹಿಳೆಯರಿಗೆ ಶಾಸನ ಸಭೆಗಳಲ್ಲಿ 33% ಮೀಸಲಾತಿ ನೀಡುವ ವಚನ ನೀಡಿದ್ದವು. ಕಳೆದ ಸೆಪ್ಟೆಂಬರ್‌ನಲ್ಲಿ ಲೋಕಸಭೆಯ ಚಳಿಗಾಲದ ಅಧಿವೇಶನದಲ್ಲಿ ಈ ಕುರಿತು ಮಸೂದೆಯನ್ನು ಮಂಡಿಸಲಾಯಿತು. ಆದರೆ ಆ ಮಸೂದೆಯ ಮೇಲಿನ ಚರ್ಚೆಯನ್ನು ನೋಡಿದಾಗ ಎಡ ಪಕ್ಷಗಳು ಬಿಟ್ಟು ಬೇರಾವ ಪ್ರಮುಖ ಪಕ್ಷಗಳಿಗೂ ಈ ಮಸೂದೆಯನ್ನು ಅಂಗೀಕರಿಸುವ ಉತ್ಸಾಹವಿಲ್ಲ ಎಂದು ಸ್ಪಷ್ಟವಾಯಿತು. ಇದೊಂದು ಸಂವಿಧಾನ ತಿದ್ದುಪಡಿ ಮಸೂದೆಯಾಗಿದ್ದು, ಮೂರನೇ ಎರಡು ಬಹುಮತದ ಅಗತ್ಯವಿದೆ. ಇದು ಗೊತ್ತಿದ್ದೂ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಈ ಬಗ್ಗೆ ಗಂಭೀರ ವಚನ ನೀಡಿದ್ದ ಕಾಂಗ್ರೆಸ್, ಜನತಾದಳ ಬಿಜೆಪಿ ಮುಖಂಡರು ಲೋಕಸಭೆಯಲ್ಲಿ ತಮ್ಮ ಸದಸ್ಯರೆಲ್ಲಾ ಹಾಜರಿರುವಂತೆ ಗಮನ ನೀಡಲಿಲ್ಲ. ಕೇವಲ ಎಡಪಕ್ಷಗಳ ಸದಸ್ಯರು ಮಾತ್ರವೇ ಪೂರ್ಣ ಸಂಖ್ಯೆಯಲ್ಲಿ ಹಾಜರಿದ್ದರು. ಇತರ ಎಲ್ಲಾ ಪಕ್ಷಗಳೂ ತಮ್ಮ ಮಾತಿನಂತೆ ನಡೆದಿದ್ದರೆ ಸೆಪ್ಟೆಂಬರ್ 12 ರಂದೇ ಈ ಮಸೂದೆ ಶಾಸನವಾಗಿ ಬಿಡುತ್ತಿತ್ತು.

ದಾರಿ ತಪ್ಪಿಸುವ ತಂತ್ರ

ಈ ನಡುವೆ ಈ 33% ಮೀಸಲಾತಿಯಲ್ಲಿ ಇತರ ಹಿಂದುಳಿದ ವರ್ಗ(ಒಬಿಸಿ)ಗಳಿಗೆ ಕೋಟಾ ನೀಡಬೇಕೆಂಬ ಬೇಡಿಕೆಯನ್ನು ಬಿಜೆಪಿ ಸಂಸತ್ ಸದಸ್ಯರು ಮುಂದಿಟ್ಟರು. ಈ ಮಸೂದೆ ಅಂಗೀಕಾರವಾಗದಂತೆ ತಡೆಯಲು ಇದೊಂದು ಫಲಕಾರಿ ತಂತ್ರವಾಗಿ ಪರಿಣಮಿಸಿತು. ಕೊನೆಗೆ ಈ ಮಸೂದೆಯನ್ನು ಜಂಟಿ ಸಲಹಾ ಸಮಿತಿಗೆ ಒಪ್ಪಿಸಲಾಯಿತು. ಹಿರಿಯ ಸಂಸತ್ ಸದಸ್ಯೆ ಗೀತಾ ಮುಖರ್ಜಿಯವರ ನೇತೃತ್ವದಲ್ಲಿ ಈ ಸಮಿತಿ ದೇಶದಲ್ಲೆಲ್ಲಾ ಸಂಚರಿಸಿ, ಚರ್ಚಿಸಿ ಸಿದ್ಧಪಡಿಸಿದ ಶಿಫಾರಸುಗಳೊಡನೆ ಬಜೆಟ್ ಅಧಿವೇಶನದ ಕೊನೆಯ ದಿನ ಅದನ್ನು ಮಂಡಿಸಲು ಪ್ರಧಾನಿಗಳು ಎದ್ದು ನಿಂತಾಗ ಜನತಾದಳದ ಅಧ್ಯಕ್ಷರೇ ಆದ ಶರದ್ ಯಾದವ್ ಅಡ್ಡಿಪಡಿಸುವವರ ನೇತೃತ್ವ ವಹಿಸಿದರು. ಕಾನೂನು ಮಂತ್ರಿಗಳು ಮಸೂದೆಯನ್ನು ಮಂಡಿಸಲು ಮುಂದಾದಾಗ ಅವರನ್ನು ಹಿಂದಕ್ಕೆ ತಳ್ಳಲಾಯಿತು. ಜನತಾದಳದ ರಾಮಕೃಪಾಲ್ ಯಾದವ್, ಕಮರುಲ್ ಇಸ್ಲಾಂ ಮತ್ತಿತರರು, ಸಮತಾ

ಪುಟ 7 ನೋಡಿ

ರಥಯಾತ್ರೆಯೋ ಮತಯಾತ್ರೆಯೋ?

ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಲಾಲಕೃಷ್ಣ ಅಡ್ವಾಣಿಯವರು ಭಾರತ ಸ್ವಾತಂತ್ರ್ಯದ ಸ್ವರ್ಣ ಜಯಂತಿ ರಥ ಯಾತ್ರೆಯನ್ನು ಮೇ 2 ರಂದು ಕರ್ನಾಟಕದಲ್ಲಿ ಬೆಳಗಾವಿಯಿಂದ ಪ್ರಾರಂಭ ಮಾಡಿದ್ದಾರೆ. ಅವರ ರಥಯಾತ್ರೆ ಪ್ರಾರಂಭವಾಗಿರುವುದು 1942 ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಗೆ ಕರೆ ನೀಡಿದ ಐತಿಹಾಸಿಕ ಗುವಾಹಟಿಯ ಟ್ಯಾಂಕ್ ಮೈದಾನದಿಂದ.

ಒಟ್ಟು ಸುಮಾರು 15 ಸಾವಿರ ಕಿಲೋ ಮೀಟರ್ ಸಾಗಲಿದೆ ಅಡ್ವಾಣಿಯವರ ರಥ ಯಾತ್ರೆ. ಭಾರತ ದೇಶಕ್ಕೆ ಸ್ವಾತಂತ್ರ್ಯ ದೊರೆತು 50 ವರ್ಷಗಳಾಗಿವೆ. ಈ ಹಿಂದೆ ಅಯೋಧ್ಯಾ ರಥಯಾತ್ರೆ, ಏಕತಾ ಯಾತ್ರೆ, ಜನಾದೇಶ ಯಾತ್ರೆ, ಹಾಗೆಯೇ ಸ್ವರಾಜ್ ರಥ ಯಾತ್ರೆಗಳನ್ನು ಲಾಲಕೃಷ್ಣ ಅಡ್ವಾನಿಯವರು ನಡೆಸಿದ್ದರು. ಸ್ವಾತಂತ್ರ್ಯ ಹೋರಾಟದ ಪಿತಾಮಹನೆಂದೆನಿಸಿಕೊಂಡ ಮಹಾತ್ಮ ಗಾಂಧಿಯವರನ್ನೇ ಕೊಲೆ ಮಾಡಿದ ಆರ್‌ಎಸ್‌ಎಸ್ ಸಂಘಟನೆಗೆ ಸೇರಿದ, ಭಾರತೀಯ ಜನತಾಪಕ್ಷದ ಅಧ್ಯಕ್ಷ ಲಾಲ್ ಕೃಷ್ಣ ಅಡ್ವಾನಿಯವರಿಗೆ ದೇಶ ಪ್ರೇಮ ಉಕ್ಕಿಬಂದು ಭಾರತ ಸ್ವಾತಂತ್ರ್ಯದ ಸ್ವರ್ಣ ಜಯಂತಿ ರಥಯಾತ್ರೆಯನ್ನು ಕೈಗೊಂಡಿದ್ದಾರೆ. ಹಿಂದಿನ ರಥ ಯಾತ್ರೆಗಳೆಲ್ಲ ಉತ್ತರ ಭಾರತದಲ್ಲಿ ನಡೆದವು. ಅಂಥ ರಥ ಯಾತ್ರೆಗಳಿಂದ ಪ್ರಭಾವ ಬೆಳೆಸಿಕೊಂಡ ಅಡ್ವಾನಿಯವರು ದೇಶದ ಕಳೆದ ಒಂದು ವರ್ಷದ ಹೊಸ ರಾಜಕೀಯ ವ್ಯವಸ್ಥೆಯಿಂದಾಗಿ, ಲೋಕಸಭೆಯಲ್ಲಿ ಅತಿ ಹೆಚ್ಚು ಸ್ಥಾನ ಗಳಿಸಿದ ಪಕ್ಷವಾಗಿ ಆರಿಸಿ ಬಂದರೂ ಕೂಡ ತಮ್ಮ ಪಕ್ಷದ ನೇತೃತ್ವದ ವಾಜಪೇಯಿ ಸರಕಾರ ಹದಿಮೂರು ದಿವಸಗಳಲ್ಲಿಯೇ ಅಧಿಕಾರ ಕಳೆದುಕೊಂಡು ಸಂಯುಕ್ತರಂಗದ ಸರಕಾರ ಸ್ಥಾಪನೆಗೆ ದಾರಿಮಾಡಿಕೊಟ್ಟ ಹಿನ್ನೆಲೆಯಲ್ಲಿ, ತಮ್ಮ ಪಕ್ಷದ ಪ್ರಭಾವವನ್ನು ದಕ್ಷಿಣ ಭಾರತ ರಾಜ್ಯಗಳಲ್ಲಿ ಬೆಳೆಸಿ ಆ ಮೂಲಕ ಮುಂದಿನ ಲೋಕಸಭೆ ಚುನಾವಣೆಯಲ್ಲಿ ದಿಲ್ಲಿ ಗದ್ದುಗೆಗೇರಬಹುದೆಂಬ ಕನಸು ಕಾಣುತ್ತ ಈ ರಥ ಯಾತ್ರೆ ಪ್ರಾರಂಭಿಸಿದ್ದಾರೆ. ಹಿಂದಿನ ರಥ ಯಾತ್ರೆಗಳಿಗೂ ಇಂದಿನ ರಥಯಾತ್ರೆಗಳಿಗೂ ಭಿನ್ನತೆ ಕಾಣಬಹುದೆಂದು ಬಿಜೆಪಿಯವರು ಪ್ರತಿಪಾದಿಸುತ್ತಾರೆ. ಹಿಂದಿನ ರಥಯಾತ್ರೆಗಳೆಲ್ಲ ಕೋಮು ಭಾವನೆಗಳನ್ನು ಕೆರಳಿಸಿ, ಕೋಮು ಗಲಭೆಗಳಿಗೆ ಅವಕಾಶ ಮಾಡಿಕೊಟ್ಟಿದ್ದವು. ಉತ್ತರ ಹಿಂದಿ ಭಾಷಿಕ ಪ್ರದೇಶಗಳಲ್ಲಂತೂ ಅಡ್ವಾನಿಯವರ ಹಿಂದಿನ ರಥ ಯಾತ್ರೆಗಳೆಲ್ಲ ಬೆಂಕಿಮಳೆಯನ್ನೇ ಸುರಿಸಿದ್ದವು. ಈ ಕಾರಣದಿಂದಲೇ ಲೋಕಸಭೆಯಲ್ಲಿ ಈ ರಥಯಾತ್ರೆ ಕುರಿತು ಭೀಕರವಿರೋಧ ಕಂಡು ಪಾರ್ಲಿಮೆಂಟ್ ಸದಸ್ಯರು ಈ ರಥ ಯಾತ್ರೆಯ ಪರಿಣಾಮದ ಕುರಿತು ಬಹಳ ಆತಂಕ ವ್ಯಕ್ತಪಡಿಸಿದ್ದರು.

ಮೂಲ ಉದ್ದೇಶ ಬೇರೆಯೇ

ದೇಶ ಸ್ವಾತಂತ್ರ್ಯದ ಸ್ವರ್ಣ ಮಹೋತ್ಸವವನ್ನು ಆಚರಿಸುತ್ತಿರುವಾಗ ಭ್ರಷ್ಟಾಚಾರ ರಾಷ್ಟ್ರಾದ್ಯಂತ ಹರಡಿರುವ ಭೀಕರ ವ್ಯಾದಿಯಾಗಿರುವುದರಿಂದ ಆ ರೋಗದ ವಿರುದ್ಧ ಜನರಲ್ಲಿ ಜಾಗೃತಿಯನ್ನುಂಟುಮಾಡಲು ಈ ರಥಯಾತ್ರೆ ಹಮ್ಮಿಕೊಳ್ಳಲಾಗಿದೆಂದು ಅಡ್ವಾನಿಯವರು ಹೇಳಿದ್ದಾರೆ.

ಆದರೆ ಈ ರಥ ಯಾತ್ರೆ ಭ್ರಷ್ಟಾಚಾರದ ವಿರುದ್ಧ ನಡೆದಿಲ್ಲ. ಅದರ ಮೂಲ ಉದ್ದೇಶ ಬೇರೆಯೇ ಇದೆ ಎಂದರೆ ತಪ್ಪಾಗಲಿಕ್ಕಿಲ್ಲ. ಹೋದ ಚುನಾವಣೆಯ ನಂತರ ಕಳೆದ ಒಂದು ವರ್ಷದಲ್ಲಿ ದಿಲ್ಲಿಯಲ್ಲಾಗುತ್ತಿರುವ ಬದಲಾವಣೆಗಳನ್ನು ತಮ್ಮದೇ ಆದ ರೀತಿಯಲ್ಲಿ ಅರ್ಥೈಸಿಕೊಳ್ಳುತ್ತಿರುವ ಬಿಜೆಪಿ ಮುಖಂಡತ್ವ ಸಂಯುಕ್ತ ರಂಗದ ಗುಜ್ರಾಲ್ ಸರಕಾರ ಹೆಚ್ಚು ದಿವಸ ಬಾಳಲಾರದೆಂಬ ತೀರ್ಮಾನಕ್ಕೆ ಬಂದು ಲೋಕಸಭೆಗೆ ಚುನಾವಣೆ

ಪುಟ 6 ನೋಡಿ

ರಾಜ್ಯ ಸರಕಾರದ ಕಾರ್ಮಿಕ ವಿರೋಧಿ ಮತ್ತು ಜನ ವಿರೋಧಿ ನೀತಿಗಳನ್ನು ವಿರೋಧಿಸಿ ಮೇ ೨೨ ರಂದು ರಾಜ್ಯವ್ಯಾಪಿ ಮುಷ್ಕರ ನಡೆಸಬೇಕೆಂದು ಸಿಐಟಿಯುವಿನ ಇತ್ತೀಚಿಗೆ ನಡೆದ ರಾಜ್ಯ ಸಮ್ಮೇಳನ ಕರೆ ನೀಡಿತ್ತು. ಇದಕ್ಕೆ ಒಗೊಟ್ಟು ರಾಜ್ಯದ ಕೆಲವೆಡೆ ಮುಷ್ಕರ, ಪಿಕೆಟಿಂಗ್, ಧರಣಿಗಳು ನಡೆದಿರುವ ವರದಿಗಳು ಬರುತ್ತಿವೆ. ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳ ಮನೆಯ ಮುಂದೆ ಧರಣಿ ಸತ್ಯಾಗ್ರಹವನ್ನು ಮಾಡಲಾಯಿತು. ಈ ಧರಣಿಯಲ್ಲಿ ಜಿಲ್ಲೆಯ





3,000ಕ್ಕೂ ಹೆಚ್ಚು ಕಾರ್ಮಿಕರು ಪಾಲ್ಗೊಂಡಿದ್ದರು. ಧರಣಿಯ ಸ್ಥಳಕ್ಕೆ ಮನವಿಯನ್ನು ಸ್ವೀಕರಿಸಲು ರಾಜ್ಯದ ಉಪಮುಖ್ಯ ಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಮತ್ತು ಕಾರ್ಮಿಕ ಇಲಾಖಾ ಸಚಿವರಾದ ಸತ್ಯನಾರಾಯಣರವರು ಬಂದು ಕಾರ್ಮಿಕರನ್ನುದ್ದೇಶಿಸಿ ಮಾತನಾಡಿ ಆದಷ್ಟು ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲು ಸರಕಾರ ಬದ್ಧವಾಗಿದೆಯೆಂದು, ಈ ಸಮಸ್ಯೆಗಳನ್ನು ಕುರಿತಂತೆ ಸಿಐಟಿಯು ಮುಖಂಡರೊಡನೆ ಮಾತುಕತೆ ನಡೆಸುವುದಾಗಿ ತಿಳಿಸಿದರು.

ಈ ಧರಣಿಯನ್ನು ಸಿಐಟಿಯು ರಾಜ್ಯಾಧ್ಯಕ್ಷರಾದ ಎಸ್.ಸೂರ್ಯನಾರಾಯಣ ರಾವ್, ಗೋಪಾಲ ಗೌಡ ಮತ್ತು ಮೀನಾಕ್ಷಿ ಸುಂದರಂರವರು ಧರಣಿಯನ್ನುದ್ದೇಶಿಸಿ ಮಾತನಾಡಿದರು. ಈ ಧರಣಿ ಸತ್ಯಾಗ್ರಹ ಸಿಐಟಿಯು ಜಿಲ್ಲಾ ಸಮಿತಿ ನೇತೃತ್ವದಲ್ಲಿ ನ[illegible]ಯಿತು.

ಸಂಯುಕ್ತ ರಂಗ ಸರಕಾರದ ನಿಲುವುಗಳ ಬಗ್ಗೆ ಸಿಪಿಐ(ಎಂ) ಕೇಂದ್ರ ಸಮಿತಿ ಖೇದ

ಸಿರಿವಂತರ ಪರವಾದ ನೀತಿಗಳನ್ನು ಬಿಟ್ಟು ಜನ ಸಾಮಾನ್ಯರ ಪರವಾದ, ದೇಶದ ಸ್ವಾವಲಂಬನೆಯ ಪರವಾದ ನೀತಿಗಳನ್ನು ಅನುಸರಿಸುವಂತೆ ಸಂಯುಕ್ತ ರಂಗ ಸರಕಾರದ ಮೇಲೆ ಒತ್ತಾಯ ತರಲು ಜುಲೈ 15 ರಿಂದ ಎರಡು ವಾರಗಳ ಪ್ರಚಾರ ಆಂದೋಲನ ನಡೆಸಬೇಕೆಂದು ಸಿಪಿಐ(ಎಂ)ನ ಕೇಂದ್ರ ಸಮಿತಿ ಕರೆ ನೀಡಿರುವ ಸುದ್ದಿಯನ್ನು ಕಳೆದ ಸಂಚಿಕೆಯಲ್ಲಿ ಓದಿರುವಿರಿ. ಮೇ 12 ರಿಂದ 14 ರವರೆಗೆ ನಡೆದ ಸಿಪಿಐ(ಎಂ) ಕೇಂದ್ರ ಸಮಿತಿಯ ಸಭೆಯ ನಂತರ ಹೊರಡಿಸಲಾದ ವಿವರವಾದ ಹೇಳಿಕೆಯನ್ನು ಈ ಮುಂದೆ ಕೊಡಲಾಗಿದೆ.

ಬಂಡವಾಳಿಗರ ಪರ ನೀತಿಗಳ ಜಾರಿಗೆ ಮುತುವರ್ಜಿ ಪ್ರಜಾಸತ್ತಾತ್ಮಕ, ಸಾಮಾಜಿಕ ನ್ಯಾಯದ ಧೋರಣೆಗಳ ನಿರ್ಲಕ್ಷ್ಯ

ಫೆಬ್ರವರಿ ತಿಂಗಳಲ್ಲಿ ನಡೆದ ಕೇಂದ್ರ ಸಮಿತಿ ಹಿಂದಿನ ಸಭೆಯ ನಂತರ ರಾಷ್ಟ್ರೀಯ ಮಟ್ಟದಲ್ಲಿ ನಡೆದ ರಾಷ್ಟ್ರೀಯ ಬೆಳವಣಿಗೆಗಳನ್ನು ವಿಮರ್ಶಿಸಿತು. ಕಾಂಗ್ರೆಸ್(ಐ) ದೇವೇಗೌಡ ಸರಕಾರಕ್ಕೆ ನೀಡದ ಬೆಂಬಲವನ್ನು ಹಿಂತೆಗೆದು ಕೊಂಡದ್ದರಿಂದ ಸೃಷ್ಟಿಯಾದ ಬಿಕ್ಕಟ್ಟಿಗೆ ಸಂಬಂಧಪಟ್ಟಂತೆ ಪೊಲಿಟ್ ಬ್ಯೂರೋ ತಳೆದ ನಿಲುವನ್ನು ಕೇಂದ್ರ ಸಮಿತಿ ಅನುಮೋದಿಸಿತು. ಕಾಂಗ್ರೆಸ್ ಪಕ್ಷದ ಸಂಕುಚಿತ ಸ್ವಾರ್ಥವೇ ಅದು ಈ ಅಸಮರ್ಥನೀಯ ಹೆಜ್ಜೆಯಿಡುವ ಹಿಂದಿದ್ದ ಉದ್ದೇಶ ಎಂದು ಕೇಂದ್ರ ಸಮಿತಿ ಅಭಿಪ್ರಾಯಪಟ್ಟರು. ಏಕೆಂದರೆ ಕಾಂಗ್ರೆಸ್ಸಿನ ಹಲವಾರು ಮುಖಂಡರು ಭ್ರಷ್ಟಾಚಾರ ಆರೋಪಗಳನ್ನು ಎದುರಿಸುತ್ತಿದ್ದಾರೆ. ಹಾಗೂ ತಾವು ಸರಕಾರದಲ್ಲಿದ್ದಾಗ ಅನುಸರಿಸಿದ ತಪ್ಪು ನೀತಿಗಳಿಂದಾಗಿ ಜನ ಬೆಂಬಲ ಕಳೆದು ಕೊಳ್ಳುತ್ತಿದ್ದೇವೆ ಎಂಬ ಸಂಗತಿಯನ್ನು ಒಪ್ಪಿಕೊಳ್ಳಲು ಅವರಿಗಾಗುತ್ತಿಲ್ಲ.

ಸಂಯುಕ್ತರಂಗ ಒಗ್ಗಟ್ಟಿನಿಂದ ಕಾಂಗ್ರೆಸ್‌ನ ಈ ಕ್ರಮದಿಂದ ಉಂಟಾದ ಸಮಸ್ಯೆಯನ್ನು ಎದುರಿಸಲು ಸಾಧ್ಯವಾಯಿತು ಎಂದು ಕೇಂದ್ರ ಸಮಿತಿ ತೃಪ್ತಿ ವ್ಯಕ್ತಪಡಿಸಿತು. ಐ.ಕೆ.ಗುಜ್ರಾಲ್ ಸರಕಾರದ ರಚನೆ ಬಿಜೆಪಿಯ ವಿರುದ್ಧ ಹೋರಾಡಲು ಹಾಗೂ ಜಾತ್ಯಾತೀತ ಮೌಲ್ಯಗಳನ್ನು ರಕ್ಷಿಸಲು ರಚನೆಗೊಂಡ ಈ ಜಾತ್ಯಾತೀತ ಕೂಟವನ್ನು ಕಾಯ್ದುಕೊಳ್ಳಬೇಕೆಂಬುದು ಸಂಯುಕ್ತ ರಂಗದ ದೃಢ ನಿರ್ಧಾರ ಎಂದಿರುವ ಕೇಂದ್ರ ಸಮಿತಿ ಕಾಂಗ್ರೆಸ್‌ನ ಒತ್ತಡಕ್ಕೆ ಒಳಗಾಗಿ ನೀತಿ ಬಾಹಿರ ರಾಜಿಗಳಿಗೆ ಇಳಿಯದಿದ್ದರೆ ಮಾತ್ರವೇ ಸಂಯುಕ್ತ ರಂಗವನ್ನು ಬಲಪಡಿಸಲು ಸಾಧ್ಯ ಎಂದು ಹೇಳಿದೆ.

ಸಫಲತೆ-ವಿಫಲತೆ

ಸಂಯುಕ್ತ ರಂಗ ಸರಕಾರ ಅಧಿಕಾರ ವಹಿಸಿಕೊಂಡು ಈಗ ಸುಮಾರು ಒಂದು ವರ್ಷವಾಗುತ್ತಿದೆ. ಜಾತ್ಯಾತೀತತೆಯ ರಕ್ಷಣೆ, ಒಕ್ಕೂಟ ತತ್ವವನ್ನು ಬಲಪಡಿಸುವುದು ಹಾಗೂ ಸೂಕ್ತ ಆರ್ಥಿಕ ಕ್ರಮಗಳನ್ನು ಆರಂಭಿಸಿ ಜನರಿಗೆ ಪರಿಹಾರ ಒದಗಿಸುವುದು-ಇವು ಈ ಸರಕಾರ ಜನತೆಗೆ ನೀಡಿದ ವಚನಗಳು. ಸಂಯುಕ್ತ ರಂಗ ಸರಕಾರಕ್ಕೆ ಒಕ್ಕೂಟ ತತ್ವವನ್ನು ಬಲಪಡಿಸುವಲ್ಲಿ, ಜಾತ್ಯಾತೀತ ಮೌಲ್ಯಗಳ ರಕ್ಷಣೆಯಲ್ಲಿ, ಭ್ರಷ್ಟಾಚಾರವನ್ನು ಎದುರಿಸುವಲ್ಲಿ ಹಾಗೂ ನೆರೆದೇಶಗಳೊಂದಿಗೆ ಸಂಬಂಧಗಳನ್ನು ಸುಧಾರಿಸುವ ವಿದೇಶಾಂಗ ನೀತಿ ಧೋರಣೆಗಳಲ್ಲಿ ಸಕಾರಾತ್ಮಕ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗಿದೆ. ಆದರೆ ಆರ್ಥಿಕ ಧೋರಣೆಗಳ ವಿಷಯಗಳಲ್ಲಿ 'ಸಮಾನ ಕನಿಷ್ಟ ಕಾರ್ಯಕ್ರಮ' ದಲ್ಲಿ ನೀಡಿದ ವಚನಗಳನ್ನು ಪೂರೈಸಿ ಜನಗಳಿಗೆ ಪರಿಹಾರ ನೀಡುವಲ್ಲಿ ಸಂಯುಕ್ತ ರಂಗ ಸರಕಾರದ ದಾಖಲೆ ಅತೃಪ್ತಿ ಕರವಾಗಿದೆ ಎಂಬ ಸಿಪಿಐ(ಎಂ) ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ.

ಹಾನಿಕಾರಕ ಆರ್ಥಿಕ ನೀತಿಗಳು

ಆರ್ಥಿಕ ಧೋರಣೆಯ ವಲಯದಲ್ಲಿ ಸಂಯುಕ್ತ ರಂಗ ಸರಕಾರ ಹಿಂದಿನ ಕಾಂಗ್ರೆಸ್ ಸರಕಾರ ಹಾಕಿಕೊಟ್ಟ ದಾರಿಯಲ್ಲೆ ಮುಂದುವರಿಯುತ್ತಿದೆ. ಸಾರ್ವಜನಿಕ ವಲಯದ ಶೇರುಗಳ ಮಾರಾಟದ ಪ್ರಶ್ನೆಯಾಗಲೀ, ರೋಗಗ್ರಸ್ತ ಉದ್ದಿಮೆಗಳ ಪುನರುಜ್ಜೀವನಗೊಳಿಸುವಲ್ಲಿನ ವಿಫಲತೆಯಲ್ಲಾಗಲೀ, ವಿದೇಶಿ ಬಂಡವಾಳಕ್ಕೆ ಮನಬಂದಂತೆ ದೇಶದ ಆರ್ಥಿಕವನ್ನು ತೆರೆಯುವಲ್ಲಾಗಲಿ, ದೊಡ್ಡ ಬಂಡವಾಳಿಗರಿಗೆ ಹಾಗೂ ಸಿರಿವಂತರಿಗೆ ರಿಯಾಯ್ತಿಗಳನ್ನು ನೀಡುವಲ್ಲಾಗಲೀ ಸಂಯುಕ್ತ ರಂಗದ್ದು ಪ್ರತಿಗಾಮಿ ದಾಖಲೆ ಹಾಗೂ ಅದು ದೇಶಕ್ಕೆ ಹಾನಿಕಾರಕವಾದದ್ದು.

ದೊಡ್ಡ ವ್ಯಾಪಾರಸ್ಥರು ಹಾಗೂ ವಿದೇಶಿ ಬಂಡವಾಳಿಗರು ಹಾಡಿ ಹೊಗಳಿದ ಕೇಂದ್ರ ಬಜೆಟ್ ಅಸಮಾನತೆಗಳನ್ನು ಇನ್ನಷ್ಟು ಹೆಚ್ಚಿಸುತ್ತದೆ ಹಾಗೂ ಸಂಪನ್ಮೂಲಗಳನ್ನು ಜನ ಸಾಮಾನ್ಯನಿಂದ ಸಿರಿವಂತರತ್ತ ವರ್ಗಾಯಿಸುತ್ತದೆ. ಇದು ದೇಶೀ ಉದ್ದಿಮೆಗಳಿಗೆ ಅದರಲ್ಲೂ ಮುಖ್ಯವಾಗಿ ಸಣ್ಣ ಪ್ರಮಾಣದ ವಲಯಕ್ಕೆ ಹಾನಿಕಾರಕ. ಎಡ ಪಕ್ಷಗಳು ಒಟ್ಟಾರೆ ಸಂಯುಕ್ತ ರಂಗದ ಅಂಗ ಪಕ್ಷಗಳು ಸ್ವಾವಲಂಬೀ ಆರ್ಥಿಕ ಅಭಿವೃದ್ಧಿಯ ಭರವಸೆ ನೀಡುವ, ಜತೆಗೆ ಜನ ಸಾಮಾನ್ಯರ ಆಕಾಂಕ್ಷೆಗಳನ್ನು ಈಡೇರಿಸುವ ಪರ್ಯಾಯ ಆರ್ಥಿಕ ನೀತಿಗಳ ಅಗತ್ಯದತ್ತ ಸ್ಪಂದಿಸಿಲ್ಲ.

ಕಲ್ಲಿದ್ದಲು ಗಣಿಗಾರಿಕೆಯ ರಾಷ್ಟ್ರೀಕರಣ, ತೈಲ ಉದ್ದಿಮೆಯ ಖಾಸಗೀಕರಣ ಹಾಗೂ ವಿಮಾ ವಲಯವನ್ನು ತೆರೆಯುವ ಸಂಯುಕ್ತ ರಂಗದ ಕ್ರಮಗಳ ಬಗ್ಗೆ ಕೇಂದ್ರ ಸಮಿತಿ ತೀವ್ರ ಆತಂಕ ವ್ಯಕ್ತಪಡಿಸಿದೆ. ಈ ಕ್ರಮಗಳನ್ನು ವಿರೋಧಿಸುವಲ್ಲಿ ಪಕ್ಷ ನೇತೃತ್ವ ವಹಿಸಬೇಕು ಎಂದು ಕೇಂದ್ರ ಸಮಿತಿ ನಿರ್ಧರಿಸಿತು.

ವಚನಗಳನ್ನು ಪಾಲಿಸಿಲ್ಲ

ಐಎಂಎಫ್-ವಿಶ್ವಬ್ಯಾಂಕ್ ಮತ್ತು ಭಾರತದ ದೊಡ್ಡ ಬಂಡವಾಳಿಗರು ಬಯಸುವ ಧೋರಣೆಗಳನ್ನು ಆರಂಭಿಸುವುದಲ್ಲದೇ ಸಂಯುಕ್ತ ರಂಗ ಸರಕಾರ 'ಸಮಾನ ಕನಿಷ್ಟ ಕಾರ್ಯಕ್ರಮ" ದಲ್ಲಿನ ಪ್ರಜಾಸತ್ತಾತ್ಮಕ ಹಾಗೂ ಸಾಮಾಜಿಕ ನ್ಯಾಯದ ಪರವಾದ ತನ್ನ ವಚನಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಒಂದು ಗಂಭೀರ ದೌರ್ಬಲ್ಯವನ್ನು ತೋರ್ಪಡಿಸಿದೆ. ಮತ್ತೆ ಮತ್ತೆ ಭರವಸೆ ನೀಡಿದರೂ, ಮಹಿಳಾ ಮೀಸಲಾತಿ ಮಸೂದೆಯನ್ನು ಸಂಸತ್ತಿನಲ್ಲಿ ಅಡ್ಡಿ ಪಡಿಸಲಾಗಿದೆ. ಕೃಷಿ ಕೂಲಿಕಾರರಿಗೆ ಕೇಂದ್ರೀಯ ಕಾನೂನೊಂದನ್ನು ಸಂಸತ್ತಿನಲ್ಲಿ ಇನ್ನೂ ಮಂಡಿಸಿಯೂ ಇಲ್ಲ. ಲೋಕಪಾಲ್ ಮಸೂದೆಯಲ್ಲಿ ಬಹಳಷ್ಟು ಆಳವಾದ ಕುಂದು-ಕೊರತೆಗಳಿವೆ. ಅದನ್ನೀಗ ಗೃಹ ವ್ಯವಹಾರಗಳ ಸ್ಥಾಯೀ ಸಮಿತಿ ತಿದ್ದುಪಡಿ ಮಾಡಿದ್ದು ಸರಕಾರ ಸರಿಯಾದ ರೀತಿಯಲ್ಲಿ ಅದರ ಮರು ಕರಡು ತಯಾರಿಸಬೇಕಾಗಿದೆ. ಪ್ರಸಾರ ಮಸೂದೆ ಒಂದು ಸ್ವಾಯತ್ತ ಸಾರ್ವಜನಿಕ ಪ್ರಸಾರ ಸೇವೆಯನ್ನು ರಚಿಸುವ ಉದ್ದೇಶವನ್ನು ಈಡೇರಿಸುತ್ತಿಲ್ಲ. ಕಡು ಬಡತನದಲ್ಲಿರುವ ವಿಭಾಗಗಳಿಗೆ ನೆರವಾಗಬಹುದಾಗಿದ್ದ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಹೊಸ ಯೋಜನೆ ಇನ್ನೂ ಆರಂಭವಾಗಿಲ್ಲ. ಆದರೆ ಅಷ್ಟರಲ್ಲೇ ಒಟ್ಟಾರೆಯಾಗಿ ಆಹಾರ ಧಾನ್ಯಗಳ ನೀಡಿಕೆಯನ್ನು ತೀವ್ರ ರೀತಿಯಲ್ಲಿ ಕಡಿತ ಮಾಡಲಾಗಿದೆ. ಇದು ಇಡೀ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನೇ ಕುಂಠಿತಗೊಳಿಸುತ್ತದೆ.

ರಾಷ್ಟ್ರೀಯ ಸಾಮೂಹಿಕ ಪ್ರಚಾರಾಂದೋಲನ

ಸಂಯುಕ್ತ ರಂಗದ ಚಾಲನಾ ಸಮಿತಿಯಲ್ಲಿ ಹಾಗೂ ಸಂಸತ್ತಿನಲ್ಲಿ ಮತ್ತೆ-ಮತ್ತೆ ಪ್ರಯತ್ನಸಿದರೂ ಸಮಾನ ಕನಿಷ್ಟ ಕಾರ್ಯಕ್ರಮದಲ್ಲಿ ನೀಡಿದ ವಚನಗಳನ್ನು ಪಾಲಿಸದಿರುವ ಬಗ್ಗೆ ಸಿಪಿಐ(ಎಂ) ಕೇಂದ್ರ ಸಮಿತಿ ಕಟು ಟೀಕೆ ಮಾಡಿದೆ.

ಆದ್ದರಿಂದ ಕೇಂದ್ರ ಸಮಿತಿ ಈ ವಚನಗಳನ್ನು ಈಡೇರಿಸಲು ಆಗ್ರಹಪಡಿಸುವಂತೆ ಹಾಗೂ ದುಡಿಯುವ ಜನಗಳ ಮತ್ತು ದೇಶದ ಸ್ವಾವಲಂಬನೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಕ್ರಮಗಳನ್ನು ವಿರೋಧಿಸುವಂತೆ ಜನಗಳನ್ನು ಅಣಿನೆರಸಲು ಒಂದು ಸಾಮೂಹಿಕ ಪ್ರಚಾರಾಂದೋಲನವನ್ನು ಆರಂಭಿಸಲು ಕೇಂದ್ರ ಸಮಿತಿ ಜುಲೈ 15 ರಿಂದ 31 ರ ವರೆಗೆ ಎರಡು ವಾರಗಳ ಒಂದು ರಾಷ್ಟ್ರೀಯ ಪ್ರಚಾರಾಂದೋಲನ ನಡೆಸಲು ಕರೆ ನೀಡಿದೆ. ಈ ಪ್ರಚಾರಾಂದೋಲನ ಈ ಕೆಳಗಿನ ಬೇಡಿಕೆಗಳ ಮೇಲೆ ಗಮನ ಕೇಂದ್ರೀಕರಿಸುತ್ತದೆ.

1. *ಲಾಭಕರ ಸಾರ್ವಜನಿಕ ವಲಯದ ಉದ್ದಿಮೆಗಳ ಹಾಗೂ ಮಹತ್ವದ ಮತ್ತು ಪ್ರಧಾನ ವಲಯಗಳಲ್ಲಿರುವ ಉದ್ದಿಮೆಗಳ ಶೇರುಗಳ ಮಾರಾಟದ ಮೂಲಕ ಸಾರ್ವಜನಿಕ ವಲಯ ವನ್ನು ಕಳಚಹಾಕುವುದನ್ನು ನಿಲ್ಲಿಸಬೇಕು.*
2. *ಸಾರ್ವಜನಿಕ ಮತ್ತು ಖಾಸಗೀ ವಲಯಗಳಲ್ಲಿ ರೋಗಗ್ರಸ್ತ ಘಟಕಗಳನ್ನು ಪುನರುಜ್ಜೀವನಗೊಳಿಸಲು ತಕ್ಷಣ ಕ್ರಮ ಕೈಗೊಳ್ಳಬೇಕು.*
3. *ಒಟ್ಟಾರೆಯಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಗೊಳಿಸಬೇಕು. ಹಾಗೂ ಬಡತನದ ರೇಖೆಯ ಕೆಳಗಿರುವ ಜನರಿಗೆ ಸಹಾಯಧನದ ಬೆಲೆಗಳ ಯೋಜನೆಯನ್ನು ಪರಿಣಾಮಕಾರಿ ಯಾಗಿ ಜಾರಿಗೆ ತರಬೇಕು.*
4. *ವಿಮಾ ವಲಯವನ್ನು ತೆರೆಯುವುದನ್ನು ನಿಲ್ಲಿಸಬೇಕು ಹಾಗೂ ವಿಮಾ ನಿಯಂತ್ರಣಾ ಪ್ರಾಧಿಕಾರ ಮಸೂದೆಯನ್ನು ಹಿಂದಕ್ಕೆ ಪಡೆದುಕೊಳ್ಳಬೇಕು.*
5. *ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಇಡುವ ಹಣದ ಪ್ರಮಾಣವನ್ನು ಹೆಚ್ಚಿಸಬೇಕು. ಕೃಷಿ ಕಾರ್ಮಿಕರ ಪ್ರಯೋಜನಕ್ಕೆ ಕೃಷಿ ಕಾರ್ಮಿಕ ಮಸೂದೆಯನ್ನು ಅಂಗೀಕರಿಸಬೇಕು.*
6. *ಸಂಸತ್ತಿನ ಮುಂದಿರುವ ಮಹಿಳಾ ಮೀಸಲಾತಿ ಮಸೂದೆಯನ್ನು ಅಂಗೀಕರಿಸಬೇಕು.*
7. *ಗುಪ್ತ ಮತದಾನದ ಮೂಲಕ ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡುವ ಶಾಸನವನ್ನು ತರಬೇಕು.*
8. *ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ನಿಗ್ರಹಿಸಲು ಪರಿಷ್ಕೃತ ಲೋಕಪಾಲ್ ಮಸೂದೆಯನ್ನು ಅಂಗೀಕರಿಸಬೇಕು.*

ಈ ಬೇಡಿಕೆಗಳ ಪಟ್ಟಿಯ ಮೇಲೆ ಆ ಹದಿನೈದು ದಿನಗಳಲ್ಲಿ ಎಲ್ಲಾ ರಾಜ್ಯಗಳಲ್ಲಿ ಇಡೀ ಪಕ್ಷ ಪ್ರಚಾರಾಂದೋಲನ ನಡೆಸುತ್ತದೆ. ಪ್ರಮುಖ ಕೇಂದ್ರಗಳಲ್ಲಿ ರಾಜ್ಯಮಟ್ಟದ ರ್‍ಯಾಲಿಗಳನ್ನು ಹಾಗೂ ಸಾರ್ವಜನಿಕ ಸಭೆಗಳನ್ನೂ ನಡೆಸಲಾಗುವುದು. ಇವುಗಳನ್ನುದ್ದೇಶಿಸಿ ಪಕ್ಷದ ರಾಷ್ಟ್ರೀಯ ಮುಖಂಡರು ಮಾತನಾಡುವರು.

ಬಿಜೆಪಿ ತಂತ್ರಗಳು

ಬಿಜೆಪಿ ಉತ್ತರ ಪ್ರದೇಶದಲ್ಲಿ ಒಂದು ಸಮ್ಮಿಶ್ರ ಸರಕಾರ ರಚಿಸಲು ಬಿಎಸ್‌ಪಿಯೊಂದಿಗೆ ಒಂದು ನೀತಿಬಾಹಿರ ಮೈತ್ರಿ ಮಾಡಿಕೊಂಡಿತು. ಇಂತಹ ಒಂದು ಸಂದರ್ಭಸಾಧಕ ಮೈತ್ರಿಯಲ್ಲಿ ಅಡಕವಾಗಿರುವ ವೈರುಧ್ಯಗಳು ಈಗ ಮುಖ್ಯಮಂತ್ರಿಗಳು ಮನಬಂದಂತೆ ಕೈಗೊಳ್ಳುತ್ತಿರುವ ನಿರ್ಧಾರಗಳ ಮೂಲಕ ಎಲ್ಲರ ಎದುರು ಬರುತ್ತಿದೆ. ಸಮಾಜವಾದಿ ಪಕ್ಷ ಸಕ್ರಿಯ ಕಾರ್ಯಕರ್ತರ ಕೊಲೆಗಳು ರಾಜ್ಯದಲ್ಲಿನ ಪ್ರಮುಖ ವಿರೋಧಿ ಶಕ್ತಿಯನ್ನು ಸದೆ ಬಡಿಯುವ ಲೆಕ್ಕಚಾರದಿಂದ ಕೂಡಿವೆ.

ಕೇಂದ್ರದಲ್ಲಿನ ಬಿಕ್ಕಟ್ಟಿನ ಪ್ರಯೋಜನ ಪಡೆಯಲು ವಿಫಲವಾದ ಬಿಜೆಪಿ ಈಗ ಪ್ರಾದೇಶಿಕ ಪಕ್ಷಗಳನ್ನು ಹೊಂದಿಸಿಕೊಳ್ಳಲು ಒಂದು ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗವನ್ನು ರಚಿಸುವ ವಿಚಾರದೊಂದಿಗೆ ಆಟವಾಡುತ್ತಿದೆ. ಈ ತಂತ್ರ ವಿಫಲವಾಗುವುದು ಖಂಡಿತ. ಏಕೆಂದರೆ ಬಿಜೆಪಿಯ ಹಿಂದುತ್ವ ಒಂದು ನೈಜ ಒಕ್ಕೂಟ ತತ್ವ ಹಾಗೂ ಪ್ರಾದೇಶಿಕ ವೈವಿಧ್ಯತೆಗೆ ಸಂಪೂರ್ಣ ವಿರುದ್ಧವಾದದ್ದು.

ಈ ವಿಷಯದಲ್ಲಿ ಬಿಜೆಪಿಯ ತಂತ್ರಗಳನ್ನು ಅರಿತು ದೇಶದ ವಿವಿಧ ಭಾಗಗಳಲ್ಲಿ ಒಂದು ಕೋಮುವಾದಿ ಉದ್ದೇಶದ ಪ್ರಶ್ನೆಗಳನ್ನು ಎತ್ತಿಕೊಳ್ಳಲು ಬಿಜೆಪಿ-ಆರ್‌ಎಸ್‌ಎಸ್ ಕೂಟ ಮುಂದುವರಿಸುತ್ತಿರುವ ಪ್ರಯತ್ನಗಳನ್ನು ಎದುರಿಸಲು ಜಾಗರೂಕರಾಗಿರಬೇಕು. ಎಂದು ಕೇಂದ್ರ ಸಮಿತಿ ಎಲ್ಲಾ ಪ್ರಜಾಪ್ರಭುತ್ವ ಹಾಗೂ ಜಾತ್ಯಾತೀತ ಶಕ್ತಿಗಳಿಗೆ ಕರೆ ನೀಡಿದೆ.

ಬಿಹಾರದ ಮೇವು ಹಗರಣ

950 ಕೋಟಿ ರೂ.ಗಳ ಪಶು ಸಂಗೋಪನೆ ಇಲಾಖೆಯ ಮೇವು ಹಗರಣದಲ್ಲಿ ಸಿಲುಕಿಕೊಂಡಿರುವ ಎಲ್ಲಾ ಸಾರ್ವಜನಿಕ ಅಧಿಕಾರಸ್ಥರು ರಾಜೀನಾಮೆ ನೀಡಬೇಕೆಂದು ಕೇಂದ್ರ ಸಮಿತಿ ಆಗ್ರಹಪಡಿಸಿದೆ. ಈ ಹಗರಣದಲ್ಲಿ ಮುಖ್ಯ ಮಂತ್ರಿಗಳು ಮತ್ತು ಅವರ ಸಚಿವ ಸಂಪುಟದ ಇಬ್ಬರು ಸಹೋದ್ಯೋಗಿಗಳ ಮೇಲೆ ಕಾನೂನುಕ್ರಮ ಕೈಗೊಳ್ಳಲು ಸಿಬಿಐ ರಾಜ್ಯಪಾಲರ ಮಂಜೂರಾತಿ ಕೇಳಿದೆ. ಇವರೆಲ್ಲಾ ಅಧಿಕಾರದಿಂದ ಇಳಿದು ನ್ಯಾಯಾಲಯದ ತೀರ್ಪನ್ನು ಕಾಯಬೇಕು. ಇದರಲ್ಲಿ ವಿಳಂಬ ಮಾಡಿದರೆ ಅದು ಬಿಹಾರದಲ್ಲಿ ಮತ್ತು ರಾಷ್ಟ್ರಮಟ್ಟದಲ್ಲಿ ಜನತಾದಳದ ಪ್ರತಿಷ್ಠೆಗೆ ಕುಂದು ತರುತ್ತದೆ. ಈ ವಿಷಯದಲ್ಲಿ ರಾಜ್ಯಪಾಲರು ಕಾಲ ತಳ್ಳುವ ನಿಲುವು ತಳೆಯದೆ ವಿಳಂಬ ಮಾಡದೆ ಮಂಜೂರಾತಿ ನೀಡಬೇಕು.

ಸಾರ್ವಜನಿಕ ಅಧಿಕಾರದಲ್ಲಿರುವ ಜನ ಸಾರ್ವಜನಿಕ ಸೇವಕರು ಭ್ರಷ್ಟಾಚಾರದ ಆಪಾದನೆಗೆ ಒಳಗಾದಾಗ ಪಕ್ಷ-ಭೇದವಿಲ್ಲದೆ ತಮ್ಮ ಅಧಿಕಾರದಿಂದ ಕೆಳಗಿಳಿಯಬೇಕು ಎಂಬ ಪಕ್ಷದ ನೀತಿ ಬದ್ಧ ನಿಲುವನ್ನು ಕೇಂದ್ರ ಸಮಿತಿ ಪುನರುಚ್ಛರಿಸಿತು.

ಒರಿಸ್ಸಾದ ಬರ ಪರಿಸ್ಥಿತಿ

ಒರಿಸ್ಸಾದ ಬರ ಪೀಡಿತ ಪ್ರದೇಶಗಳಲ್ಲಿ ಜನಗಳ ನರಳಾಟಗಳ ಬಗ್ಗೆ ಕೇಂದ್ರ ಸಮಿತಿ ಆಳವಾದ ಆತಂಕ ವ್ಯಕ್ತಪಡಿಸಿತು. ರಾಜ್ಯ ಸರಕಾರ ಬರದ ತೀವ್ರತೆಯನ್ನು ಸರಿಯಾಗಿ ಅಂದಾಜು ಮಾಡಿಲ್ಲ ಹಾಗೂ ಪರಿಸ್ಥಿತಿಯನ್ನು ಎದುರಿಸುವಲ್ಲಿ ಅದು ಶೋಚನೀಯವಾಗಿ ವಿಫಲವಾಗಿದೆ. ಕೇಂದ್ರ ಸರಕಾರ ಸಾಕಷ್ಟು ಪ್ರಮಾಣದಲ್ಲಿ ಸ್ಪಂದಿಸಿಲ್ಲ. ಕೇಂದ್ರ ಸರಕಾರ ಸಾಕಷ್ಟು ಹಣ ಒದಗಿಸುವುದು ಹಾಗೂ ರಾಜ್ಯ ಸರಕಾರ ತಕ್ಷಣವೇ ಬರಪೀಡಿತ ಪ್ರದೇಶಗಳಲ್ಲಿ ಆಳ ಕೊಳವೆ ಬಾವಿಗಳನ್ನು ತೋಡಿಸುವ ಜವಾಬ್ದಾರಿ ವಹಿಸುವುದು ಅತ್ಯವಶ್ಯಕ. ಮತ್ತೆ ಮತ್ತೆ ಈ ರೀತಿ ಬರ ಪರಿಸ್ಥಿತಿ ಉಂಟಾಗುವುದನ್ನು ತಡೆಯಲು ದೀರ್ಘಕಾಲದ ಕ್ರಮಗಳ ಬಗ್ಗೆ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರ ಜಂಟಿಯಾಗಿ ಚರ್ಚಿಸಬೇಕು.

ಸರಿಪಡಿಕೆ ಆಂದೋಲನ

ಪಕ್ಷದೊಳಗಿನ ಕೊರತೆಗಳನ್ನು, ಕರ್ತವ್ಯಗಳನ್ನು ವಿರೋಧಿಸಿ ಪಕ್ಷದ ನಿರ್ವಹಣೆಯನ್ನು ಸುವ್ಯವಸ್ಥಿತಗೊಳಿಸಲು ನಡೆಯುತ್ತಿರುವ ಸರಿಪಡಿಕೆ ಆಂದೋಲನದ ಬಗ್ಗೆ ಒಂದು ವರದಿಯನ್ನು ಕೇಂದ್ರ ಸಮಿತಿ ಆರಿಸಿತು. ಎಲ್ಲಾ ರಾಜ್ಯ ಸಮಿತಿಗಳಲ್ಲಿ ಸರಿಪಡಿಕೆ ಆಂದೋಲನ ಕುರಿತ ಚರ್ಚೆಗಳು ಮುಗಿದಿವೆ. ಈಗ ಅದನ್ನು ಜಿಲ್ಲಾ ಹಾಗೂ ಕೆಳಗಿನ ಮಟ್ಟಗಳಲ್ಲಿ ನಡೆಸಲಾಗುತ್ತಿದೆ.

ಪಕ್ಷದ ಕಾರ್ಯಕ್ರಮವನ್ನು ಸಮಕಾಲಿಕಗೊಳಿಸುವುದು

15ನೇ ಮಹಾಧಿವೇಶನದ ನಿರ್ಣಯದ ಪ್ರಕಾರ ಪಕ್ಷದ ಕಾರ್ಯಕ್ರಮವನ್ನು ಸಮಕಾಲಿಕಗೊಳಿಸುವ ಬಗ್ಗೆ ಒಂದು ಸಮಿತಿಯನ್ನು ರಚಿಸಲು ನಿರ್ಧರಿಸಿತು. ಈ ಸಮಿತಿಯಲ್ಲಿ ಹರ್ಕಿಶನ್ ಸಿಂಗ್ ಸುರ್ಜಿತ್, ಇ.ಎಂ.ಎಸ್.ನಂಬೂದರಿ ಪಾಡ್, ಜ್ಯೋತಿಬಸು, ಪಿ.ರಾಮಚಂದ್ರನ್, ಸೀತಾರಾಂ ಯೆಚೂರಿ ಹಾಗೂ ಅನಿಲ್ ಬಿಸ್ವಾಸ್ ಇರುತ್ತಾರೆ. ಸಮಕಾಲಿಕಗೊಳಿಸಿದ ಕಾರ್ಯಕ್ರಮದ ಕರಡನ್ನು ತಯಾರಿಸುವ ಕೆಲಸವನ್ನು ಈ ಸಮಿತಿಗೆ ಒಪ್ಪಿಸಲಾಗಿದ್ದು ಕೇಂದ್ರ ಸಮಿತಿಗೆ ಅದನ್ನು ಸಲ್ಲಿಸಬೇಕಾಗಿದೆ.

16ನೇ ಮಹಾಧಿವೇಶನ

ಕೇಂದ್ರ ಸಮಿತಿ ಪಕ್ಷದ 16ನೇ ಮಹಾಧಿವೇಶನವನ್ನು ಕಲ್ಕತ್ತೆಯಲ್ಲಿ ಫೆಬ್ರವರಿ 1998ರಲ್ಲಿ ನಡೆಸಲು ನಿರ್ಧರಿಸಿತು. ಕಮ್ಯುನಿಸ್ಟ್ ಪ್ರಣಾಳಿಕೆಯ ಪ್ರಕಟಣೆಯ 150ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಈ ಮಹಾಧಿವೇಶನ ಕರೆದಿದೆ. ಮಹಾಧಿವೇಶನದ ಮೊದಲು ಎಲ್ಲಾ ಹಂತಗಳಲ್ಲಿ ಪಕ್ಷದ ಸಮ್ಮೇಳನಗಳನ್ನು ನಡೆಸಲು ಒಂದು ವೇಳಾಪಟ್ಟಿಯನ್ನು ಕೇಂದ್ರ ಸಮಿತಿ ಸಿದ್ಧಪಡಿಸಿತು.

ಬೆಂಗಳೂರು ಸಮಾವೇಶ ಕರೆ

ಸಾರ್ವಜನಿಕ ವಲಯವನ್ನು ಉಳಿಸಲು, ಸತ್ವಯುತಗೊಳಿಸಲು ಐಕ್ಯ ಹೋರಾಟ

"ಭಾರತದಲ್ಲಿ ಸಾರ್ವಜನಿಕ ವಲಯಕ್ಕೆ ಬೆದರಿಕೆ ಹಾಕಿರುವ ಧೋರಣೆಗಳನ್ನು ಹಿಮ್ಮೆಟ್ಟಿಸಲು ಎಲ್ಲಾ ಕಾರ್ಮಿಕ ಸಂಘಗಳು ಒಟ್ಟಾರೆ ಹೋರಾಡಬೇಕು, ವಿಶ್ವ ಮಟ್ಟದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ, ಅದೇ ರೀತಿ ಉದ್ದಿಮೆ, ವಲಯ ಹಾಗೂ ಕೈಗಾರಿಕಾ ಮಟ್ಟದಲ್ಲೂ ಈ ಧೋರಣೆಗಳನ್ನು ವಿರೋಧಿಸುವುದರೊಂದಿಗೇ ಅವನ್ನು ವಿಶ್ಲೇಷಿಸಿ ಪ್ರತಿಹಂತದಲ್ಲೂ ಪರ್ಯಾಯಗಳನ್ನು ಕೂಡಾ ಕಾರ್ಮಿಕ ಸಂಘಗಳು ಸೂಚಿಸಬೇಕಾಗುತ್ತದೆ. ಎಲ್ಲಾ ಕಾರ್ಮಿಕ ಸಂಘಗಳ ಸರ್ವವ್ಯಾಪಿ ಐಕ್ಯತೆಯ ಮೂಲಕ ಮಾತ್ರವೇ ಸಾರ್ವಜನಿಕ ವಲಯ ಶೇರುಗಳ ಮಾರಾಟ, ರೋಗಗ್ರಸ್ಥತೆ ಹಾಗೂ ಟೇಕ್-ಓವರ್‌ಗಳ ವಿರುದ್ಧ ಹೋರಾಟ ನಡೆಸಿ ಸಾರ್ವಜನಿಕ ವಲಯವನ್ನು ಉಳಿಸಿಕೊಳ್ಳಲು ಸಾಧ್ಯ"

-ಇದು ಮೇ20 ರಂದು ಬೆಂಗಳೂರಿನಲ್ಲಿ ನಡೆದ ರೋಗಗ್ರಸ್ತತೆ, ಶೇರು ಹಿಂಪಡೆತ ಹಾಗೂ ಟೇಕ್- ಓವರ್‌ಗಳ ವಿರುದ್ಧ ನಡೆದ ಕಾರ್ಮಿಕ ಸಂಘಗಳ ಸಮಾವೇಶದಲ್ಲಿ ಮೂಡಿಬಂದ ಒಮ್ಮತದ ಅಭಿಪ್ರಾಯ. ಸಿಐಟಿಯು ಇದನ್ನು ಏರ್ಪಡಿಸಿತ್ತು. ಸಾರ್ವಜನಿಕ ವಲಯದಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ಕಾರ್ಮಿಕ ಸಂಘಗಳಿಗೆ ಇದರಲ್ಲಿ ಭಾಗವಹಿಸಲು ಆಹ್ವಾನ ನೀಡಲಾಗಿತ್ತು.

ಚರ್ಚೆಯನ್ನು ಆರಂಭಿಸುತ್ತಾ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್‌ರವರು ಭಾರತದ ಸ್ವಾತಂತ್ರ್ಯದ ಬೆನ್ನೆಲುಬಾದ ಸಾರ್ವಜನಿಕ ವಲಯದ ಮೇಲೆ ವಿಶ್ವ ಬಂಡವಾಳಶಾಹಿಗಳು ಗುರಿಯಿಟ್ಟಿದ್ದಾರೆ ಎಂದು ವಿವರಿಸಿದರು. ಇದನ್ನು ಸಾಧ್ಯವಾಗಿಸಲು ಅವನ್ನು ರೋಗಗ್ರಸ್ತಗೊಳಿಸಲಾಗುತ್ತಿದೆ. ಅವುಗಳ ಶೇರುಗಳನ್ನು ಮಾರಾಟ ಮಾಡಲಾಗುತ್ತಿದೆ. ಸಾರ್ವಜನಿಕ ವಲಯದ ಉದ್ದಿಮೆಗಳನ್ನು ವಹಿಸಿಕೊಂಡು (ಟೇಕ್-ಓವರ್) ಇದರಲ್ಲಿ ಕೊನೆಯ ಹಂತ ಉದಾಹರಣೆಗೆ ಬಿಇಎಂಎಸ್‌ನ ರೇಲ್ ಕೋಚ್ ವಿಭಾಗದಲ್ಲಿ ವಿದೇಶೀ ಬಹುರಾಷ್ಟ್ರೀಯ ಕಂಪೆನಿ ಜಿಐಸಿ-ಅಲ್ಸ್ತೋಮ್‌ನೊಂದಿಗೆ ಜಂಟಿ ಉದ್ದಿಮೆ ಇಂತಹ ಒಂದು ಪ್ರಯತ್ನದ ಭಾಗ. ರೋಗಗ್ರಸ್ತತೆ, ಶೇರು ಹಿಂಪಡೆತ ಹಾಗೂ ಟೇಕ್-ಓವರ್‌ಗಳ ವಿರುದ್ಧ ಒಂದು ಸಾರ್ವತ್ರಿಕ ಹೋರಾಟ ಇನ್ನೂ ಮೂಡಿಬಂದಿಲ್ಲ. ಆದ್ದರಿಂದ ಸಿಐಟಿಯು ಇಂತಹ ಒಂದು ಸಮಾವೇಶ ನಡೆಸಲು ಮುತುವರ್ಜಿ ವಹಿಸಿತು ಎಂದು ವಿ.ಜೆ.ಕೆ.ನಾಯರ್ ತಿಳಿಸಿದರು. ಎಲ್ಲಾ ಕಾರ್ಮಿಕ ಸಂಘಟನೆಗಳನ್ನು ಒಟ್ಟಿಗೆ ತಂದು ಚರ್ಚೆಗೆ ಒಂದು ವೇದಿಕೆ ಒದಗಿಸಿ ಆ ಮೂಲಕ ಹೋರಾಟವನ್ನು ಮುಂದುವರಿಸಲು ಒಂದು ಸಂಘಟನೆ ಮೂಡಿಬರುವಂತಾಗಬೇಕೆಂದು ಸಿಐಟಿಯುನ ಉದ್ದೇಶ ಎಂದು ಅವರು ಹೇಳಿದರು.

ಕರ್ನಾಟಕದಲ್ಲಿ ಸಾರ್ವಜನಿಕ ವಲಯದ ಬೆಳವಣಿಗೆಯ ಇತಿಹಾಸವನ್ನು ಗುರುತಿಸುತ್ತಾ ವಿ.ಜೆ.ಕೆ.ನಾಯರ್ ಕರ್ನಾಟಕ ಸಾರ್ವಜನಿಕ ವಲಯದ ಮೂಲಕ ಕೈಗಾರಿಕಾ ಅಭಿವೃದ್ಧಿಯ ಒಂದು ಪಥ ಪ್ರದರ್ಶನವಾಗಿತ್ತು ಎಂದರು. ಸ್ವಾತಂತ್ರ್ಯ ನಂತರ ಐಟಿಐ, ಹೆಚ್‌ಎಂಟಿ, ಬಿಇಎಲ್, ಹೆಚ್‌ಎಎಂ, ಬಿಇಎಂಎಲ್ ಮತ್ತು ಬಿಹೆಚ್‌ಇಎಲ್ ಸ್ಥಾಪನೆಗೊಂಡು ಬೆಂಗಳೂರು ಇಂದಿನ ಸ್ವರೂಪ ಪಡೆಯುವಂತಾಯಿತು.

ಈ ಎಲ್ಲಾ ಉದ್ದಿಮೆಗಳು ತಂತಮ್ಮ ಕ್ಷೇತ್ರಗಳಲ್ಲಿ ಬೆಳೆದರೂ ತಂತ್ರಜ್ಞಾನದಲ್ಲಿ ನಿಜವಾದ ಮುನ್ನೆಗೆತ ಸಾಧ್ಯವಾಗಲಿಲ್ಲ. ಏಕೆಂದರೆ ಧೋರಣೆಗಳು ಇನ್ನೂ ವಿದೇಶಿ ಬಂಡವಾಳದ ಪಕ್ಷಪಾತಿಯಾಗಿಯೇ ಇತ್ತು.

ಉದಾರೀಕರಣದ ನಂತರದ ಅವಧಿಯಲ್ಲಂತೂ ಈ ಉದ್ದಿಮೆಗಳನ್ನು ರೋಗಗ್ರಸ್ತಗೊಳಿಸಲು ಉದ್ದೇಶಪೂರ್ವಕ ಪ್ರಯತ್ನ ನಡೆಸಲಾಗುತ್ತಿದೆ. ಆಮದನ್ನು ಉದಾರೀಕರಿಸಿ, ಸಾರ್ವಜನಿಕ ವಲಯ ನಷ್ಟ ಅನುಭವಿಸುವಂತಹ ರೀತಿಯಲ್ಲೇ ಉದ್ದೇಶಪೂರ್ವಕವಾಗಿ ಬೆಲೆಗಳನ್ನು ನಿರ್ಧರಿಸುವ ಮೂಲಕ, ಹಣಕಾಸು ನೆರವು ನೀಡದಿರುವ ಮೂಲಕ, ಬ್ಯಾಂಕ್ ಗ್ಯಾರಂಟಿಗಳನ್ನು ನಿರಾಕರಿಸಿ ಹೀಗೆ ಮಾಡಲಾಗುತ್ತಿದೆ. ಇದರೊಡನೆ ದುರಾಡಳಿತವೂ ಉದ್ದಿಮೆಗಳನ್ನು ರೋಗಗ್ರಸ್ತಗೊಳಿಸುತ್ತಿದೆ. ಸಾರ್ವಜನಿಕ ವಲಯದ ಶೇರುಗಳ ಮಾರಾಟ ಆರಂಭದಲ್ಲಿ ಅದರ ನಿಜವಾದ ಬೆಲೆಯ ಅರ್ಧ ಬೆಲೆಯಲ್ಲಿ ಮಾರಾಟ ಮಾಡಲಾಯಿತು. ಈಗ ಶೇರು ಪಡೆದ ಆಯೋಗ 74% ಶೇರುಗಳನ್ನು ಖಾಸಗಿ ಸಂಸ್ಥೆಗಳಿಗೆ ಮಾರಬೇಕು ಎಂದಿದೆ ಎಂದು ವಿ.ಜೆ.ಕೆ. ನಾಯರ್ ಹೇಳಿದರು.

ಚರ್ಚೆಯಲ್ಲಿ ಭಾಗವಹಿಸುತ್ತಾ ಪಿಡಬ್ಲ್ಯೂಟಿಯುಸಿ ಯ ಅಧ್ಯಕ್ಷರಾದ ಆರ್.ಎನ್.ಗೋಡ್‌ಬೋಳೆಯವರು ಕಾರ್ಮಿಕರು ಎರಡನೇ ಸ್ವಾತಂತ್ರ್ಯ ಸಮರ ಆರಂಭಿಸಿದ್ದಾರೆ ಎಂಬ ಪ್ರಧಾನ ಮಂತ್ರಿಗಳ ಮಾತನ್ನು ನೆನಪಿಸುತ್ತಾ ಸಾರ್ವಜನಿಕ ವಲಯವನ್ನು ಬಾಧಿಸುತ್ತಿರುವ ಕಾಯಿಲೆಗಳ ಬಗ್ಗೆ ವಿವರವಾಗಿ ಮಾತನಾಡಿದರು. ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಹಣಕಾಸು ಒದಗಿಸಲು ಒಂದು ಪ್ರತ್ಯೇಕ ಸಾರ್ವಜನಿಕ ವಲಯದ ಬ್ಯಾಂಕ್ ಇರಬೇಕು ಎಂದು ಅವರು ಹೇಳಿದರು.

ಬಾಬುಮ್ಯಾಥ್ಯೂ ಮಾತನಾಡುತ್ತಾ ಕಾರ್ಮಿಕ ಆಂದೋಲನದಲ್ಲಿ ಕುಂದು ಕೊರತೆಗಳು, ದೌರ್ಬಲ್ಯಗಳು ಇವೆ ಎಂದರು. ವಿಮಾ ನೌಕರರ ಸಂಘದ ಸುರೇದ್ರ ರಾವ್, ಐಟಿಸಿ ಅಧಿಕಾರಿಗಳ ಸಂಘದ ಮಂಜುನಾಥಸ್ವಾಮಿ, ಐಟಿಐ ನೌಕರರ ಸಂಘದ ಗೋಪಾಲ್, ಹೆಚ್‌ಎಂಕೆಪಿಯ ಮೈಕೆಲ್ ಫರ್ನಾಂಡೀಸ್ ಕಾರ್ಮಿಕ ವರ್ಗದ ಐಕ್ಯ ಹೋರಾಟದ ಅಗತ್ಯವನ್ನು ಒತ್ತಿ ಹೇಳಿದರು. ವಿಮಾ ನೌಕರರ ಸಂಘದ ಎನ್.ನಾಗರಾಜ್, ಬಿಇಎಂಎಲ್‌ನ ವಿಜೇಂದ್ರರಾವ್, ಬಿಇಎಲ್‌ನ ನಂಬೀಸನ್, ಬಿಹೆಚ್‌ಇಎಲ್‌ನ ಮಹದೇವಪ್ಪ ಹಾಗೂ ಕರ್ನಾಟಕ ಟೆಲಿಕಾಂನ ತಿಪ್ಪೇಸ್ವಾಮಿ ತಂತಮ್ಮ ಸಂಸ್ಥೆಗಳ ವಿವಿಧ ಸಮಸ್ಯೆಗಳ ಬಗ್ಗೆ ಮಾತನಾಡಿದರು.

ಎಸ್.ಸೂರ್ಯನಾರಾಯಣ ರಾವ್ (ಸಿಐಟಿಯು), ಬಾಬು ಮ್ಯಾಥ್ಯೂ (ಎಐಟಿಯುಸಿ), ಆರ್.ಎಸ್.ಗೋಡ್‌ಬೋಳೆ (ಪಿಡಬ್ಲ್ಯುಟಿಯುಸಿ), ಟಿ.ಸುರೇಂದ್ರರಾವ್(ಎಐಐಇಎ), ಮಂಜುನಾಥ ಸ್ವಾಮಿ(ಐಟಿಐಒಎ), ಮೈಕೇಲ್ ಫರ್ನಾಂಡೀಸ್(ಹೆಚ್‌ಎಂಕೆಪಿ) ಇದ್ದ ಅಧ್ಯಕ್ಷ ಮಂಡಳಿ ಸಮಾವೇಶದ ಕಲಾಪಗಳನ್ನು ನಡೆಸಿಕೊಟ್ಟಿತು.

ಅಧ್ಯಕ್ಷ ಮಂಡಳಿಯ ಪರವಾಗಿ ಮಾತನಾಡುತ್ತಾ ಸೂರ್ಯನಾರಾಯಣ ರಾವ್ ಸಾರ್ವಜನಿಕ ವಲಯದ ಕಾರ್ಮಿಕರು ನಿದ್ದೆಯಿಂದ ಎಚ್ಚೆತ್ತು ಸಾರ್ವಜನಿಕ ವಲಯದ ಮೇಲಿನ ಧಾಳಿಗಳ ವಿರುದ್ಧ ಪ್ರಚಾರಾಂದೋಲನ ನಡೆಸಬೇಕು ಎಂದು ಕರೆ ನೀಡಿದರು. ಸಾಮಾಜಿಕ ಭದ್ರತಾ ಕ್ರಮಗಳಲ್ಲಿ ಕಡಿತದ ವಿರುದ್ಧ ವಿಶ್ವಾದ್ಯಂತ ಕಾರ್ಮಿಕರ ಹೋರಾಟಗಳು ಎದ್ದು ಬರುತ್ತಿರುವುದನ್ನು ನೆನಪಿಸಿದ ಸೂರಿಯವರು ನಿರ್ದಿಷ್ಟವಾಗಿ ದಕ್ಷಿಣ ಕೊರಿಯಾದ ಕಾರ್ಮಿಕರ ಹೋರಾಟವನ್ನು ಪ್ರಸ್ತಾಪಿಸಿದರು. ರಾಜಕೀಯ ವಿಚಾರಗಳ ಭೇದ ಭಾವಗಳನ್ನು ಬದಿಗೊತ್ತಿ ತಮ್ಮ ಮೇಲಿನ ಧಾಳಿಗಳ ವಿರುದ್ಧ ಒಂದು ಐಕ್ಯ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಸಿಐಟಿಯು ಕೋಶಾಧಿಕಾರಿ ಕೆ.ವಿ. ಶ್ರೀನಿವಾಸ್ ಸಮಾವೇಶದ ನಿರ್ಣಯವನ್ನು ಮಂಡಿಸಿದರು. ಸಾರ್ವಜನಿಕ ವಲಯವನ್ನು ಉಳಿಸುವ ಹೋರಾಟದ ಬಗ್ಗೆ ಈ ವರದಿಯ ಆರಂಭದಲ್ಲಿ ತಿಳಿಸಿದಂತೆ ಹೇಳಿರುವ ಈ ನಿರ್ಣಯ ಈ ಸಮಾವೇಶದ ಅಧ್ಯಕ್ಷ ಮಂಡಳಿ ಒಂದು ಸಮಿತಿಯಾಗಿ ಕೆಲಸ ಮಾಡಿ ಸಾರ್ವಜನಿಕ ವಲಯದ ಘಟಕಗಳನ್ನು ಉಳಿಸಿ, ಅವನ್ನು ಸತ್ವಯುತಗೊಳಿಸಲು ಹೋರಾಟಗಳನ್ನು ಯೋಜಿಸಲು ಹಾಗೂ ನಡೆಸಲು ಸಾರ್ವಜನಿಕ ವಲಯದ ಎಲ್ಲಾ ಕಾರ್ಮಿಕ ಸಂಘಗಳ ಹಾಗೂ ಕೇಂದ್ರ ಕಾರ್ಮಿಕ ಸಂಘಗಳ ಸಭೆ ಕರೆಯುವುದಕ್ಕೆ ಹಾಗೂ ಇತರ ಮುಂದಿನ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಅಧಿಕಾರ ನೀಡಿತು. ಈ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಕರ್ನಾಟಕದಲ್ಲಿ ಕಳೆದ ವಾರ

ಮೇ 16

□ ಕರ್ನಾಟಕ, ತಮಿಳುನಾಡಿನ ಸಂಸತ್ ಸದಸ್ಯರ, ಕಾರ್ಮಿಕ ಮುಖಂಡರ ನಿಯೋಗದ ಮನವಿಗೆ ಸ್ಪಂದಿಸಿ ಕೋಲಾರ ಚಿನ್ನದ ಗಣಿ ಮುಚ್ಚುವ ಆಜ್ಞೆಗೆ ಪ್ರಧಾನಿಗಳಿಂದ ತಾತ್ಕಾಲಿಕ ತಡೆ.

□ ಬಿಡದಿ ಬಳಿಯ ಜಂಟಿ ವಲಯದ ವಿದ್ಯುತ್ ಸ್ಥಾವರ ಯೋಜನೆಯಲ್ಲಿ ಪಾಲುದಾರಿಕೆ ಸಂಸ್ಥೆಯಾಗಿ ಅಮೆರಿಕಾದ ಯುನೋಕಾಲ್ ಸಂಸ್ಥೆಯನ್ನು ಆರಿಸಲಾಗಿದೆ ಎಂದು ಉಪ ಮುಖ್ಯಮಂತ್ರಿಗಳು.

ಮೇ18

□ ಬೆಂಗಳೂರಿನಲ್ಲಿ ರಾಷ್ಟ್ರೀಯ ಕ್ರೀಡೆ ನಡೆಯಲಿರುವ ಕ್ರೀಡಾಂಗಣದ ಬಳಿ ಇರುವ ಗುಡಿಸಲುಗಳ ನೆಲಸಮ. ಪರ್ಯಾಯ ವ್ಯವಸ್ಥೆಯಿಲ್ಲದೆ ಏಕಾಏಕಿ ನೆಲಸಮ ಮಾಡಿದ್ದಕ್ಕೆ ಗುಡಿಸಲು ನಿವಾಸಿಗಳ ಪ್ರತಿಭಟನೆ.

□ ಅಗತ್ಯ ಸೇವೆಗಳನ್ನು ಹೊರತುಪಡಿಸಿ ಉಳಿದ ಬಾಬ್ತುಗಳಿಗೆ ನೀಡುತ್ತಿರುವ ಸಬ್ಸಿಡಿಯನ್ನು ರದ್ದು ಪಡಿಸುವ ಕುರಿತಂತೆ ರಾಜ್ಯ ಸರಕಾರ ತೀವ್ರ ಪರಿಶೀಲನೆ ನಡೆಸುತ್ತಿದೆ ಎಂದು ಮುಖ್ಯಮಂತ್ರಿಗಳು.

ಮೇ19

□ ವಿದ್ಯುತ್ತಿನ ತೀವ್ರ ಕೊರತೆಯ ಹಿನ್ನೆಲೆಯಲ್ಲಿ ರಾಜ್ಯದ ಮನವಿಯಂತೆ 135 ಮೇ.ವಾ. ಅಧಿಕ ವಿದ್ಯುತ್ತನ್ನು ದಕ್ಷಿಣ ವಿದ್ಯುತ್ ಜಾಲದಿಂದ ಒದಗಿಸುತ್ತಿರುವುದಾಗಿ ಕೇಂದ್ರ ವಿದ್ಯುತ್ ಖಾತೆ ರಾಜ್ಯ ಸಚಿವರು.

□ ತುಂಗಾ ಮೇಲ್ದಂಡೆ ಯೋಜನೆಗಳ ಕಾಮಗಾರಿ ನಿಲ್ಲಿಸುವ ಪ್ರಶ್ನೆಯೇ ಇಲ್ಲ, ಇದಕ್ಕೆ ಕೇಂದ್ರದ ಪರವಾನಗಿ ಅಗತ್ಯವೇನಿಲ್ಲವೆಂದು ಮುಖ್ಯಮಂತ್ರಿಗಳು.

ಮೇ 19.

□ ಈ ಸಾಲಿನಲ್ಲಿ ಒಟ್ಟಾರೆ 1050 ಕೋಟಿ ರೂ.ಗಳ ವೆಚ್ಚದಲ್ಲಿ 1 ಲಕ್ಷ ಹೆಕ್ಟೇರು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುವುದಾಗಿ ಭಾರಿ ನೀರಾವರಿ ಖಾತೆ ಸಚಿವರು.

□ ದಕ್ಷಿಣ ವಿದ್ಯುತ್ ಜಾಲದಿಂದ ಅಧಿಕ ವಿದ್ಯುತ್ ಒಂದು ಯುನಿಟ್ ಕೂಡಾ ಬಂದಿಲ್ಲ ಎಂದು ಸಂಬಂಧಪಟ್ಟ ಅಧಿಕಾರಿಗಳು ಹೇಳಿರುವುದಾಗಿ ವರದಿ.

□ ಕಾಕಂಬಿ ನೀರಿಗೆ ಸೇರಿ ಕಲುಷಿತವಾಗಿರುವ ತುಂಗಾಭದ್ರ ನದಿ ನೀರನ್ನು ಶುದ್ಧೀಕರಣಗೊಳಿಸಲು ಅದಕ್ಕೆ ಆಮ್ಲಜನಕ ಸೇರಿಸುವ ಕೆಲಸವನ್ನು ಪ್ರಾರಂಭಿಸಲಾಗಿದೆ ಎಂದು ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರು.

□ ಬಸವಕಲ್ಯಾಣದಿಂದ ನಾಲ್ಕನೇ ರಾಷ್ಟ್ರೀಯ ಕ್ರೀಡಾಕೂಟದ ಜ್ಯೋತಿಯ ಓಟ ಆರಂಭ.

ಮೇ 20

□ ಆಹಾರ ಧಾನ್ಯ ಖರೀದಿಯಲ್ಲಿನ ಅವ್ಯವಹಾರ ತಪ್ಪಿಸಲು ಎಲ್ಲ ಬಂದೀಖಾನೆಗಳಿಗೂ ಎಪಿಎಂಸಿ ಗಳಿಂದಲೇ ಆಹಾರಧಾನ್ಯ ಖರೀದಿಸುವ ಆದೇಶ ನೀಡಿರುವುದಾಗಿ ಬಂದೀಖಾನೆ ರಾಜ್ಯ ಸಚಿವರು.

□ ಬೆಂಗಳೂರು ನಗರ ಪಾಲಿಕೆಯಲ್ಲಿ ಬಿಜೆಪಿ-ಕಾಂಗ್ರೆಸ್ ನಿರ್ಣಯಕ್ಕೆ ಸೋಲು. ನಿರ್ಣಯ ಮಂಡಿಸಿದ ಪಕ್ಷಗಳ ಸದಸ್ಯರೇ ತಟಸ್ಥರಾಗಿದ್ದುದರಿಂದ ಪಾಲಿಕೆಯ ಬಜೆಟ್‌ಗೆ ಮತ್ತೊಮ್ಮೆ ಅಂಗೀಕಾರ.

□ ಟ್ರ್ಯಾಕ್ಟರ್, ಪವರ್ ಟ್ರಿಲ್ಲರ್ ಭತ್ತ ನಾಟಿ ಯಂತ್ರಗಳಿಗೆ ಸಬ್ಸಿಡಿ ನೀಡಲು ರಾಜ್ಯ ಸರಕಾರಗಳು ತೀರ್ಮಾನಿಸಿದೆ ಎಂದು ಕೃಷಿ ಸಚಿವರು.

ಮೇ22

□ ರಾಜ್ಯ ಸರಕಾರ ಸಮಗ್ರ ಬಾಲ ವಿಕಾಸ ಯೋಜನೆಯಡಿ ಅಂಗನವಾಡಿ ಫಲಾನುಭವಿಗಳಿಗೆ ನೀಡುವ ಗೋಧಿಯಲ್ಲಿ ನಡೆದಿರುವ ಅವ್ಯವಹಾರದಲ್ಲಿ ಮೂವರು ಐಎಎಸ್ ಅಧಿಕಾರಿಗಳೂ ಸೇರಿದಂತೆ 13 ಮಂದಿ ಅಧಿಕಾರಿಗಳ ವಿರುದ್ಧ ವಿಚಾರಣಾ ಸಮಿತಿಯಿಂದ ವರದಿ ಸಲ್ಲಿಕೆ. ಸಿಪಿಐ(ಎಂ) ಶಾಸಕ ಶ್ರೀರಾಮರೆಡ್ಡಿ ಹಾಗೂ ಇತರರ ಒತ್ತಾಯದ ಮೇರೆಗೆ ಈ ಸಮಿತಿಯನ್ನು ನೇಮಿಸಲಾಗಿತ್ತು.

ಮೇ 23

□ ರಾಜ್ಯದ ಎಲ್ಲ ಅಣೆಕಟ್ಟುಗಳ ದುರಸ್ತಿ ಪರಿಶೀಲನೆಗೆ ಮುಖ್ಯಮಂತ್ರಿಗಳ ಆದೇಶ.

□ ಮಂಡ್ಯದಲ್ಲಿ ಮುಖ್ಯಮಂತ್ರಿಗಳ ಕಾರಿಗೆ ಮುತ್ತಿಗೆ, ಲಾಠಿ ಪ್ರಹಾರ, ಜಿಲ್ಲಾ ಉಸ್ತುವಾರಿ ಸಚಿವರ ಬೆಂಬಲಿಗರಿಂದ ಈ ಮುತ್ತಿಗೆ ಎನ್ನಲಾಗಿದೆ.

□ ಮೈಸೂರು ಲ್ಯಾಂಪ್ಸ್ ನೀಡಿರುವ 8 ಕೋಟಿ ರೂ.ಗಳ ಸಾಲವನ್ನು ಷೇರು ಬಂಡವಾಳವಾಗಿ ಪರಿವರ್ತಿಸಲು ಉದ್ದೇಶಿಸಲಾಗಿದೆ ಎಂದು ಭಾರೀ ಕೈಗಾರಿಕಾ ಸಚಿವರು.

ಮೇ ದಿನಾಚರಣೆ

ಚಳ್ಳಕೆರೆ: ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯಲ್ಲಿ ಪ್ರಥಮ ಬಾರಿಗೆ ಸಿಐಟಿಯು ನೇತೃತ್ವದಲ್ಲಿ ಸಂಭ್ರಮದಿಂದ ಮೇ ದಿನಾಚರಣೆಯನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಮಾತನಾಡಿದ ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಎ.ಎಸ್. ಮೂರ್ತಿ ಐಕ್ಯ ಹೋರಾಟಕ್ಕೆ ಕರೆನೀಡಿದರು.

ಬೆಳಿಗ್ಗೆ ನಡೆದ ಮೇ ರ್‍ಯಾಲಿಯಲ್ಲಿ ಹರಿಹರದ ಸಂಗಂ ಸಾಲ್ವೆಂಟ್, ಹರಿಹರದ ಪಾಲಿ ಫೈಬರ್ಸ್ ಮತ್ತು ಗ್ವಾಲಿಯರ್ ರೇಯಾನ್ಸ್ ನೌಕರರ ಯೂನಿಯನ್ನಿನ ಕಾರ್ಮಿಕರು ಭಾಗವಹಿಸಿದ್ದರು. ಎಂ.ಎಸ್. ಆನಂದ್ ರಾವ್, ಜಿ.ಎಂ.ಮಲ್ಲಿಕಾರ್ಜುನ ಸ್ವಾಮಿ, ಬಸವ ರಾಜಪ್ಪ, ಕರಿಬಸಪ್ಪ, ಇಂದ್ರೇಶ್ ಭೀಮಪ್ಪ ಮುಂತಾದ ಮುಖಂಡರು ನೇತೃತ್ವ ವಹಿಸಿದ್ದರು.

ಎತ್ತಿನ ಗಾಡಿ ಕಾರ್ಮಿಕರ ಸಂಘ, ಲೋಡಿಂಗ್ ಅಂಡ್ ಅನ್ ಲೋಡಿಂಗ್ ಹಮಾಲರ ಸಂಘ, ಗಿರಣಿ ಕಾರ್ಮಿಕರ ಸಂಘ, ಕೊಳಚೆ ಅಭಿವೃದ್ಧಿ ಸೇವಾ ಸಮಿತಿ ಇದೇ ಸಂದರ್ಭದಲ್ಲಿ ಸಿಐಟಿಯು ಸಂಘಟನೆಗೆ ಸೇರ್ಪಡೆಯಾದವು.

ಸ್ಥಳೀಯ ಛೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷ ಕೆ.ನಾಗರಾಜಪ್ಪ ಸಿಐಟಿಯು ಕಛೇರಿ ಉದ್ಘಾಟಿಸಿದರು. ಎ.ನಾಗೇಂದ್ರಪ್ಪ, ಟಿ.ತಿಪ್ಪೇಸ್ವಾಮಿ ಮೊದಲಾದ ಮುಖಂಡರು ಪಾಲ್ಗೊಂಡಿದ್ದರು.

ಕೊಪ್ಪಳ

ರಾಯಚೂರು ಜಿಲ್ಲೆಯ ಕೊಪ್ಪಳದಲ್ಲಿ ಮೇ 5 ಮತ್ತು 6 ರಂದು ಸಿಐಟಿಯು ನೇತೃತ್ವದಲ್ಲಿ ಮೇ ದಿನಾಚರಣೆ ಆಚರಿಸಲಾಯಿತು.

ಮೇ5 ರ ಸಂಜೆ ನಡೆದ ರ್‍ಯಾಲಿಯಲ್ಲಿ ಕೆಂಬಾವುಟ ಹಿಡಿದ ನೂರಾರು ಕಾರ್ಮಿಕರು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಆಟೋರಿಕ್ಷಾ ಮತ್ತು ಟ್ರ್ಯಾಕ್ಟರ್‌ಗಳು ಮೆರವಣಿಗೆಯ ಉದ್ದಕ್ಕೂ ಇದ್ದದ್ದು ವಿಶೇಷವಾಗಿತ್ತು.

ಬಹಿರಂಗ ಸಭೆಯನ್ನುದ್ದೇಶಿಸಿ ಜಿಲ್ಲಾ ಸಿಐಟಿಯು ಮುಖಂಡ ಶೇಕ್ಷಾಖಾದ್ರಿ, ಸಮುದಾಯದ ವಾಸುದೇವ, ರೈತ ಸಂಘದ ಸಂಗಪ್ಪ ಬಾಗಲಿ, ಬಾಲಕೃಷ್ಣ ಮಾತನಾಡಿದರು. ವೇದಿಕೆಯ ಮೇಲೆ ಎಲ್ಲಾ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು.

ಮೇ 6 ರಂದು ನಡೆದ ಕಾರ್ಯಕ್ರಮದಲ್ಲಿ ಪತ್ರಕರ್ತರಾದ ವಿಠಪ್ಪಗೋರಂಟ್ಲಿಯವರು 'ದೇಶದ ಕಾರ್ಮಿಕರ ಸ್ಥಿತಿಗತಿ' ಕುರಿತು ಮಾತನಾಡಿದರು. ಕಾರ್ಯಕ್ರಮಕ್ಕೆ ಅತಿಥಿಯಾಗಿ ಜನತಾದಳದ ಎಂ.ಎಸ್ ಮಹಾಂತಯ್ಯ ಮಠ, ಪುರಸಭಾ ಸದಸ್ಯರಾದ ಶಹಾಬುದ್ದೀನ್, ರಶೀದ್ ಸಾಬ್, ಅಡ್ಡೆವಾಲ, ನಾಗರಾಜ ಲಜಿಗೇರ, ಡಿವೈಎಫ್ಐ ನ ರಾಜುಬೇಗಂ, ಎಸ್‌ಎಫ್‌ಐನ ಆನಂದ ಮಾತನಾಡಿದರು.

ಸಂಜೆ ಸಮುದಾಯ ತಂಡದವರಿಂದ ರಾವಿ ನದಿಯ ದಂಡೆಯ ಮೇಲೆ ನಾಟಕ ಪ್ರದರ್ಶಿಸಲಾಯಿತು.

ಉದ್ಯೋಗವಕಾಶ ಹೆಚ್ಚಿಸಬೇಕು

ಮಹಿಳಾ ಸಮಾವೇಶದ ಕರೆ

ಮಂಗಳೂರು(ದ.ಕ) ದಕ್ಷಿಣ ಕನ್ನಡ ಜನವಾದಿ ಮಹಿಳಾ ಸಂಘಟನೆಯ 2ನೇ ಸಮಾವೇಶವು ಮಂಗಳೂರಿನಲ್ಲಿ ನಡೆಯಿತು. ಸಮಾವೇಶವು ಮಹಿಳೆಯರು ಎದುರಿಸುತ್ತಿರುವ ಆರ್ಥಿಕ, ಸಾಮಾಜಿಕ ಹಾಗೂ ಮಹಿಳೆಯರಿಗೆ ರಾಜಕೀಯ ಮೀಸಲಾತಿ ಕುರಿತಂತೆ ರಾಜ್ಯಾಧ್ಯಕ್ಷೆ ಕೆ.ಎಸ್.ವಿಮಲ ಮತ್ತು ಪ್ರಧಾನ ಕಾರ್ಯದರ್ಶಿ ಕೆ.ನೀಲಾ ಅವರ ಉಪಸ್ಥಿತಿಯಲ್ಲಿ ಚರ್ಚಿಸಿ ಕೆಳಗಿನ ಪ್ರಮುಖ ನಿರ್ಣಯಗಳನ್ನು ಕೈಗೊಂಡಿದೆ.

ಮಹಿಳೆಯರ ಉದ್ಯೋಗದ ಹಕ್ಕನ್ನು ರಕ್ಷಿಸಿ - ಉದ್ಯೋಗವಕಾಶ ಹೆಚ್ಚಿಸಬೇಕು.

. ಐದನೇ ವೇತನ ಆಯೋಗದ ಮಹಿಳಾ ವಿರೋಧಿ ನೀತಿಯ ರದ್ದತಿ

. ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಯಾವುದೇ ಬದಲಾವಣೆ ಗಳಿಲ್ಲದೆ ಅಂಗೀಕಾರವಾಗಬೇಕು.

. ಮಹಿಳಾ ಆಯೋಗ ಹೆಚ್ಚು ಕ್ರಿಯಾಶೀಲವಾಗಬೇಕು.

. ಮಹಿಳೆಯರ ಸ್ಥಿತಿ-ಗತಿ ಸುಧಾರಣೆಗಾಗಿ ಶಾಶ್ವತವಾದ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಬೇಕು.

. ಬೀದಿ ದೀಪ, ಶೌಚಾಲಯ, ಗ್ರಾಮಾಂತರ ಸಂಪರ್ಕರಸ್ತೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಶಿಶು ಪಾಲನಾ ಕೇಂದ್ರಗಳು, ಮಹಿಳೆಯರ ಅಭಿವೃದ್ಧಿಗೆ ಪೂರಕವಾಗಿರುವುದರಿಂದ ಆದ್ಯತೆಯ ಮೇರೆಗೆ ಒದಗಿಸಬೇಕು.

. ಸಾರ್ವಜನಿಕ ಸ್ಥಳಗಳಲ್ಲಿ ದುಡಿಯುವ ಮಹಿಳೆಯರಿಗೆ ಕುಡಿಯುವ ನೀರು ಮತ್ತು ಶೌಚಾಲಯ ಸೌಲಭ್ಯ ಕಲ್ಪಿಸಬೇಕು.

. ಅಂಗನವಾಡಿ ಶಿಕ್ಷಕಿ/ಸಹಾಯಕಿಯರನ್ನು ಸರಕಾರಿ ನೌಕರರೆಂದು ಪರಿಗಣಿಸಿ ವೇತನ ಹೆಚ್ಚಿಸಬೇಕು.

. ಇತ್ತೀಚೆಗೆ ಮಾಧ್ಯಮಗಳಲ್ಲಿ ಮಹಿಳೆಯನ್ನು ಕೆಟ್ಟದಾಗಿ ಚಿತ್ರಿಸುವುದನ್ನು ನಿಯಂತ್ರಿಸಬೇಕು.

ಇತ್ಯಾದಿ ನಿರ್ಣಯಗಳನ್ನು ಕೈಗೊಂಡು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮೇಲಿನ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿದೆ.

ನೂತನ ಜಿಲ್ಲಾ ಸಮಿತಿ

ಅಧ್ಯಕ್ಷರು: ಮಂಜುಳ ಸುಕುಮಾರ್, ಉಪಾಧ್ಯಕ್ಷರುಗಳು: ಪದ್ಮಾವತಿ ಶೆಟ್ಟಿ, ಕೆ.ಪದ್ಮಾವತಿ, ಕೆ.ಲೀಲಾವತಿ, ಕೆ.ಉತ್ಪಲ, ಕಾರ್ಯದರ್ಶಿ: ವಾಣಿ ಉಚ್ಚಿಲ್, ಜಂಟಿ ಕಾರ್ಯದರ್ಶಿ: ಮಾಲತಿ ಶೆಟ್ಟಿ, ಹಿಲ್ಡಾ ಡಿಸೋಜ, ಖಜಾಂಚಿ: ನಳಿನಾಕ್ಷಿ ಅಲ್ಲದೆ ಇತರ 25 ಸದಸ್ಯರನ್ನೊಳಗೊಂಡ ಸಮಿತಿ ಆಯ್ಕೆಗೊಂಡಿತು.

ತಿದ್ದುಪಡಿ

ಅನಂತವಾಡಿ ಹಂಚು ಕಾರ್ಮಿಕರ ಹೋರಾಟ ಮುರಿಯಲು ಮಾಲಕರ ಜೊತೆ ಶಾಮೀಲಾದವರು ಜನತಾದಳ ಶಾಸಕ ಶಿವಾನಂದ ಕಳವೆ ಎಂದು ಕಳೆದ ಸಂಚಿಕೆಯಲ್ಲಿ ಮುದ್ರಿತವಾಗಿದೆ. ಇದು ಸರಿಯಲ್ಲ, ಭಟ್ಕಳದ ಶಾಸಕರು ಬಿಜೆಪಿಯ ಶಿವಾನಂದ ನಾಯ್ಕ ಎಂದು ತಿಳಿದು ಬಂದಿದೆ. ಈ ತಪ್ಪಿಗೆ ವಿಷಾದಿಸುತ್ತೇವೆ.

ಪೆಟ್ರೋಲಿಯಂ ಬೆಲೆ ಹೆಚ್ಚಳ ಅನಿವಾರ್ಯವೇ?

- ಸೀತಾರಾಂ ಯೆಚೂರಿ

ಕೇಂದ್ರ ಹಣಕಾಸು ಸಚಿವಾಲಯದ ಅಪರಾಧಕ್ಕೆ ಜನಸಾಮಾನ್ಯರು ಬೆಲೆ ತೆರಬೇಕೆಂಬ ತತ್ವವನ್ನು ನೀವು ಒಪ್ಪುವುದಾದರೆ ಬೆಲೆ ಹೆಚ್ಚಳ ಅನಿವಾರ್ಯ ಎನ್ನುತ್ತಾರೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ.





ಸಂಯುಕ್ತ ರಂಗ ಸರಕಾರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ತೀವ್ರವಾಗಿ ಏರಿಸಿ ಇನ್ನೂ ಒಂದು ವರ್ಷವಾಗಿಲ್ಲ. ಮತ್ತೀಗ ಇನ್ನೊಮ್ಮೆ ಹೆಚ್ಚಳ ಮಾಡುವ ಅನಿವಾರ್ಯತೆಯ ಬಗ್ಗೆ ಮಾತನಾಡುತ್ತಿದ್ದಾರೆ. ಈ ಹೆಚ್ಚಳ ಒಟ್ಟಾರೆ ಎಲ್ಲ ವಸ್ತುಗಳ ಬೆಲೆ ಹೆಚ್ಚಳದ ಸರಣಿಯನ್ನೇ ಹೆಣೆಯುವಂತದ್ದು. ಆಗಲೇ ಬೆಲೆ ಹೆಚ್ಚಳದಿಂದ ನಲುಗಿ ಹೋಗಿರುವ ಬಡ ಜನ ಸಾಮಾನ್ಯ ಇನ್ನೂ ಈ ಹೆಚ್ಚಿನ ಹೊರೆಯಡಿ ನರಳಬೇಕಾಗುತ್ತದೆ. ಆದರೂ ಈ ಸರಕಾರದ ಪ್ರಧಾನ ಮಂತ್ರಿ ಮತ್ತು ಹಣಕಾಸು ಮಂತ್ರಿಗಳು ಹೇಳುತ್ತಾರೆ - ಬೆಲೆ ಹೆಚ್ಚಿಸದೆ ಬೇರೆ ದಾರಿಯೇ ಇಲ್ಲ ಎಂದು. ಹಾಗಾದರೆ ಬೇರೆ ದಾರಿ ನಿಜವಾಗಿಯೂ ಇಲ್ಲವೇ? ಖಂಡಿತವಾಗಿಯೂ ಇದೆ. ಸರಕಾರಕ್ಕೆ ಮನಸ್ಸಿದ್ದರೆ ದಾರಿ ಇದ್ದೇ ಇದೆ.

ತೈಲ ಖಾತೆಯ ಕೊರತೆ 1500 ಕೋಟಿ ರೂಪಾಯಿಗೂ ಹೆಚ್ಚಿಗೆ ಇದೆ. ಈ ಕೊರತೆ ಪೆಟ್ರೋಲಿಯಂ ಉತ್ಪನ್ನಗಳ ಆಮದಿಗೆ ಹೆಚ್ಚಿನ ಬೆಲೆ ತೆತ್ತು ಕಡಿಮೆ ಬೆಲೆ ಇಲ್ಲಿ ಮಾರಿದ್ದರ ಪರಿಣಾಮ. ಈ ತೈಲಖಾತೆ ಬಂದಿದ್ದೇ ಹಾಗೆ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಬೆಲೆಯ ಏರಿಳಿತ ದೇಶದ ಜನತೆಗೆ ಭಾರವಾಗಬಾರದು ಎಂದು. ಈಗ ತೈಲ ಕಂಪನಿಗಳು ಅಂತರ್ರಾಷ್ಟ್ರೀಯ ಹಣಕಾಸು ಮಾರುಕಟ್ಟೆಯಲ್ಲಿ ಸಾಲ ಪಡೆಯುತ್ತಿವೆ. ಇದು ಹೀಗೇ ಮುಂದುವರಿಯಲು ಸಾಧ್ಯವಿಲ್ಲ. ಯಾಕೆಂದರೆ ಈ ಸಾಲದ ಹಣ ಮರುಪಾವತಿಸಲು ಮತ್ತು ಆಮದು ಮಾಡಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಇದರಿಂದ ತೀವ್ರ ಬಿಕ್ಕಟ್ಟು ಉಂಟಾಗುತ್ತದೆ. ಪೆಟ್ರೋಲಿಯಂ ಇಲ್ಲದೆ ದೇಶ ನಡೆಯಲು ಸಾಧ್ಯವಿಲ್ಲವಲ್ಲ. ಆದ್ದರಿಂದಲೇ ಸರಕಾರ ಹೇಳುತ್ತದೆ 'ಬೇರೆ ದಾರಿಯೇ ಇಲ್ಲ' ಎಂದು.

ಕೊರತೆಗೆ ಕಾರಣವೇನು?

ಆದರೆ ಈ ಕೊರತೆ ಹೇಗೆ ಉಂಟಾಯಿತು? ಅಂತರ್ರಾಷ್ಟ್ರೀಯ ಬೆಲೆಗಳಲ್ಲಿ ಏರಿಕೆ ಉಂಟಾದ್ದರಿಂದ ಎನ್ನುತ್ತಾರೆ. ಇದು ಭಾಗಶಃ ನಿಜ. ಈ ಕಥೆಗೆ ಇನ್ನೊಂದು ಭಾಗವೂ ಇದೆ. ಇತ್ತೀಚಿನ ದಿನಗಳಲ್ಲಿ ದೇಶೀ ಉತ್ಪಾದನೆ(ತೈಲದ್ದು) ಕಡಿಮೆ ಆಗಿದೆ. ಇದು ಯಾಕೆ ಹೀಗಾಯಿತು. ತೈಲ ಮತ್ತು ನೈಸರ್ಗಿಕ ಅನಿಲಗಳ ಪ್ರಾಧಿಕಾರಕ್ಕೆ(2 ಎಸ್‌ಜಿಸಿ) ಸರಕಾರ ಅವಶ್ಯ ಹಣ ಒದಗಿಸಲಿಲ್ಲ. ತೈಲ ಶೋಧನೆ/ಉತ್ಪಾದನೆ ಕುಂಠಿತವಾಯಿತು. ಖಾಸಗೀಕರಣ ಮತ್ತು ಉದಾರೀಕರಣದಿಂದಾಗಿ ಬಹುರಾಷ್ಟ್ರೀಯ ಕಂಪನಿಗಳು ಈ ವಲಯಗಳೊಳಗೆ ಬಂದಿವೆ. ಆದರೆ ಅವು ಉತ್ಪಾದನೆ ಹೆಚ್ಚಿಸಿಲ್ಲ. ಆದ್ದರಿಂದಾಗಿ ನಮ್ಮ ಆಂತರಿಕ ಉತ್ಪಾದನೆ ಕುಸಿದಿದೆ. ಇದೇ ವೇಳೆಗೆ ನಮ್ಮ ಆಮದು ಶೇ 44 ರಷ್ಟು ಪ್ರಮಾಣದಲ್ಲಿ ಅಗಾಧವಾಗಿ ಹೆಚ್ಚಿದೆ. ಇದರ ಪರಿಣಾಮವೇ ಈ ಆಗಾಧ ಕೊರತೆ.

ಇಲ್ಲಿ ಅಂತರ್ರಾಷ್ಟ್ರೀಯ ಬೆಲೆಗಳು ನಮ್ಮ ಹತೋಟಿಯಲ್ಲಿಲ್ಲ ಎಂಬುದನ್ನು ಒಪ್ಪಿಕೊಳ್ಳೋಣ. ಆದರೆ ಆಮದನ್ನು ನಿಯಂತ್ರಣದಲ್ಲಿಡುವುದು ಮತ್ತು ದೇಶದೊಳಗೆ ಉತ್ಪಾದನೆ ಹೆಚ್ಚಿಸುವುದು ಎರಡೂ ನಮ್ಮ ಕೈಯಲ್ಲೇ ಇರುವಂತಹದ್ದು. ಸಿಪಿಐ(ಎಂ) ಬಹಳ ಕಾಲದಿಂದ ಇದಕ್ಕೆ ಒತ್ತು ನೀಡುತ್ತಾ ಬಂದಿದೆ. ಆಂತರಿಕ ಉತ್ಪಾದನೆ ಹೆಚ್ಚಿಸಬೇಕು ಮತ್ತು ಭೋಗಕ್ಕಾಗಿ ಮಾಡುವ ಆಮದನ್ನು ನಿಯಂತ್ರಿಸಬೇಕು ಎಂದು. ಆದರೆ ಎಲ್ಲ ಸರಕಾರಗಳೂ ಈ ಸಲಹೆಯನ್ನು ತಿರಸ್ಕರಿಸುತ್ತಾ ಬಂದವು. ಈ ಸಮಸ್ಯೆಯನ್ನು ಪರಿಹರಿಸದೆ ಬೆಲೆ ಏರಿಸಿ ದೇಶದ ಜನಸಾಮಾನ್ಯರ ಮೇಲೆ ಹೆಚ್ಚಿನ ಹೊರೆ ಹೇರುವುದು ಏನನ್ನು ಹೇಳುತ್ತದೆ? ಈ ಸರಕಾರ ಜನ ಸಾಮಾನ್ಯರ ಮೇಲೆ ಹೆಚ್ಚಿನ ಹೊರೆ ಹೇರಬಯಸುತ್ತದೆ ಎಂಬುದನ್ನಲ್ಲವೇ?

ಆಮದನ್ನು ನಿಯಂತ್ರಿಸಬೇಕು ಕಡಿತ ಗೊಳಿಸಬೇಕು.

ಆಂತರಿಕ ಉತ್ಪಾದನೆ ಹೆಚ್ಚಿಸದೆ ಹೋದಲ್ಲಿ ಈ ತೈಲ ಖಾತೆ ಕೊರತೆ ನಿರಂತರವಾಗಿ ಕಾಡುವ ಸಮಸ್ಯೆಯಾಗೇ ಉಳಿಯುತ್ತದೆ. ಇದು ದೀರ್ಘಕಾಲ ತೆಗೆದುಕೊಳ್ಳುವ ಕೆಲಸ. ಸ್ವಾವಲಂಬನೆಯ ಹಂಬಲ ಸ್ಪಷ್ಟ ಚಿಂತನೆ ಇದ್ದರೆ ಮಾತ್ರ ಇದು ಸಾಧ್ಯ. ಸರಕಾರಕ್ಕೆ ಇವೆರಡೂ ಇರುವಂತಿಲ್ಲ. ಯಾಕೆಂದರೆ ಹಣ ಒದಗಿಸದೆ ಅದನ್ನು ದುರ್ಬಲಗೊಳಿಸುತ್ತಿರಲಿಲ್ಲ.

ಇನ್ನುಳಿದ ದಾರಿ ಯಾವುದು? ಆಮದನ್ನು ಕಡಿಮೆ ಮಾಡುವಂತಹದ್ದು. ಆಮದನ್ನು ಕಡಿಮೆ ಮಾಡುವುದು ಹೇಗೆ ಉತ್ಪಾದನೆಗೆ/ಬಳಕೆಗೆ ಅತ್ಯವಶ್ಯವಾದಷ್ಟು ಪ್ರಮಾಣವನ್ನು ಆಮದು ಮಾಡದೆ ಇದ್ದರೆ ಅದು ಆರ್ಥಿಕದ ಮೇಲೆ ದುಷ್ಪರಿಣಾಮ ಬಿರುತ್ತದೆ. ಹಾಗಾದರೆ ಎಲ್ಲಿ ಈ ಕಡಿತ ಮಾಡುವುದು? ಶ್ರೀಮಂತರು ಭೋಗ್ಯಕ್ಕಾಗಿ ಜನರೇಟರ್ ನಡೆಸುತ್ತಾರೆ, ಲಕ್ಸುರಿ ಕಾರುಗಳು ಅಪಾರ ಪೆಟ್ರೋಲ್ ಕುಡಿಯುತ್ತವೆ. ಇವುಗಳನ್ನು ಕಡಿತ ಮಾಡಿದರೆ ಹಾನಿಯೇನೂ ಇಲ್ಲವಲ್ಲ. ಈ ಶ್ರೀಮಂತರ ಭೋಗ ದಾಹ ತಣಿಸಲು ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಹೆಚ್ಚಿಸಿದರೆ ಬಹುಸಂಖ್ಯೆಯ ಬಡವರು ನರಳಬೇಕಾಗುತ್ತದೆ. ಶ್ರೀಮಂತರಿಗೆ ಇದರಿಂದ ಬಹಳ ವ್ಯತ್ಯಾಸವೇನೂ ಆಗುವುದಿಲ್ಲ. ಆದ್ದರಿಂದ 1000 ಸಿಸಿಗಿಂತ ಹೆಚ್ಚಿನ ಸಾಮರ್ಥ್ಯದ ಕಾರುಗಳ ಮೇಲೆ ದಂಡ ವಿಧಿಸಬೇಕು. ಆಗ ಮಧ್ಯಮ ವರ್ಗ ಮತ್ತು ಕೆಳವರ್ಗಗಳಿಗೆ ರಕ್ಷಣೆ ದೊರೆತಂತಾಗುತ್ತದೆ. ಅಲ್ಲದೆ ಬಹುರಾಷ್ಟ್ರೀಯ ಕಂಪನಿಗಳು ಭಾರತಕ್ಕಾಗೇ ಉತ್ಪಾದಿಸುವ ಕಾರುಗಳ ಮೇಲೂ ದಂಡ ಹೇರಬಹುದು. ಆದರೆ ನಮ್ಮ ಸರಕಾರವೇ ಕೇಳುತ್ತದೆ "ಇವರ ಮೇಲೆ ನಾವು ಹೇಗೆ ದಂಡ ಹೇರಲು ಸಾಧ್ಯ?" ಎಂದು. ಯಾಕೆಂದರೆ ಸರಕಾರದ ಪ್ರಕಾರ ಇವರು "ವಾಹನಗಳ". ಉದ್ದಿಮೆಯ ಬೆಳವಣಿಗೆಯ ವಾಹನಗಳು ಕೇಂದ್ರ ಹಣಕಾಸು ಮಂತ್ರಾಲಯದ ಪ್ರಕಾರ ಹೀಗೆ ದಂಡ ವಿಧಿಸುವುದೆಂದರೆ ಅದು ನಿಂದನೆಯಾಗಿಬಿಡುತ್ತದೆ!

ಹಣಕಾಸು ಮಂತ್ರಿಗಳು ಪದೆ ಪದೆ ಹೇಳುತ್ತಾರೆ 'ಭಾರತವನ್ನು ಒಂದು ಏಶಿಯಾದ ಹುಲಿಯಂತಾಗಿಸುವುದು ನನ್ನ ಉದ್ದೇಶ" ಎಂದು. ಹಾಗಿದ್ದರೆ ಏಶಿಯಾದ ಒಂದು ಹುಲಿಯಂತಾಗಿರುವ ಸಿಂಗಾಪೂರದ ಉದಾಹರಣೆ ತೆಗೆದುಕೊಳ್ಳೋಣ. ಸಿಂಗಾಪುರದಲ್ಲಿ ವಾಹನಗಳ ಮೇಲೆ ಹಲವು ನಿರ್ಬಂಧಗಳಿವೆ. ಇಲ್ಲಿ ವಾಹನಗಳನ್ನು ಹೊಂದಿರುವುದು ಬಹಳ ಕಷ್ಟದ ಕೆಲಸ. ಇದರ ಮುಖ್ಯ ಉದ್ದೇಶ ವಾಹನಗಳ ಒತ್ತಡ ಕಡಿಮೆ ಪ್ರಮಾಣದಲ್ಲಿ ಇರಿಸುವುದು. ಕಾರುಗಳ ಬೆಲೆ ಬಹಳ ದುಬಾರಿ. ಅತಿ ಸೋಡಿಯ ಕಾರೆಂದರೂ ಅದರ ಭಾರತದಲ್ಲಿನ ಹತ್ತು ಪಟ್ಟು ಹೆಚ್ಚು ಕಾರುಗಳ ನೊಂದಣೆ ವೆಚ್ಚವೂ ಅತಿ ದುಬಾರಿ. ಅತಿ ಸುಲಭ ಬೆಲೆಯ ಕಾರಿನ ಬೆಲೆ ಸುಮಾರು 16 ಲಕ್ಷ ರೂಪಾಯಿಗಳಷ್ಟಾದರೆ ನೊಂದಣೆ ವೆಚ್ಚ 28800 ರೂಪಾಯಿಗಳು! ಕಾರುಗಳನ್ನು ಆಮದು ಮಾಡಿಕೊಂಡರೆ ಆಮದು ಬೆಲೆ ಮತ್ತು ಸಿಂಗಾಪೂರದ ನಡುವಿನ ವ್ಯತ್ಯಾಸದ ಹಣವನ್ನು ಅಲ್ಲಿನ ಸರಕಾರ ತನ್ನ ಖಜಾನೆಗೆ ಸೇರಿಸಿಕೊಳ್ಳುತ್ತದೆ. ಹಾಗೆ ಭಾರತವೂ ಒಂದು ಏಶಿಯಾದ ಹುಲಿಯಾಗಬೇಕೆಂದು ಬಯಸುವ ಕೇಂದ್ರ ಹಣಕಾಸು ಮಂತ್ರಿ ಸಿಂಗಾಪುರದ ಉದಾಹರಣೆ ಅನುಸರಿಸಬಹುದು. ಆದರೆ ತಮ್ಮ ವರ್ಗಗುಣಕ್ಕೆ ತಕ್ಕಂತೆ ಆತ ಜನಸಾಮಾನ್ಯರ ಮೇಲೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಯ ಹೊರೆ ಹೇರಬಯಸುತ್ತಾರೆ.

ಹಣಕಾಸು ಮಂತ್ರಾಲಯದ ವಿಶ್ವಾಸಘಾತುಕತೆ

ಈಗ ಈ ತೈಲ ಖಾತೆಯ ಕೊರತೆಯೇ ಹೇಗೆ ಉಂಟಾಗುತ್ತದೆ ನೋಡೋಣ. ಎಂಬತ್ತು ಮತ್ತು ತೊಂಬತ್ತರಲ್ಲಿ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಕುಸಿದಾಗ ಈ ತೈಲ ಖಾತೆಯಲ್ಲಿ ಮಿಗುತೆ ಇತ್ತು. (ತೈಲ ಖಾತೆಯಲ್ಲಿ ಕೊರತೆ ಇದ್ದಾಗ ಬೆಲೆ ಹೆಚ್ಚಿಸಲಾಗುತ್ತದೆ. ಮಿಗುತೆ ಇದ್ದಾಗ ಬೆಲೆ ಇಳಿಸಲಾಗುವುದಿಲ್ಲ). ಆಗ ಒಟ್ಟು 4429 ಕೋಟಿ ರೂಪಾಯಿಗಳನ್ನು ಈ ಖಾತೆಯಿಂದ ಒಟ್ಟಾರೆ ಬಜೆಟ್ ಕೊರತೆ ನೀಗಿಸಲು ಹಣಕಾಸು ಮಂತ್ರಾಲಯ ತೆಗೆದಿತ್ತು. ಈ ಮೊತ್ತವನ್ನು ಶೇ 15.18ರ ಬಡ್ಡಿಯ ಜೊತೆ ಹಿಂತಿರುಗಿಸಿದರೆ (ಇವತ್ತು ತೈಲ ಕಂಪನಿಗಳು ಸಾಲ ಪಡೆಯುತ್ತಿರುವ ದರದಲ್ಲಿ) ಈ ಕೊರತೆ 6000 ಕೋಟಿ ರೂಪಾಯಿಗಳಷ್ಟು ಕಡಿಮೆ ಆಗುತ್ತದೆ.

ಇದಲ್ಲದೆ ಈ ಮುಂದಿನ ವಿಷಯವನ್ನು ನೋಡಿ. 1996-97 ರ ಬಜೆಟ್ ತೈಲ ಆಮದಿನಿಂದ ಸಿಗುವ ಸುಂಕ ಸುಮಾರು 1000 ಕೋಟಿ ರೂಪಾಯಿಗಳೆಂದು ಅಂದಾಜು ಮಾಡಿತ್ತು. ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಬೆಲೆ ಹೆಚ್ಚಳ ಮತ್ತು ಹೆಚ್ಚಿನ ಆಮದಿನಿಂದಾಗಿ 5360 ಕೋಟಿ ರೂಪಾಯಿಗಳ ಆಮದು ಸುಂಕ ಸಂಗ್ರಹವಾಯಿತು. ಈ ಹೆಚ್ಚಿನ 4360 ಕೋಟಿ ರೂಪಾಯಿಗಳನ್ನು ತೈಲ ಖಾತೆಗೇ ಹಿಂತಿರುಗಿಸಬೇಕಲ್ಲವೆ? ಮೇಲಿನ ಎರಡೂ ಸೇರಿದರೇ ಸುಮಾರು 10000 ಕೋಟಿ ರೂಪಾಯಿಗಳಾಗುತ್ತದೆ.

ಇದಕ್ಕೂ ಹೆಚ್ಚಿನ ವಿಸ್ಮಯದ ವಿಷಯಗಳಿವೆ. ಕೇಂದ್ರ ಸರಕಾರ ತೈಲ ಉದ್ದಿಮೆ ಅಭಿವೃದ್ಧಿ ಕಾಯಿದೆಯೊಂದನ್ನು ಹೊರಡಿಸಿ ತೈಲ ಅಭಿವೃದ್ಧಿ ಕರವನ್ನು ಹೇರುತ್ತಲೇ ಇದೆ. ಇದನ್ನು ಈ ತೈಲ ಖಾತೆ ಕೊರತೆ ನೀಗಲೆಂದೇ ಮಾಡಿದ್ದು. 1996 ರ ಮಾರ್ಚಿಯವರೆಗೆ ಒಟ್ಟು 26000 ಕೋಟಿ ರೂಪಾಯಿಗಳನ್ನು ಸಂಗ್ರಹಿಸಲಾಗಿದೆ. ಕಾಯಿದೆಯ ಪ್ರಕಾರ ಪೂರ್ತಿ ಹಣ ತೈಲ ಉದ್ದಿಮೆಯ ಅಭಿವೃದ್ಧಿಗಾಗಿಯೇ ಬಳಕೆಯಾಗಬೇಕು. ಆದರೆ 1991-92 ರ ವರೆಗೆ ಒಟ್ಟು 902 ಕೋಟಿ ರೂಪಾಯಿಗಳನ್ನು ಮಾತ್ರ ವರ್ಗಾಯಿಸಲಾಯಿತು. ನಂತರ ಒಂದು ಪೈಸೆಯೂ ಇಲ್ಲ. ಇದಕ್ಕಿಂತ ಹೆಚ್ಚಿನ ಅಪರಾಧವಿದೆಯೇ? ದೇಶದ ತೈಲ ಉದ್ದಿಮೆಯೇ ಬೆಳೆಯದಂತೆ ಸ್ವಾವಲಂಬಿಯಾಗದಂತೆ ತಡೆವ ಕ್ರಮ ಇದು. ಹಣಕಾಸು ಮಂತ್ರಾಲಯದ ಇಂತಹ ಅಪರಾಧಕ್ಕೆ ಈಗ ಜನಸಾಮಾನ್ಯರು ಬೆಲೆ ತೆರಬೇಕು.

ಇಲ್ಲಿ ಇನ್ನೊಂದು ಬಹುಮುಖ್ಯ ಅಂಶವಿದೆ. ಆಮದು ಮಾಡುವ ವಸ್ತುಗಳು ದುಬಾರಿಯಾಗಿ ಆ ಮೂಲಕ ಆಮದು ಕಡಿಮೆ ಆಗಬೇಕೆಂದು ಆಮದು ಸುಂಕ ಹೇರಲಾಗುತ್ತದೆ. ಇದರಿಂದ ಆಂತರಿಕ ಉದ್ದಿಮೆಯ ರಕ್ಷಣೆಯೂ ಆಗುತ್ತದೆ. ಅವು ಕಂದಾಯ ಮೂಲವೆಂದು ಸುಂಕವನ್ನು ಮಾತ್ರ ಕಂದಾಯವೆಂದು ಪರಿಗಣಿಸಲಾಗುತ್ತದೆ. ಆದ್ದರಿಂದಲೇ ಜನ ಇದಕ್ಕೆ ಬೆಲೆ ತೆರಬೇಕೆಂದು ಬಯಸುವುದು. ದೇಶೀ ಉದ್ದಿಮೆ ರಕ್ಷಿಸುವ ಮಾತಂತೂ ದೂರವೇ ಉಳಿಯಿತು.

ಈಗ ಈ ಆಮದು ಸುಂಕ ಹೇರದೇ ಹೋದಲ್ಲಿ ತೈಲ ಖಾತೆಯ ಕೊರತೆ ಅಷ್ಟರ ಮಟ್ಟಿಗೆ ಕಡಿಮೆ ಆಗುತ್ತದೆ. ಕೇಂದ್ರ ಹಣಕಾಸು ಮಂತ್ರಾಲಯ ತನ್ನ ಆದಾಯ ಹೆಚಿಸಿಕೊಳ್ಳಲುಇದನ್ನೂ ಬಳಸುತ್ತದೆ. ಅದಕ್ಕೆ ಮತ್ತೆ ಜನ ಸಾಮಾನ್ಯರು ಬೆಲೆ ತೆರುವಂತೆ ಮಾಡುತ್ತದೆ. ಉದಾಹರಣೆಗೆ ತೆಗೆದುಕೊಳ್ಳುವುದಾದರೆ 1996-97 ರಲ್ಲಿ ತೈಲ ಉದ್ದಿಮೆ ಈ ಸುಂಕಗಳ ಮೂಲಕ ಕೇಂದ್ರ/ರಾಜ್ಯ ಖಜಾನೆಗಳಿಗೆ ತೆತ್ತಿದ್ದು 34200 ಕೋಟಿ ರೂಪಾಯಿಗಳು.

ನೈಸರ್ಗಿಕ ಅನಿಲದ ಬೆಲೆಗಳು

ಇನ್ನೊಂದು ವಿಷಯ ನೋಡಿ. ಈ ತೈಲ ಖಾತೆ ನೈಸರ್ಗಿಕ ಅನಿಲವನ್ನು ಒಳಗೊಳ್ಳುವುದಿಲ್ಲ. (ಇಲ್ಲಿ ನೈಸರ್ಗಿಕ ಅನಿಲವೆಂದರೆ ಅಡುಗೆ ಅನಿಲವೆಂದು ಭಾವಿಸಿ ಗೊಂದಲಗೊಳ್ಳಬೇಡಿ. ಅಡುಗೆ ಅನಿಲ ದ್ರವೀಕೃತ ಪೆಟ್ರೋಲಿಯಂ ಅನಿಲ). ಸಾರ್ವಜನಿಕ ವಲಯದ ಒಎನ್‌ಜಿಸಿ ಈ ನೈಸರ್ಗಿಕ ಅನಿಲದ ಪೂರೈಕೆದಾರ. ಭಾರತದಲ್ಲಿ ನೈಸರ್ಗಿಕ ಅನಿಲದ ಬೆಲೆ ಅಂತರ್ರಾಷ್ಟ್ರೀಯ ಬೆಲೆಯ ಶೇ.50 ರಿಂದ ಶೇ 60 ರಷ್ಟು ಕಡಿಮೆ. ಈ ನೈಸರ್ಗಿಕ ಅನಿಲ ರಸಗೊಬ್ಬರ ಉತ್ಪಾದನೆಯಲ್ಲಿ ಬಳಕೆಯಾಗುತ್ತದೆ. ರಸಗೊಬ್ಬರದ ಉತ್ಪಾದನೆಗೆ ಸಹಾಯಧನ ನೀಡುವ ಸರಕಾರ ಈ ಬೆಲೆ ಏರಿಸಿಲ್ಲ ಸರಿ, ಆದರೆ ಈ ನೈಸರ್ಗಿಕ ಅನಿಲದ ಶೇ40ರಷ್ಟು ಇತರಉದ್ದಿಮೆಗಳಲ್ಲಿಬಳಕೆಯಾಗುತ್ತದೆ. ಈ ಉದ್ದಿಮೆಗಳು ಆದ್ಯತೆಯವಲ್ಲ, ಅಷ್ಟು ಮುಖ್ಯವಾದವಲ್ಲ. ಕಳೆದ 7 ವರ್ಷಗಳಲ್ಲಿ ಈ ನೈಸರ್ಗಿಕ ಅನಿಲದ ಬೆಲೆ 1000 ಕ್ಯೂಬಿಕ್ ಮೀಟರಿಗೆ 2470 ರೂಪಾಯಿಯೇ ಇದೆ. ಇಷ್ಟೇ ಪ್ರಮಾಣದ ದ್ರವೀಕೃತ ಪೆಟ್ರೋಲಿಯಂ ಅನಿಲದ ಬೆಲೆ 23669. ಇದರಿಂದಾಗಿ ಉದ್ದಿಮೆಗಾರರು ನೈಸರ್ಗಿಕ ಅನಿಲವನ್ನೇ ಬಳಸಬಯಸುತ್ತಾರೆ. ಪೆಟ್ರೋಲಿಯಂ ಅನ್ನು ಆಮದು ಮಾಡಿಕೊಳ್ಳುವ ದೇಶ ಇಂತಹ ಬೆಲೆ ವ್ಯತ್ಯಾಸಕ್ಕೆ ಅವಕಾಶ ಕೊಡುವುದು ಸರಿ ಅಲ್ಲ. ನೈಸರ್ಗಿಕ ಅನಿಲದ ಬೆಲೆಯನ್ನು ಬರೀ ಒಂದು ಸಾವಿರದಷ್ಟು ಹೆಚ್ಚಿಸಿದರೆ ಬೊಕ್ಕಸಕ್ಕೆ 2000 ಕೋಟಿ ರೂಪಾಯಿಗಳು ಬರುತ್ತವೆ. ಆದ್ಯತೆಯಲ್ಲದ ವಲಯಕ್ಕೆ ಅಂತರ್ರಾಷ್ಟ್ರೀಯ ಬೆಲೆಯನ್ನು ಅನ್ವಯಗೊಳಿಸಿದರೆ ಸರಕಾರದ ಆದಾಯ ಗಣನೀಯವಾಗಿ ಏರುತ್ತದೆ.

ಹೀಗೆ ತೈಲ ಉದ್ದಿಮೆ ಅಭಿವೃದ್ಧಿ ಕರ, ಆಮದು ಸುಂಕ ಇತರ ಕರ ಮತ್ತು ಹಣಕಾಸು ಮಂತ್ರಾಲಯ ಎತ್ತಿಕೊಂಡಿದ್ದನ್ನು ಬಡ್ಡಿ ಸಮೇತ ವಾಪಸ್ಸು ಮತ್ತು ನೈಸರ್ಗಿಕ ಅನಿಲದ ಬೆಲೆ ಏರಿಕೆ ಇವೆಲ್ಲ ಸೇರಿದರೆ ತೈಲ ಖಾತೆಯ ಕೊರತೆಯನ್ನು ಪೂರ್ತಿಯಾಗಿ ತೊಡೆದುಹಾಕಬಹುದು.

ಜನ ಇದನ್ನು ಸಹಿಸುವುದಿಲ್ಲ

ಆದರೆ ಸರಕಾರ ಯಾಕೆ ಇದನ್ನು ಮಾಡುವುದಿಲ್ಲ? ಯಾಕೆಂದರೆ ಈ ತೈಲ ಉದ್ದಿಮೆ ಚಿನ್ನದ ಮೊಟ್ಟೆ ಇಡುವ ಕೋಳಿ. ತೈಲ ಖಾತೆಯ ಮಿಗುತೆಯನ್ನು ಬಜೆಟ್ ಕೊರತೆ ತೊಡೆದು ಹಾಕಲು ಬಳಸಿದರೆ ಉಳಿದ ಕೊರತೆಯ ಹೆಸರಿನಲ್ಲಿ ಬೆಲೆ ಏರಿಕೆ ಮಾಡಬಹುದು. ಈ ಜನ ಈ ವಿಶ್ವಾಸ ಘಾತುಕತನಕ್ಕೆ ಬೆಲೆ ತೆರುತ್ತಾರೆ. ಹಣಕಾಸು ಮಂತ್ರಾಲಯ ಮತ್ತೂ 'ಅನ್ಯಾಯ'ವೆಂದು ಕೂಗುತ್ತಲೇ ಡೀಸೆಲ್, ಸೀಮೆಎಣ್ಣೆ, ಅಡುಗೆ ಅನಿಲಗಳಿಗೆ ಸಹಾಯ ಧನ ನೀಡುವುದಿಲ್ಲವೇ? ಎಂದು ಕೇಳುತ್ತದೆ ಅದು. ಆದರೆ ಇದು ಸರಕಾರದ ಕರ್ತವ್ಯವಲ್ಲವೇ? ದೇಶದ ಜನತೆ ಒಂದು ಸಭ್ಯ ಜೀವನ ನಡೆಸುವ ಅನುಕೂಲ ಕಲ್ಪಿಸುವುದು ಸರಕಾರದ ಜವಾಬ್ದಾರಿಯಲ್ಲವೇ? ತೈಲ ಕಂಪನಿಗಳು 1996-97 ರಲ್ಲಿ ನೀಡಿದ ಸಹಾಯಧನ ಸುಮಾರು 18440 ಕೋಟಿ ರೂಪಾಯಿಗಳು. ಈಗ ತೈಲ ಖಾತೆಗೆ ಬರಬೇಕಾದ ಎಲ್ಲ ಬಾಕಿ ಬಂದರೆ(ಮೇಲೆ ವಿವರಿಸಿದಂತೆ) ಈ ಕಂಪನಿಗಳು ಇನ್ನೂ 6000 ಕೋಟಿ ರೂಪಾಯಿಗಳ ಸಹಾಯಧನ ನೀಡುವ ಸಾಮರ್ಥ್ಯ ಪಡೆಯುತ್ತವೆ. ಇದರಿಂದ ಜನರ ಬದುಕಿನ ಮಟ್ಟ ಅಪಾರವಾಗಿ ಸುಧಾರಿಸುತ್ತದೆ. (ಆದ್ದರಿಂದಲೇ)ಇದನ್ನು ಮಾಡುತ್ತಿಲ್ಲ.

ಇದು ನಮ್ಮನ್ನು ಸಹಾಯಧನಗಳ ಮೇಲಿನ ಸೈದ್ಧಾಂತಿಕ ನಿಲುವುಗಳತ್ತ ಕೊಂಡೊಯ್ಯುತ್ತದೆ. ಕೇಂದ್ರ ಹಣಕಾಸು ಮಂತ್ರಾಲಯ ಇತ್ತೀಚಿನ ಸಹಾಯಧನಗಳ ಬಗ್ಗೆ ಒಂದು ಶ್ವೇತಪತ್ರ ಹೊರಡಿಸಿ ಸಹಾಯಧನಗಳನ್ನು ನಿಲ್ಲಿಸಬೇಕೆಂದು ವಾದ ಹೂಡಿತು. ಇಂತಹ ವಾದವನ್ನು ಯಾರು ಮಾಡಬಹುದು? ಜನತೆಯ ಮತವನ್ನು ತನ್ನ ಬೊಕ್ಕಸ ಬೆಳೆಸಿಕೊಳ್ಳಲು ಉಪಯೋಗಿಸ ಬಯಸುವ ಲೆಕ್ಕಿಗ ಇಂತಹ ವಾದ ಮಾಡಬಹುದು. ಸರಕಾರದ ಜವಾಬ್ದಾರಿ ಇರುವುದು ಅಪಾರ ಸಂಖ್ಯೆಯ ಜನ ಸಾಮಾನ್ಯರಿಗೆ ಹೊರತು ಕೆಲವೇ ಕೆಲವು ದೊಡ್ಡ ಬಂಡವಾಳಿಗರಿಗಲ್ಲ. ಈ ಉದ್ದಿಮೆಗಾರರಿಗೆ ಲಾಭ ಮಾಡಿಕೊಡ ಹೊರಟರೆ ಜನರ ಮೇಲೆ ಹೊರೆ ಹೊರಿಸಲೇ ಬೇಕಾಗುತ್ತದೆ. ಜನತೆಯ ಆಶೋತ್ತರಗಳನ್ನು ಪೂರೈಸಬೇಕಾಗಿರುವ ಸರಕಾರ ಆಳುವ ವರ್ಗದ ಆಶೋತ್ತರಗಳನ್ನು ಪೂರೈಕೆ ಮಾಡುವುದರಿಂದ ಮಾಡುವ ಘರ್ಷಣೆ ಇದು.

ಜನತೆ ಯಾವುದೇ ಹೊಸ ಭಾರವನ್ನು ಹೊರಬಾರದು, ಹೊರುವುದು ಸಾಧ್ಯವೂ ಅಲ್ಲ. ತೈಲ ಖಾತೆಯ ಕೊರತೆ ತೊಡೆದು ಹಾಕಲು ಮೇಲೆ ಕಾಣಿಸಿದ ಹಲವು ವಿಧಾನಗಳಿವೆ. ದೇಶದ ದುಡಿವ ಜನ ಹೆಚ್ಚಿನ ಹೊರೆಯನ್ನು ಅವರ ಮೇಲೆ ಹೇರುವುದನ್ನು ಒಗ್ಗಟ್ಟಿನಿಂದ ಪ್ರತಿಭಟಿಸುತ್ತದೆ.

ಹಸುಳೆಯ ಯುದ್ಧಕ್ಕೆ ಕಳುಹುವರೆ?

ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

ಹಸುಳೆಯನ್ನು ಯುದ್ಧಕ್ಕೆ ಕಳುಹಿಸಿದರೆ ಅದರಿಂದ ಖಂಡಿತವಾಗಿ ಯುದ್ಧದ ಆಘಾತವನ್ನು ತಡೆದುಕೊಳ್ಳಲು ಸಾಧ್ಯವಿಲ್ಲ. ಹಾಗೆಯೇ ಭಾರತದ ರೈತನನ್ನು ಉದಾರೀಕರಣವನ್ನು ಮಾರುಕಟ್ಟೆಗೆ ಕಳುಹಿಸಿದರೆ ಆಗುತ್ತದೆ. ಉದಾರೀಕರಣವಾದಿಗಳು ದೇಶದ ಕೃಷಿಯನ್ನು ಪೂರ್ತಿ ಮಾರುಕಟ್ಟೆ ಶಕ್ತಿಗಳ ಕೃಪೆಗೆ ಬಿಟ್ಟುಬಿಡಬೇಕೆಂದು ವಾದಿಸುತ್ತಾರೆ. ರೈತ ನಾಯಕನೆಂದು ಕರೆದುಕೊಳ್ಳುವ ಶರದ್ ಜೋಷಿ ಮಹಾಶಯನಂತವರು ಬಹಳ ಒತ್ತಾಯದ ವಾದ ಹೂಡುತ್ತಾರೆ.

ಅವರ ಪ್ರಕಾರ ಲೆವಿ ಸಂಗ್ರಹಣೆ ಬಿಟ್ಟುಬಿಡಿ. ಸಹಾಯಧನ ನೀಡಬೇಡಿ ಭೂಮಿತಿಯನ್ನು ತೆಗೆದುಹಾಕಿಬಿಡಿ. ಅಂದರೆ ನಮ್ಮ ದೇಶದ ಕೃಷಿ ಬೇಗ ಬೆಳೆಯುತ್ತದೆ. ಕೃಷಿ ರಫ್ತು ಹೆಚ್ಚುತ್ತದೆ. ರೈತರು ಶ್ರೀಮಂತರಾಗುತ್ತಾರೆ. ರೈತರೆಲ್ಲ ಶ್ರೀಮಂತರಾದರೆ ದೇಶವೇ ಸಮೃದ್ಧವಾದಂತೆ.

ನಮ್ಮ ಉದಾರೀಕರಣವಾದಿಗಳು ಸುಂದರ ಕನಸುಗಳ ಮಾರಾಟಗಾರರು. ಆದರೆ ಭಯಂಕರ ವಾಸ್ತವದ ಮಾರಾಟಗಾರರೂ ಹೌದು. ಯಾಕೆಂದರೆ ಅವರು ಮಾರುವ ಸುಂದರ ಕನಸುಗಳನ್ನು ಕೊಂಡರೆ ಅದು ನಮ್ಮ ಕೈಗೆ ಬರುವಷ್ಟರಲ್ಲಿ ಭಯಂಕರ ವಾಸ್ತವವಾಗಿ ಬಿಡುತ್ತದೆ. ಉದಾರೀಕರಣದ ಇತಿಹಾಸವನ್ನು ತೆಗೆದು ನೋಡಿದರೆ ಅದು ದೇಶದ ದುರ್ಬಲರಿಗೆ ಹೆಚ್ಚಿನ ಹಾನಿ ಮಾಡಿದೆ ಹೊರತು ಅನುಕೂಲವನ್ನಲ್ಲ. ಕೇಂದ್ರ ಕೃಷಿ ಮಂತ್ರಾಲಯದ ಅರ್ಥಶಾಸ್ತ್ರಜ್ಞ ಡಾ|| ಜಿ.ಎಸ್.ರಾಯ್ ಹೇಳುವಂತೆ "ಯಾವುದೇ ಕೃಷಿ ಉತ್ಪನ್ನದ ಮುಕ್ತ ವ್ಯಾಪಾರವನ್ನು ಬಿಡುವುದು ಸದ್ಯಕ್ಕೆ ಸಾಧ್ಯವಿಲ್ಲ" ಇವರ ಪ್ರಕಾರ ದೇಶದ ರೈತ ಇದಕ್ಕೆ ಇನ್ನೂ ಸಿದ್ದವಾಗಿಲ್ಲ.

ಗೋಧಿಯ ಉತ್ಪಾದನೆಯಲ್ಲಿ ಅಲ್ಪಸ್ವಲ್ಪ ಏರುಪೇರಾದದ್ದರ ಲಾಭ ಪಡೆದು ಕಾಳಸಂತೆಕೋರರು ಅಕ್ರಮ ದಾಸ್ತಾನು ಮಾಡಿ ದೇಶದಲ್ಲಿ ಗೋಧಿ ಬೆಲೆಗಳು ಹೆಚ್ಚಾಗಿ ಜನ ಅಲ್ಲೋಲಕಲ್ಲೋಲವಾಗುವಂತೆ ಮಾಡಿದರು. ಇದು ಬಹುತೇಕ ನಿರ್ಬಂಧಗಳು ಇರುವಾಗಲೇ. ನಿರ್ಬಂಧಗಳನ್ನು ತೆಗೆದರೆ ಇನ್ನೇನಾಗುತ್ತೋ. ಅಲ್ಲದೆ ಗೋಧಿ ಆಮದನ್ನೂ ಸಹ ಮಾಡಿಯಾಯಿತು. ಇದರಿಂದ ಬೆಲೆ ಇಳಿಯುವ ಬದಲು ಹೆಚ್ಚಾಯಿತು.

ಇಂದಿನ ದೇಶದ ಆಹಾರ ಧಾನ್ಯ ದಾಸ್ತಾನಿನ ಪರಿಸ್ಥಿತಿಯಲ್ಲಿ ಸ್ವಲ್ಪ ಏರುಪೇರಾದರೂ ದೊಡ್ಡ ಬಿಕ್ಕಟ್ಟು ಉಂಟಾಗುವ ಸಾಧ್ಯತೆ ಇದೆ. ಬಿಕ್ಕಟ್ಟು ಉಂಟಾದರೆ ಅದು ಉದಾರೀಕರಣದ ಬಿಕ್ಕಟ್ಟು ಎನ್ನಲು ಅಡ್ಡಿಯೇನಿಲ್ಲ.

ಆಹಾರ ಬೆಲೆ ಹೆಚ್ಚಿಸುವ ಹುನ್ನಾರ

ಹಣಕಾಸು ಕೊರತೆ ಕಡಿಮೆ ಮಾಡಲೇಬೇಕೆನ್ನುವ ಐಎಂಎಫ್ ವಿಶ್ವ ಬ್ಯಾಂಕ್‌ಗಳ ಆಜ್ಞೆಯ ಮೇರೆಗೆ ಭಾರತ ಸರಕಾರ ಯಾವುದೇ ಸಹಾಯ ಧನ ಹೆಚ್ಚಾಗದಂತೆ ನೋಡಿಕೊಳ್ಳುವ ತೀರ್ಮಾನ ತೆಗೆದುಕೊಂಡಿರುವಂತಿದೆ. ಜನ ಉಪವಾಸ ಸತ್ತರೂ ಪರವಾಗಿಲ್ಲ ಆಹಾರಕ್ಕೆ ಸಹಾಯ ಧನ ಹೆಚ್ಚಿಸುವುದಿಲ್ಲ ಎಂಬ ಧೋರಣೆ ಗಟ್ಟಿಯಾಗುತ್ತಿರುವಂತಿದೆ.

ಈಗ ಏನಾಗಿದೆಯೆಂದರೆ ಸರಕಾರ ಗೋಧಿ ಸೇರಿದಂತೆ ಕೆಲವು ಆಹಾರ ಧಾನ್ಯಗಳ ಬೆಂಬಲ ಬೆಲೆಯನ್ನು ಹೆಚ್ಚಿಸಿತು. ಇದರಿಂದಾಗಿ ಒಟ್ಟಾರೆ ಈ ಆಹಾರ ಧಾನ್ಯಗಳ ಬೆಲೆ ಹೆಚ್ಚಾಗಿ ಆಹಾರ ಧಾನ್ಯಗಳ ಮೇಲಿನ ಸಹಾಯ ಧನವೂ ಹೆಚ್ಚಾಗಿ ಬಿಡುತ್ತದೆ. ಇದನ್ನು ತಡೆಗಟ್ಟುವುದೇ ಈಗಿನ ಮಹತ್ಕಾರ್ಯ. ಹೇಗೆ ಮಾಡುವುದು? ಈ ಆಹಾರ ಧಾನ್ಯಗಳ ಸರಬರಾಜು ಬೆಲೆಯನ್ನು ಹೆಚ್ಚಿಸಿಬಿಡುವುದು ಸುಲಭವಲ್ಲವೇ? ಹೆಚ್ಚಿಗೆ ತೆತ್ತು ಕೊಂಡಿದ್ದೇವೆ. ಈಗ ಹೆಚ್ಚಿಗೆ ಪಡೆದು ಮಾರಿದರಾಯಿತು. ಎಂತಹ ಉತ್ತಮ ವ್ಯಾಪಾರಿ ಬುದ್ದಿಯಲ್ಲವೇ? ಕೇಂದ್ರ ಸರಕಾರ ಅದನ್ನೇ ಮಾಡುತ್ತಿರುವುದು.

ಕಳೆದೆರಡು ವರ್ಷಗಳ ಆಹಾರ ಧಾನ್ಯಗಳ ಮೇಲಿನ ಸಹಾಯ ಧನ ನೋಡಿದರೆ 1995-96ರಲ್ಲಿ ಅದು 5377 ಕೋಟಿ ರೂಪಾಯಿಗಳಿದ್ದದ್ದು 1996-97ರಲ್ಲಿ 6066 ಕೋಟಿ ರೂಪಾಯಿಗಳಿಗೇರಿತು. ಈಗ ಗೋದಿಯ ಕನಿಷ್ಠ ಬೆಂಬಲ ಬೆಲೆ ಹೆಚ್ಚಿಸಿರುವುದರಿಂದ 900 ಕೋಟಿ ರೂಪಾಯಿಗಳ ಅಧಿಕ ಸಹಾಯ ಧನ ನೀಡಬೇಕಾಗುತ್ತದೆ. ಇದಕ್ಕೆ ಸರಕಾರ ತಯಾರಿಲ್ಲ. ಯಾಕೆಂದರೆ ಇದರಿಂದ ಹಣಕಾಸು ಕೊರತೆ ಹೆಚ್ಚುತ್ತದೆ. ಆದ್ದರಿಂದಲೇ ಸರಬರಾಜು ಬೆಲೆ ಹೆಚ್ಚಿಸುವ ಹುನ್ನಾರ.

ಪರಿಣಾಮ ಏನಾಗುತ್ತದೆ? ಪರಿಣಾಮ ಆಹಾರ ಧಾನ್ಯಗಳ ಬೆಲೆ ಗಗನಕ್ಕೇರುತ್ತದೆ. ಈಗೇನು ಅದು ಭೂಮಿಯ ಮೇಲೆ ಇದೆಯಾ ಎಂದು ಕೇಳಬೇಡಿ. ಈಗಾಗಲೇ ಗಗನದಲ್ಲಿರುವ ಬೆಲೆ ಇನ್ನೂ ಮೇಲಕ್ಕೆ ಹೋಗುತ್ತದೆ. ಆಗ ಏನಾಗುತ್ತದೆ? ಎರಡ್ಹೊತ್ತು ಉಣ್ಣುವ ಬಡವರು ಒಂದ್ಹೊತ್ತು ಉಣ್ಣಬೇಕಾಗುತ್ತದೆ. ಒಪ್ಪೊತ್ತು ಉಣ್ಣುವವರು ಅರೆ ಹೊಟ್ಟೆ(ಒಪ್ಪೊತ್ತು) ಉಣ್ಣಬೇಕಾಗುತ್ತದೆ.

ಆದರೆ ಸರಕಾರಕ್ಕೇನು. ಈ ಸಾಲಿನ ಬಜೆಟ್ಟು ಶ್ರೀಮಂತರಿಗೆ ನೀಡಿದ ರಿಯಾಯಿತಿಗಳಿಗೆ ಲೆಕ್ಕವಿದೆಯೇ? ಇಲ್ಲ. ಶ್ರೀಮಂತರಿಗೆ ರಿಯಾಯಿತಿ, ಸಹಾಯ ಧನ ನೀಡಿದರೆ ದೇಶದ ಅಭಿವೃದ್ಧಿಯಾಗುತ್ತದೆ. ಬಡವರಿಗೆ ನೀಡಿದರೆ ಅದು ನಷ್ಟವಾಗುತ್ತದೆ. ಹೇಗಿದೆ ಈ ತರ್ಕ?

'ಮಳೆ ಹುಯ್ದರೆ ಕೆಡದು. ಮಗ ಉಂಡರೆ ಕೆಡದು' ಎಂಬ ಕನ್ನಡ ಗಾದೆಯ ಒಂದು ಚೂರಾದರೂ ಈ ಕೇಂದ್ರ ಸರಕಾರದ ಅರ್ಥ ಮಂತ್ರಿಗೆ ಅರ್ಥವಾದರೆ ಸಾಕಾಗಿತ್ತು. ಆದರೆ ಆತ ಅನರ್ಥ ಮಂತ್ರಿ ಅಲ್ಲವೇ? ಹೇಗೆ ಅರ್ಥವಾಗಬೇಕು?

ಮನೆ ಮಗ ಬಡವಾದರೆ ಅತಿಥಿ ತಿಂದು ಕೊಬ್ಬಿದ

ಇದು ಭಾರತೀಯ ಕಂಪನಿಗಳು ಮತ್ತು ಭಾರತದಲ್ಲಿನ ಬಹುರಾಷ್ಟ್ರೀಯ ಕಂಪನಿಗಳ ಹೋಲಿಕೆ. ಡಿಸೆಂಬರ್ 31, 1996ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ಇವುಗಳ ಹೋಲಿಕೆ ನೋಡಿದರೆ ಭಾರತೀಯ ಕಂಪನಿಗಳು ಸೊರಗಿರುವುದು ಅದೇ ಸಮಯದಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಒಳ್ಳೆ ವ್ಯಾಪಾರ ಮಾಡಿರುವುದು ಕಂಡು ಬರುತ್ತದೆ.

ಮೂವತ್ತಾರು ಬಹುರಾಷ್ಟ್ರೀಯ ಕಂಪನಿಗಳನ್ನು ಭಾರತೀಯ ಕಂಪನಿಗಳಿಗೆ ಹೋಲಿಸಿ ಅಧ್ಯಯನ ಮಾಡಲಾಯಿತು. ಭಾರತೀಯ ಕಂಪನಿಗಳ ಹಣಕಾಸು ಸಾಮರ್ಥ್ಯ ಬಹುರಾಷ್ಟ್ರೀಯ ಕಂಪನಿಗಳಿಗೆ ಹೋಲಿಸಿದರೆ ಬಹಳ ಕಡಿಮೆ ಇರುವುದು ಕಂಡು ಬಂತು.

ತೊಂಬತ್ತೊಂದು ಕಂಪನಿಗಳ ವ್ಯಾಪಾರ 1996ರಸಾಲಿನಲ್ಲಿಶೇ.36ರಷ್ಟು ಹೆಚ್ಚಾಯಿತು. ಆದರೆ ಅವರ ವ್ಯಾಪಾರ ಲಾಭ ಬರೀ ಶೇ. 17ರಷ್ಟು ಹೆಚ್ಚಿತ್ತು.ಬಡ್ಡಿದರ ಹೆಚ್ಚಿದ್ದರಿಂದ ಲಾಭದ ಪ್ರಮಾಣ ಬಹಳ ಕಡಿಮೆಯಾಯಿತು. ಇದೇ ಸಮಯದಲ್ಲಿ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಲಾಭವನ್ನು ಶೇ. 23ರಷ್ಟು ಹೆಚ್ಚಿಸಿಕೊಂಡಿವೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ ಅಧ್ಯಯನ ಆಯ್ದುಕೊಂಡ ಕಂಪನಿಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಒಟ್ಟಾರೆ ವ್ಯಾಪಾರದ ಶೇ. 77ರಷ್ಟನ್ನು ಸಾಧಿಸಿದ್ದರೆ ನಿವ್ವಳ ಲಾಭದಲ್ಲಿ ಶೇ. 86ರಷ್ಟನ್ನು ಈ ಬಹುರಾಷ್ಟ್ರೀಯ ಕಂಪನಿಗಳು ಬಾಚಿಕೊಂಡಿದ್ದವು.

ನಿರ್ದಿಷ್ಟ ಕಂಪನಿಗಳ ಉದಾಹರಣೆ ತೆಗೆದುಕೊಳ್ಳುವುದಾದರೆ ಬಹುರಾಷ್ಟ್ರೀಯ ಕಂಪನಿಯಾದ ಹಿಂದೂಸ್ತಾನ್ ಲಿವರ್ ಒಟ್ಟು 6600 ಕೋಟಿ ರೂಪಾಯಿಗಳ ಮಾರಾಟ ಸಾಧಿಸಿತು. ಅದರ ನಿವ್ವಳ ಲಾಭ 413 ಕೋಟಿ ರೂಪಾಯಿಗಳು. ಇದೊಂದೇ ಬಹುರಾಷ್ಟ್ರೀಯ ಕಂಪನಿ ಒಟ್ಟು ಮಾರಾಟದ ಶೇ. 25ರಷ್ಟನ್ನು ಬಾಚಿಕೊಂಡಿದೆ. ಲಾಭದ ಶೇ. 34ರಷ್ಟನ್ನು ಬಾಚಿಕೊಂಡಿದೆ.

ಇತರ ಬಹುರಾಷ್ಟ್ರೀಯ ಕಂಪನಿಗಳಾದ ಎಬಿಬಿ, ಬಾಟಾ, ಕ್ಯಾಸ್ಟ್ರೋಲ್, ನೋಲ್ ಫವಾಗ್ ಮತ್ತು ಫಿಲಿಪ್ಸ್ ಇಂಡಿಯಾ ಸಹ ದೊಡ್ಡ ಪ್ರಮಾಣದ ಲಾಭ ಗಳಿಸಿವೆ.

ಉದಾರೀಕರಣದಡಿ ಏನಾಗುತ್ತದೆ ಎಂಬುದಕ್ಕೆ ಇದು ಸೂಚನೆ. ಭಾರತದ ಸಣ್ಣ ಪುಟ್ಟ ಕಂಪನಿಗಳು ದಿವಾಳಿಯೆದ್ದು ಹೋಗುತ್ತದೆ. ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಬೃಹತ್ ಗಾತ್ರದಿಂದಾಗಿ ಇಡೀ ಮಾರುಕಟ್ಟೆಯನ್ನು ಆಕ್ರಮಿಸಿಕೊಳ್ಳುತ್ತವೆ.

ಸಿಆರ್‌ಬಿ ಹಗರಣ

ಉದಾರೀಕರಣವೆಂದರೆ ಇನ್ನೊಂದು ಅರ್ಥವೇ 'ಹಗರಣ' ಎಂಬ ತಿದ್ದುಪಡಿ ತರುವ ಅವಶ್ಯಕತೆ ಕಾಣಿಸುತ್ತಿದೆ. ಯಾಕೆಂದರೆ ಉದಾರೀಕರಣ ಬಂದಂದಿನಿಂದ ಹಗರಣಗಳ ಸರಮಾಲೆ ದೇಶದ ಜನತೆಯ ಕೊರಳಿಗೆ ಉರುಳಾಗಿ ಬೀಳುತ್ತಿದೆ. ಸಿಆರ್‌ಬಿ ಎಂಬ ಬ್ಯಾಂಕೇತರ ಹಣಕಾಸು ಕಂಪನಿಯದು ಇತ್ತೀಚಿನದ್ದು. ಅಂದರೆ ಈಗಷ್ಟೇ ವಿಷಯ ಹೊರಬಂದಿದೆ. ಆದರೆ ವಿಷಯ ಹೊರ ಬರುತ್ತಿರುವಂತೆಯೇ 'ಗಿಳಿಯು ಪಂಜರದೊಳಿಲ್ಲ' ಎಂಬಂತೆ ಕಂಪನಿಯ ಮುಖ್ಯ ವ್ಯಕ್ತಿ ಸಿ.ಆರ್. ಭನ್ಸಾಲಿ ಕೆನಡಾಕ್ಕೆ ಓಡಿ ಹೋಗಿಬಿಟ್ಟಿದ್ದಾನೆ.

ಅಧಿಕ ಪ್ರತಿಫಲ(ಬಡ್ಡಿ) ನೀಡುವ ಭರವಸೆ ನೀಡಿ ಸಾರ್ವಜನಿಕರಿಂದ ಈ ಸಿ.ಆರ್.ಭನ್ಸಾಲಿಯಾ ಕಂಪನಿಯಾದ ಸಿಆರ್‌ಬಿ ಕ್ಯಾಪಿಟಲ್ ಸುಮಾರು 600 ಕೋಟಿ ರೂಪಾಯಿಗಳನ್ನು ಸಂಗ್ರಹಿಸಿತ್ತು. ಈ ಹಣವನ್ನು ಏನೇನು ಮಾಡಿತ್ತೋ ಗೊತ್ತಿಲ್ಲ. ಕೆಲವು ದಿನಗಳ ಹಿಂದೆ ಅದು ತನ್ನ ಕಚೇರಿಗಳನ್ನು ಮುಚ್ಚಿತು. ಠೇವಣಿ ಇಟ್ಟ ಜನ ಕಂಗಾಲಾದರು.

ಭಾರತೀಯ ರಿಸರ್ವ್ ಬ್ಯಾಂಕ್ ಭನ್ಸಾಲಿ ಮಹಾಶಯನಿಗೆ ನೋಟೀಸ್ ನೀಡಿ ಕೂಡಲೇ ಹಾಜರಾಗಿ ವಿವರಣೆ ನೀಡುವಂತೆ ಕೇಳಿತು, ಆತ ಹಾಜರಾಗಲಿಲ್ಲ. ಬದಲಿಗೆ ಕೆನಡಾಕ್ಕೆ ಓಡಿ ಹೋದ ಯಾವುದೇ ಸುಳಿವನ್ನೂ ನೀಡಲಿಲ್ಲ. ತನ್ನ ಆಸ್ತಿ ಪಾಸ್ತಿಗಳನ್ನೂ ಮಾರಿಕೊಂಡಿರುವುದು ಈಗ ಬೆಳಕಿಗೆ ಬಂದಿದೆ.

ಈಗಾಗಲೇ ತನಿಖೆ ನಡೆಯುತ್ತಿದ್ದು ತನಿಖೆ ಮಾಡುತ್ತಿರುವ ಸಂಸ್ಥೆ ಸಿಬಿಐ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡಂತೆ ಕಂಡು ಬರುವುದಿಲ್ಲ.

ಹೇಗೆ ಇರಲಿ ಉದಾರೀಕರಣದ ಕಾಯಿದೆಗಳು ಹೇಗಿದೆಯೆಂದರೆ ಒಬ್ಬ ಮೋಸ ಮಾಡುತ್ತಿದ್ದಾರೆ ಎಂದರೆ ಅದನ್ನು ತಡೆಯಲು ಅವಕಾಶವಿಲ್ಲ. ಆತ ಮೋಸ ಮಾಡಿ ಓಡಿ ಹೋದ ಮೇಲೆ ಇಲ್ಲೆಲ್ಲಾ ಗುಲ್ಲು ಅಷ್ಟೇ.

ಈಗ ತಮ್ಮ ಜೀವನದ ಕಷ್ಟದ ದುಡಿಮೆಯನ್ನೇ ಕಳೆದುಕೊಂಡು ನರಳುತ್ತಿರುವ ಜನಸಾಮಾನ್ಯರು ಏನು ಮಾಡ ಬೇಕು? ಉದಾರೀಕರಣವಂತೂ ಇಂತ ಹೊಸ ಹೊಸ ಅನುಭವವನ್ನು ನೀಡದೇ ಬಿಡದು. ಸಾಮೂಹಿಕ ಹೋರಾಟವೊಂದೇ ಉಳಿದಿರುವ ದಾರಿ.

ಗಾಯದ ಮೇಲೆ ಬರೆ

ಇದು ಕರ್ನಾಟಕದ ಸರಕಾರ ರಾಜ್ಯದ ಜನಸಾಮಾನ್ಯರಿಗೆ ನೀಡಲಿರುವ ಬಹುಮಾನ. ವಿದ್ಯುತ್ತಿನ ದರ, ಪ್ರಯಾಣದ ದರ, ನೀರಿನ ದರಗಳನ್ನೆಲ್ಲಾ ಹೆಚ್ಚಿಸಿ ಈಗ ಬಹಳ ದಿನಗಳೇನೂ ಆಗಿಲ್ಲ. ಆಗಲೇ ಮತ್ತೆ ಜುಲೈ 1ರಿಂದ ಶೇ. 13ರಷ್ಟು ಬೆಲೆ ಏರಿಸುವ ತಯಾರಿಯನ್ನು ಸರಕಾರ ಮಾಡುತ್ತಿದೆ.

ಈಗಾಗಲೇ ಬೆಲೆಯೇರಿಕೆಯ ಗಾಯದಿಂದ ನರಳುತ್ತಿರುವ ರಾಜ್ಯದ ಜನರಿಗೆ ಈ ಗಾಯದ ಮೇಲೆ ಬರೆ ಎಳೆಯುವ ಹುನ್ನಾರ ಸರಕಾರದ್ದು.

ರಾಜ್ಯದ ಜನತೆ ಈ ಬೆಲೆ ಏರಿಕೆಗೆ ತಕ್ಕ ಉತ್ತರ ನೀಡಲು ತಯಾರಾಗಿರಬೇಕಾದದ್ದು ಈಗಂತೂ ಅನಿವಾರ್ಯ.

"ರಸಗೊಬ್ಬರ ಕಾರ್ಖಾನೆಗಳನ್ನು ಮುಚ್ಚಿ"

ಇನ್ನೊಂದು ಸರಕಾರಿ ಕಾರ್ಯದರ್ಶಿಗಳ ಸಮಿತಿಯ ಆಘಾತಕಾರಿ ಶಿಫಾರಸು

ಕೇಂದ್ರ ಸರಕಾರದ ಇಲಾಖೆಗಳ ಕಾರ್ಯದರ್ಶಿಗಳ ಸಮಿತಿ ಈ ಹಿಂದೆ ಪುನರುಜ್ಜೀವನಗೊಳಿಸಬೇಕೆಂದು ಸರ್ವಸಮ್ಮತಿಯಿಂದ ನಿರ್ಧರಿಸಲಾದ 70 ಎನ್‌ಟಿಸಿ ಗಿರಣಿಗಳನ್ನು ಮುಚ್ಚಬೇಕೆಂದು ಶಿಫಾರಸು ಮಾಡಿದ ಸುದ್ದಿಯನ್ನು ನೀವು ಈಗಾಗಲೇ ಓದಿರುವಿರಿ. ಇಂತಹ ಇನ್ನೊಂದು ಸಮಿತಿ ಈಗ ಕೆಲವು ರಸಗೊಬ್ಬರ ಕಾರ್ಖಾನೆಗಳನ್ನು ಮುಚ್ಚಬೇಕೆನ್ನುವ ಆಘಾತಕಾರಿ ಶಿಫಾರಸು ಮಾಡಿದೆ. ರೋಗಗ್ರಸ್ತ ರಸಗೊಬ್ಬರ ಸ್ಥಾವರಗಳನ್ನು ಪುನರುಜ್ಜೀವನಗೊಳಿಸಿ ಸರಿಯಾದ ದೇಶೀ ಉತ್ಪಾದನೆಯನ್ನು ಹೆಚ್ಚಿಸಬೇಕೆಂದು ಸಂಸದೀಯ ಸ್ಥಾಯೀ ಸಮಿತಿಯು ಏಳು ವರದಿಗಳನ್ನು ಹಾಗೂ ಸರಕಾರ ಈ ಹಿಂದಿನ ನಿರ್ಣಯವನ್ನು ಈ ಸಮಿತಿ ಸಂಪೂರ್ಣವಾಗಿ ಬದಿಗೆ ತಳ್ಳಿದೆ. ತಪ್ಪು ಅಂಕಿ-ಅಂಶಗಳನ್ನು ಆಧರಿಸಿ ಈ ಸಮಿತಿ ತನ್ನ ಕಾರ್ಯವ್ಯಾಪ್ತಿಯನ್ನು ಮೀರಿ ಹೋಗಿ ಇಂತಹ ಶಿಫಾರಸು ಮಾಡಿದೆ ಎಂದು ಅಭಿಪ್ರಾಯ ಪಟ್ಟಿರುವ ಸಿಪಿಐ(ಎಂ) ಸಂಸತ್ ಸದಸ್ಯ ದೀಪಂಕರ್ ಮುಖರ್ಜಿಯವರು ಪ್ರಧಾನ ಮಂತ್ರಿಗಳು ಮಧ್ಯ ಪ್ರವೇಶಿಸಿ ಈ ಕಾರ್ಯಾಚರಣೆಗಳ ಸಮಿತಿಯ ಶಿಫಾರಸುಗಳನ್ನು ಗಮನಕ್ಕೆ ತಗೊಳ್ಳದೆ ಪುನರುಜ್ಜೀವನ ಯೋಜನೆಗಳನ್ನು ಮುಂದುವರಿಸಬೇಕೆಂದು ಆಗ್ರಹಿಸಿದೆ.

ಪ್ರಧಾನ ಮಂತ್ರಿ ಗುಜ್ರಾಲ್‌ರವರಿಗೆ ಬರೆದ ಪತ್ರದಲ್ಲಿ ಸಿಪಿಐ(ಎಂ) ಸಂಸತ್ ಸದಸ್ಯರು ಅಂಕಿ-ಸಂಖ್ಯೆಗಳ ಮೂಲಕ ದೇಶೀ ರಸಗೊಬ್ಬರ ಉತ್ಪಾದನೆಯನ್ನು ಹೆಚ್ಚಿಸಲು ಸಾರ್ವಜನಿಕ ವಲಯದ ರಸಗೊಬ್ಬರ ಕಾರ್ಖಾನೆಗಳ ಪುನರುಜ್ಜೀವನದ ಅಗತ್ಯವನ್ನು ವಿವರಿಸಿದ್ದಾರೆ. 1995-96 ರಲ್ಲಿ 3783 ಲಕ್ಷ ಟನ್ ಯೂರಿಯಾಕ್ಕೆ 3047 ಕೋಟಿ ರೂ. ತೆತ್ತು ಆಮದು ಮಾಡಲಾಯಿತು. 1996-97 ರಲ್ಲಿ 23.28 ಲಕ್ಷ ಟನ್‌ಗಳಿಗೆ 2184 ಕೋಟಿ ರೂ. ತೆರಲಾಯಿತು. ಈ ವರ್ಷ ಯೂರಿಯಾ ಆಮದಿಗೆಂದು 2862 ಕೋಟಿ ರೂ. ಇಡಲಾಗಿದೆ.

ಇಂತಹ ಸ್ಥಿತಿಯಲ್ಲಿ ದೇಶೀ ಯೂರಿಯಾ ಉತ್ಪಾದನೆಯನ್ನು ಹೆಚ್ಚಿಸಲು ಸಾರ್ವಜನಿಕ ವಲಯದ ಎರಡು ರೋಗಗ್ರಸ್ತ ಘಟಕಗಳಿಂದ ಹಿಂದೂಸ್ತಾನ್ ಫರ್ಟಿಲೈಸರ್ ಕಾರ್ಪೊರೇಷನ್(ಹೆಚ್‌ಎಫ್‌ಸಿ) ಮತ್ತು ಫರ್ಟಿಲೈಸರ್ ಕಾರ್ಪೊರೇಷನ್(ಎಫ್‌ಸಿಐ)ಗಳನ್ನು ಪುನರುಜ್ಜೀವನಗೊಳಿಸಬೇಕು ಎಂದು ಯೋಚಿಸಲಾಗಿತ್ತು. ಇದಕ್ಕಾಗಿ ಏಪ್ರಿಲ್ 1995 ರಲ್ಲಿ ಒಂದು ಪುನರುಜ್ಜೀವನ ಯೋಜನೆಗೆ ಅನುಮೋದನೆ ನೀಡಲಾಗಿತ್ತು. ಎಫ್‌ಸಿಐನ ಸಿಂಧ್ರಿ(ಬಿಹಾರ್), ರಾಮಗುಂಡಂ(ಆಂಧ್ರ ಪ್ರದೇಶ) ಹಾಗೂ ತಲ ಚೇರ್ (ಒರಿಸ್ಸಾ) ಘಟಕಗಳನ್ನು ಹಾಗೂ ಹೆಚ್‌ಎಫ್‌ಸಿನ ದುರ್ಗಾಪುರ(ಪ.ಬಂಗಾಳ, ಬದಾನಿ(ಬಿಹಾರ್) ಹಾಗೂ ನಾಮರೂಪ್ (ಅಸ್ಸಾಂ) ಘಟಕಗಳನ್ನು ಪುನರುಜ್ಜೀವನಗೊಳಿಸಲು ಯೋಚಿಸಲಾಗಿತ್ತು. ಇದಕ್ಕೆ 2201 ಕೋಟಿ ರೂ. ಗಳ ಹೊಸ ಬಂಡವಾಳ ಹೂಡಿಕೆ ಬೇಕಾಗಿದ್ದು ಇದರಿಂದ ವರ್ಷಕ್ಕೆ 23 ಲಕ್ಷ ಟನ್‌ಗಳ ಹೆಚ್ಚಿನ ಯೂರಿಯಾ ಉತ್ಪಾದನೆಯಾಗುವುದೆಂದು ಅಂದಾಜು ಮಾಡಲಾಗಿತ್ತು. ಆದರೆ ಹಣದ ಅಭಾವದಿಂದ ಈ ಯೋಜನೆ ಜಾರಿಯಾಗಲಿಲ್ಲ.

ಹಣಕಾಸು ಸಂಸ್ಥೆಗಳಾದ ಐಸಿಐಸಿಐ ಮತ್ತು ಐಡಿಬಿಐ ಈ ಯೋಜನೆಗಳ ತಂತ್ರದ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಿದ ನಂತರ ಒಂದು ಹಣಕಾಸು ಯೋಜನೆಯನ್ನು ಈ ವರ್ಷ ಫೆಬ್ರವರಿಯಲ್ಲಿ ಸರಕಾರಕ್ಕೆ ಸಲ್ಲಿಸಲಾಯಿತು. ರಾಸಾಯನಿಕ ಮತ್ತು ರಸಗೊಬ್ಬರಗಳ ಇಲಾಖೆಯ ಸಂಸದೀಯ ಸ್ಥಾಯೀ ಸಮಿತಿ ಇದಕ್ಕೆ ವಿಳಂಬವಿಲ್ಲದೆ ಅನುಮೋದನೆ ನೀಡಬೇಕೆಂದು ಶಿಫಾರಸು ಮಾಡಿತ್ತು.

ಆದರೆ ಕಾರ್ಯದರ್ಶಿಗಳ ಸಮಿತಿ ಈ ಯೋಜನೆಯನ್ನು ಮೂಲೆಗೊತ್ತಲು ಪ್ರಯತ್ನಿಸಿದೆ. ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಯೂರಿಯಾ ಅಗ್ಗವಾಗಿ ಸಿಗುತ್ತಿರುವುದರಿಂದ ಸಿಂಧ್ರಿ ಮತ್ತು ನಾಮರೂಪ್ ಘಟಕಗಳ ಆಧುನೀಕರಣದ ಬಗ್ಗೆ ಯೋಚಿಸಿದರೆ ಸಾಕು, ಉಳಿದ ನಾಲ್ಕು ಘಟಕಗಳನ್ನು ಹಾಗೂ ಮೂರು ರಸಗೊಬ್ಬರ ಸಂಸ್ಥೆಗಳನ್ನು ಮುಚ್ಚಿಬಿಡಬೇಕು ಎಂದು ಶಿಫಾರಸು ಮಾಡಿದೆ. ಹೀಗೆ ಮಾಡುವಾಗ 15000 ಕಾರ್ಮಿಕರ ಉದ್ಯೋಗವಕಾಶದ ಲೆಕ್ಕಾಚಾರವನ್ನು ಗಮನಕ್ಕೇ ತಗೊಂಡಿಲ್ಲ. ಅದೇ ರೀತಿ ಇನ್ನು ಮುಂದೆ ಸದಾಕಾಲವೂ ಯೂರಿಯಾ ಆಮದಿನ ಮೇಲೆಯೇ ಹೆಚ್ಚಾಗಿ ಅವಲಂಬಿಸಿರುವುದರ ದುಷ್ಪರಿಣಾಮಗಳ ಬಗ್ಗೆಯೂ ಕಾರ್ಯದರ್ಶಿಗಳ ಸಮಿತಿ ಗಮನಿಸಿಲ್ಲ ಎಂದು ದೀಪಂಕರ್ ಮುಖರ್ಜಿಯವರು ಪ್ರಧಾನಿಗಳಿಗೆ ಬರೆದ ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಇಂತಹ ಸನ್ನಿವೇಶದಲ್ಲಿ ಪ್ರಧಾನ ಮಂತ್ರಿಗಳು ತಕ್ಷಣ ಮಧ್ಯ ಪ್ರವೇಶಿಸಿ 1995 ರ ಸರಕಾರಿ ನಿರ್ಣಯ, ಸ್ಥಾಯೀ ಸಮಿತಿ ಮತ್ತು ಸಾರ್ವಜನಿಕ ಉದ್ದಿಮೆಗಳ ಸಮಿತಿಯ ಶಿಫಾರಸುಗಳ ಆಧಾರದ ಮೇಲೆ ಈ ವಿಷಯದ ಬಗ್ಗೆ ನಿರ್ಧಾರಕ್ಕೆ ಬರಬೇಕು ಎಂದು ಸಿಪಿಐ(ಎಂ) ಸಂಸತ್ ಸದಸ್ಯರು ಆಗ್ರಹಪಡಿಸಿದ್ದಾರೆ. (ಐಎನ್‌ಎಸ್)

ದುಡಿಯುವ ಜನರ ಸಿದ್ಧಾಂತದ ಮಾರ್ಗದರ್ಶನದಲ್ಲಿ ....

ಸಿಂಧನೂರು ಪುರಸಭೆಯಲ್ಲಿ ಸಿಪಿಐ(ಎಂ) ಸದಸ್ಯರು

ಕಳೆದ ವರ್ಷ ನಡೆದ ಪುರಸಭಾ ಚುನಾವಣೆಯಲ್ಲಿ ಸಿಂಧನೂರಲ್ಲಿ 2 ಸ್ಥಾನಗಳಿಗೆ ಸ್ಪರ್ಧಿಸಿ ಎರಡು ಸ್ಥಾನಗಳನ್ನು ಗೆಲ್ಲುವ ಮೂಲಕ ಸಿಂಧನೂರು ಪುರಸಭೆಯಲ್ಲಿ ಪ್ರಥಮ ಪ್ರವೇಶ ಮಾಡಲಾಯಿತು.

ಸಿಐಟಿಯು ಮುಖಂಡರಾದ ಕಾಂ|| ಶೇಕ್ಷಾಖಾದ್ರಿ ಮತ್ತು ಜನವಾದಿ ಮಹಿಳಾ ಸಂಘಟನೆಯ ಕಾಂ|| ಗಂಗೂಬಾಯಿ ಸಿಪಿಐ(ಎಂ) ಅಭ್ಯರ್ಥಿಗಳು.

ಚುನಾವಣೆ ಮುಗಿದು ಇಬ್ಬರೂ ಆಯ್ಕೆಯಾದ ನಂತರ ಪುರಸಭೆಗೆ ಸಂಬಂಧಿಸಿದ ಉಪಸಮಿತಿ ರಚಿಸಲಾಯಿತು. ಪ್ರತಿ ಪುರಸಭೆಯ ಸಾಮಾನ್ಯ ಮಹಾಸಭೆಯ ಮುಂಚೆ ಉಪಸಮಿತಿ ಸಭೆ ಸೇರಿ ಚರ್ಚಿಸಿ ಸದಸ್ಯರಿಗೆ ಮಾರ್ಗದರ್ಶನ ನೀಡುತ್ತದೆ.

ಪ್ರಥಮ ಸಾಮಾನ್ಯ ಮಹಾ ಸಭೆ

ಪುರಸಭಾ ಸದಸ್ಯರ ಪ್ರಥಮ ಸಭೆಯಿಂದ ಎರಡು ವಾರ್ಡಿನ ಜನರ ಸಮಸ್ಯೆಗಳ ಪಟ್ಟಿ ಮಾಡಿ ಸಭೆ ಪ್ರಾರಂಭಕ್ಕೆ ಮುಂಚೆ ಎರಡು ವಾರ್ಡಿನ ಜನರ ಮನವಿ ಪತ್ರಗಳನ್ನು ಅಧ್ಯಕ್ಷರಿಗೆ ನೀಡಿ ಸ್ಥಳದಲ್ಲೇ ಕೆಲವು ಬೇಡಿಕೆ ಈಡೇರಿಸುವ ಭರವಸೆ ಪಡೆದು ನಂತರ ಪ್ರಥಮ ಸಭೆಗೆ ಹಾಜರಾಗಲಾಯಿತು. ಸಭೆಯಲ್ಲಿ ಎರಡು ವಾರ್ಡಿನ ಜನರ ಸಮಸ್ಯೆಗಳ ಜಾರಿಗಾಗಿ ನಿರ್ಣಯ ಮಂಡಿಸಲಾಯಿತು.

ಪುರಸಭಾ ಉದ್ಯಾನವನಗಳಿಗಾಗಿ ಹೋರಾಟ

ಪುರಸಭಾ ಸದಸ್ಯರ ಸಭೆಯಲ್ಲಿ ಪುರಸಭೆಯ ಉದ್ಯಾನವನದ ಜಾಗವನ್ನು ಖಾಸಗಿಯವರಿಗೆ ಮಾರಾಟ ಮಾಡಿ ಪುರಸಭೆಯಿಂದಲೆ ಅವರಿಗೆ ಕಟ್ಟಡ ಪರವಾನಿಗಿ ನೀಡಿದ ವಿಷಯವನ್ನು ಸಿಪಿಐ(ಎಂ) ಪುರಸಭಾ ಸದಸ್ಯರಾದ ಶೇಕ್ಷಾ ಖಾದ್ರಿ ಸಭೆಯ ಗಮನಕ್ಕೆ ತಂದು ಸದರಿ ಜಾಗದ ನೀಲನಕ್ಷೆ ಮತ್ತು ಪುರಸಭೆಯ ದಾಖಲೆಗಳನ್ನು ಆಧಾರ ಸಹಿತ ಸಭೆಯಲ್ಲೇ ಮುಖ್ಯಾಧಿಕಾರಿಗಳಿಗೆ ತೋರಿಸಿದರು. ಸಭೆಯಲ್ಲಿ ಈ ಕುರಿತು ತೀವ್ರ ಚರ್ಚೆಯಾಗಿ ಅಂತಿಮವಾಗಿ ಕಟ್ಟಡ ಪರವಾನಗಿಗೆ ಅಧ್ಯಕ್ಷರಿಂದ ತಡೆಯಾಜ್ಞೆ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಮುಂದಿನ ಸಭೆಯಲ್ಲಿ ಸಿಪಿಐ(ಎಂ) ಸದಸ್ಯ ಶೇಕ್ಷಾ ಖಾದ್ರಿಯವರು ಪುರಸಭೆ ಅಧೀನದಲ್ಲಿರುವ ಒಟ್ಟು ಉದ್ಯಾನವನಗಳ ಮಾಹಿತಿ ನೀಡಲು ಮುಖ್ಯಾಧಿಕಾರಿಗಳಿಗೆ ಮನವಿ ನೀಡಿ ಮಾಹಿತಿಗಾಗಿ ಎರಡು ತಿಂಗಳು ಪುರಸಭೆಯ ಸದಸ್ಯರ ಸಭೆಯಲ್ಲಿ ಹೋರಾಟ ಮಾಡಬೇಕಾಯಿತು. ನಂತರ 7 ಉದ್ಯಾನವನಗಳ ಮಾಹಿತಿ ನೀಡಲಾಯಿತು. ಇವರಲ್ಲೂ ಒಂದು ಉದ್ಯಾನವನ ಖಾಸಗಿ ವ್ಯಕ್ತಿಯೊಬ್ಬರಿಗೆ ಮಾರಾಟ ಮಾಡಲಾಗಿದೆ. 4ನೇ ಸಭೆಯಲ್ಲಿ ಶೇಕ್ಷಾ ಖಾದ್ರಿಗೆ ನೀಡಿದ ಉದ್ಯಾನವನಗಳ ಮಾಹಿತಿ ಪ್ರಕಾರ ಈ ಉದ್ಯಾನವನಗಳನ್ನು ಮುಂದೆ ಯಾವುದೇ ಖಾಸಗಿ ವ್ಯಕ್ತಿಗಳಿಗೆ ಮಾರಾಟ ಮಾಡಬಾರದು ಮತ್ತು ವರ್ಗಾವಣೆ ಮಾಡಬಾರದು ಎಂಬ ನಿರ್ಣಯವನ್ನು ಸಿಪಿಐ(ಎಂ) ಸದ್ಯರು ಸಭೆಯಲ್ಲಿ ಮಂಡಿಸಿದರೆ ಸಭೆಯು ಸರ್ವಾನುಮತದಿಂದ ನಿರ್ಣಯ ಅಂಗೀಕರಿಸಿತು. ಆದರೆ ಅದನ್ನು ಕಡತದಲ್ಲೇ ಸೇರಿಸಲಿಲ್ಲ.

ಉದ್ಯಾನವನಗಳಿಗೆ ಸಂಬಂಧಿಸಿದ ನಿರ್ಣಯ ಕಡತದಲ್ಲಿ ಸೇರಿಸುವ ನಿರ್ಣಯ ಪುನಃ ಅಂಗೀಕರಿಸುವವರೆಗೆ ಸಭೆ ನಡೆಯಲು ಕೊಡುವುದಿಲ್ಲ ಎಂದು ಹೇಳಿ ಇನ್ನೊಬ್ಬ ಸಿಪಿಐ(ಎಂ) ಮಹಿಳಾ ಸದಸ್ಯರಾದ ಕಾ|| ಗಂಗೂಬಾಯಿಯವರೊಂದಿಗೆ ಅಧ್ಯಕ್ಷರ ಟೇಬಲಿನೆದುರು ಮೇಲೆ ಧರಣಿ ಸತ್ಯಾಗ್ರಹ ಕೂರಲಾಯಿತು. ನಂತರ ವಿರೋಧ ಪಕ್ಷವಾದ ಕಾಂಗ್ರೆಸ್ ಪಕ್ಷದ 8 ಸದಸ್ಯರು ಸಿಪಿಐ(ಎಂ) ಸದಸ್ಯರ ಬೇಡಿಕೆಗಳಿಗೆ ಬೆಂಬಲಿಸಿ ಧರಣಿ ಕುಳಿತರು. ಸುಮಾರು 3 ಗಂಟೆ ಸಭೆ ನಡೆಯಲಿಲ್ಲ. ನಿರ್ಣಯವನ್ನು ಎರಡನೇ ಬಾರಿ ಅಂಗೀಕರಿಸಲಾಯಿತು. ನಂತರ ಸಭೆ ನಡೆಯಿತು. ಇದರಿಂದ 7 ಉದ್ಯಾನವನಗಳನ್ನು ಉಳಿಸಿ ಕೊಳ್ಳಲಾಗಿದೆ. ಸಿಂಧನೂರಿನ ಪುರಸಭೆ ಇತಿಹಾಸದಲ್ಲೆ ಪುರಸಭಾ ಸದಸ್ಯರು ಸದಸ್ಯರ ಸಾಮಾನ್ಯ ಸಭೆಯಲ್ಲಿ ಧರಣಿ ಸತ್ಯಾಗ್ರಹ ಮಾಡಿದ್ದು ಪ್ರಥಮವಾಗಿತ್ತು.

ಪುರಸಭೆ ಮಳಿಗೆಗಳಿಗೆ ಬಾಡಿಗೆ ಕುರಿತು

ಸುಮಾರು 25 ವರ್ಷಗಳಿಂದ ಖಾಸಗಿ ವ್ಯಕ್ತಿಗಳಿಗೆ ನೀಡಿದ್ದ ಪುರಸಭೆ ಮಳಿಗೆಗಳ ಬಾಡಿಗೆ ವಸೂಲಿ ಮಾಡದೆ ಇರುವುದನ್ನು ಸಾಮಾನ್ಯ ಮಹಾ ಸಭೆಯಲ್ಲಿ ಸಿಪಿಐ(ಎಂ) ಸದಸ್ಯರು ಚರ್ಚೆಯಾಗಬೇಕೆಂದು ಪ್ರಸ್ತಾಪಿಸಿದಾಗ ಆಡಳಿತ ಸದಸ್ಯರ ತೀವ್ರವಿರೋಧದ ಮಧ್ಯೆ ಚರ್ಚೆಯಾಗಿ 25 ವರ್ಷಗಳಿಂದ ಬಾಡಿಗೆ ಸಂಗ್ರಹಿಸಿಲ್ಲಾ ಮತ್ತು ಸಾವಿರ ರೂಪಾಯಿಗೆ ಬಾಡಿಗೆ ನೀಡಬೇಕಾಗಿದ್ದ ಮಳಿಗೆಗಳನ್ನು ಕೇವಲ 250.00 ರೂಪಾಯಿಯಿಂದ 500 ರೂಪಾಯಿಗೆ ಮಾತ್ರ ನೀಡಲಾದ ವಿಷಯ ಸಭೆಯ ಮುಂದೆ ಬಯಲಾದಾಗ ಆಡಳಿತ ಪಕ್ಷದ ಕೆಲವು ಸದಸ್ಯರು ವಿರೋಧ ಪಕ್ಷದ ಸದಸ್ಯರು ಸಿಪಿಐ(ಎಂ) ಸದಸ್ಯರ ಸೂಚನೆಯಂತೆ ಈ ಕುರಿತು ಬಾಕಿ ವಸೂಲಿ ಹಾಗೂ ಬಾಡಿಗೆ ಏರಿಸಲು ಸಿಪಿಐ(ಎಂ) ಸದಸ್ಯರೂ ಒಳಗೊಂಡಂತೆ 5 ಸದಸ್ಯರ ಒಂದು ಉಪ ಸಮಿತಿಯನ್ನು ರಚಿಸಲಾಯಿತು. ಇದಕ್ಕೆ ಮುಂಚೆ ಮಳಿಗೆಯೊಂದಕ್ಕೆ ಸಿಪಿಐ(ಎಂ) ಸದಸ್ಯ ಬೀಗಹಾಕಿದಾಗ ಸದರಿ ಮಳಿಗೆಯ ಬಾಡಿಗೆದಾರ 1,32,000 ಬಾಡಿಗೆ ಪುರಸಭೆಗೆ ರಾತ್ರೋ ರಾತ್ರಿ ಕಟ್ಟಿದ. ಈ ಎರಡು ಸಮಸ್ಯೆಗಳ ವಿರುದ್ಧ ಸಿಪಿಐ(ಎಂ) ಸದಸ್ಯರು ಒಳಗೆ ಹೋರಾಟ ಮಾಡಿದರ ಸಿಪಿಐ(ಎಂ) ಕಾರ್ಯಕರ್ತರು ಪಕ್ಷದ ನೇತೃತ್ವದಲ್ಲಿ ಪುರಸಭೆಯ ಹೊರಗೆ ಹೋರಾಟ ಮಾಡುತ್ತಿದ್ದರು.

ಪುರಸಭೆಯ ಮಳಿಗೆಗಳಿಗೆ ಸಂಬಂಧಿಸಿದಂತೆ ಈ ವಿವರಗಳು ಸಿಂಧನೂರಿನ ಜನತೆಗೆ ಇದುವರೆಗೆ ತಿಳಿದಿರಲಿಲ್ಲ.

ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ

ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ ಸಾಮಾನ್ಯ ಮಹಾ ಸಭೆಯಲ್ಲಿ ಸಿಪಿಐ(ಎಂ) ಸದಸ್ಯ ಶೇಕ್ಷಾ ಖಾದ್ರಿಯವರು ನೀರಿನ ಟ್ಯಾಂಕಿಗೆ ಸಂಗ್ರಹಕ್ಕಾಗಿ ಇರುವ ಪ್ರಮುಖ ಪೈಪ್‌ಲೈನ್‌ಗೆ ಯಾರು ನಳದ ಜೋಡಣೆ ತೆಗೆದುಕೊಳ್ಳಬಾರದು. ಇದು ಕಾನೂನಿನ ದೃಷ್ಟಿಯಲ್ಲಿ ಅಪರಾಧ ಇದರಿಂದ ಟ್ಯಾಂಕಿಗೆ ನೀರು ಏರುವ ಮುಂಚೆ ಈ ಜೋಡಣೆಯಿಂದ ನಳ ತೆಗೆದುಕೊಂಡವರಿಗೆ ನೀರು ಹೋಗಿ ನೀರು ಟ್ಯಾಂಕಿಗೆ ಸಂಗ್ರಹವಾಗದೆ ಜನಸಾಮಾನ್ಯರಿಗೆ ನೀರು ಬರದಂತೆ ಆಗಿದ್ದು ಈ ರೀತಿಯ ಜೋಡಣೆಯಾಗಿದ್ದ ಸುಮಾರು 300 ಅನಧಿಕೃತ ನಳಗಳನ್ನು ನಗರದ ಪ್ರಮುಖ ಹೋಟೆಲ್ ಮತ್ತು ವಸತಿ ಗೃಹಗಳು ಹಾಗೂ ನಗರದ ಪ್ರಮುಖ ಕೆಲವು ರಾಜಕಾರಣಿಗಳು ತೆಗೆದುಕೊಂಡಿರುವ ವಿಷಯ ಪ್ರಸ್ತಾಪಿಸಿ ಇವುಗಳನ್ನು ತಕ್ಷಣ ಯಾವುದೇ ವಿನಾಯಿತಿ ಇಲ್ಲದೆ ತೆಗೆದು ಹಾಕಬೇಕೆಂದು ನಿರ್ಣಯ ಮಂಡಿಸಿದರು. ಇದಕ್ಕೆ ಆಡಳಿತ ಪಕ್ಷದ ಸದಸ್ಯರು ಒಲ್ಲದ ಮನಸ್ಸಿನಿಂದ ಒಪ್ಪಿಕೊಳ್ಳಲೇ ಬೇಕಾದ ಅನಿವಾರ್ಯ ಅರಿತು ವಿರೋಧಪಕ್ಷದ ಸದಸ್ಯರೊಂದಿಗೆ ಧ್ವನಿಗೂಡಿಸಿ ನಿರ್ಣಯ ಅಂಗೀಕರಿಸಲಾಯಿತು.

ಮರುದಿನದಿಂದಲೇ ಅನಧಿಕೃತವಾಗಿ ತೆಗೆದುಕೊಂಡ ನಳಗಳ ಜೋಡಣೆ ತೆಗೆದುಹಾಕುವ ಕೆಲಸ ಪುರಸಭೆ ಸಿಬ್ಬಂದಿ ಪ್ರಾರಂಭಿಸಿದಾಗ ಪುರಸಭೆ ಅಧ್ಯಕ್ಷರು ಮತ್ತು ಆಡಳಿತ ಪಕ್ಷದ ಸದಸ್ಯರು ಅದನ್ನು ತಡೆದಾಗ ಈ ವಿಷಯವನ್ನು ಜನತೆಯ ಮುಂದೆ ತಿಳಿಸಲು ಸಿಪಿಐ(ಎಂ) ಸದಸ್ಯರು ಪತ್ರಿಕಾ ಹೇಳಿಕೆ ನೀಡಿದರೆ ಸಿಪಿಐ(ಎಂ) ಪಕ್ಷದಿಂದ ಕರಪತ್ರ ಹಾಕಿ ಹಂಚಲಾಯಿತು. ಜನರಿಂದ ಪ್ರತಿಭಟನೆ ಬರುವ ಸಾಧ್ಯತೆ ಕಂಡ ಆಡಳಿತ ಮಂಡಳಿ ತಾತ್ಕಾಲಿಕವಾಗಿ ಎಲ್ಲಾ ಜೋಡಣೆ ಕಡಿತಗೊಳಿಸಲಾಯಿತು.

ಬೇಸಿಗೆಯ ಕುಡಿಯುವ ನೀರಿನ ಸಮಸ್ಯೆಗಾಗಿ

ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ ಹಳ್ಳಕ್ಕೆ ಪ್ರತಿವರ್ಷ ಒಡ್ಡು(ತಡೆ) ಹಾಕಿ ನೀರು ಸಂಗ್ರಹಿಸಲಾಗುತ್ತಿದೆ. ಈ ವರ್ಷ 3 ಲಕ್ಷ 25 ಸಾವಿರ ರೂಪಾಯಿಯನ್ನು ಜಿಲ್ಲಾಧಿಕಾರಿಗಳು ನಿಗದಿ ಮಾಡಿದ್ದರೂ ಪ್ರತಿವರ್ಷ ಪುರಸಭೆಯಿಂದ ಹಳ್ಳಕ್ಕೆ ತಡೆ ಹಾಕುವ ಕೆಲಸ ನಡೆಯುತ್ತಿತ್ತು. ಈ ವರ್ಷ 3 ಲಕ್ಷ 25 ಸಾವಿರ ಇರುವುದನ್ನು ಗಮನಿಸಿದ ಆಡಳಿತ ಪಕ್ಷದ ಕೆಲವು ಸದಸ್ಯರು ಈ ಕೆಲಸ ಪುರಸಭೆಯಿಂದ ಮಾಡದೆ ಇದನ್ನು ಗುತ್ತಿಗೆದಾರರಿಗೆ ಗುತ್ತಿಗೆ ನೀಡುವ ನಾಟಕ ಮಾಡಿ ತಾವು ಆ ಕೆಲಸ ಮಾಡಿ ಕನಿಷ್ಟ ಒಂದು ಲಕ್ಷ 50 ಸಾವಿರ ಉಳಿಸಿಕೊಳ್ಳಲು ಆಡಳಿತ ಪಕ್ಷದ ಸದಸ್ಯರು ಪೈಪೋಟಿ ನಡೆಸಿದ್ದರು. ಇದರಿಂದ ಹಳ್ಳಕ್ಕೆ ತಡೆ ಹಾಕುವ ಮುಂಚೆ ನೀರು ಬತ್ತಿ ಹೋಗುವ ಸಾಧ್ಯತೆ ಇರುವುದನ್ನು ಗಮನಿಸಿ ಇದರಿಂದ ನಗರದ ನಾಗರೀಕರಿಗೆ ಮುಂದೆ ಆಗಬಹುದಾದ ನೀರಿನ ತೊಂದರೆಯ ಬಗ್ಗೆ ಪುರಸಭೆ ಮುಖ್ಯಾಧಿಕಾರಿಗಳಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಸಿಪಿಐ(ಎಂ) ಸದಸ್ಯರಾದ ಶೇಕ್ಷಾಖಾದ್ರಿ ಮತ್ತು ಗಂಗೂಬಾಯಿ ಬರೆದು ತಿಳಿಸಿದ ಕಾರಣ ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು ಕೆಲಸದ ಪ್ರಗತಿ ಪರಿಶೀಲಿಸಿ ಕೆಲಸ ಕಳಪೆ ಮತ್ತು ಮಂದಗತಿಯಿಂದ ಸಾಗುರುವುದನ್ನು ಗಮನಿಸಿ ಈ ಕೆಲಸವನ್ನು ಪುರಸಭೆಯಿಂದ ತಹಶೀಲ್ದಾರ್‌ಗೆ ವರ್ಗಾಯಿಸಿ 15 ದಿನದಲ್ಲಿ ಹಳ್ಳಕ್ಕೆ ತಡೆ ಹಾಕುವ ಕೆಲಸ ಮುಗಿಸಿ ನೀರು ಸಂಗ್ರಹಿಸಲಾಗಿದೆ.

ಪುಟ್ಟ ವ್ಯಾಪಾರಿಗಳ ಹೋರಾಟಕ್ಕೆ ಬೆಂಬಲ

ನಗರದ ರಸ್ತೆಯ ಪಕ್ಕದಲ್ಲಿ ವ್ಯಾಪಾರ ಮಾಡಿಕೊಂಡು ಜೀವನ ನಡೆಸುವ ಪುಟ್ಟ ವ್ಯಾಪಾರಿಗಳಿಂದ ಪ್ರತಿದಿನ ಪುರಸಭೆ ಸಿಬ್ಬಂದಿಯಿಂದ 50 ಪೈಸೆ ತೆರಿಗೆ ಸಂಗ್ರಹಿಸಲಾಗುತ್ತಿತ್ತು. ಆದರೆ ಕೆಲವು ಪುರಸಭೆ ಸದಸ್ಯರು ಇದರಿಂದ ಲಾಭ ಪಡೆಯಲು ದಿನದ ತೆರಿಗೆ ಸಂಗ್ರಹಿಸಬೇಕೆಂದು ನಿರ್ಣಯ ಮಂಡಿಸಿದರು. ಮುಖ್ಯವಾಗಿ ತಾವು ಗುತ್ತಿಗೆ ಪಡೆದು ಪುಟ್ಟ ವ್ಯಾಪಾರಿಗಳಿಂದ ಪ್ರತಿದಿನ 2 ರಿಂದ 3 ರೂ. ವರೆಗೆ ದಬ್ಬಾಳಿಕೆ ಮಾಡಿ ಸಂಗ್ರಹಿಸಬಹುದೆಂಬ ಯೋಜನೆ. ಇದನ್ನು ಸಿಪಿಐ(ಎಂ) ನ ಇಬ್ಬರು ಸದಸ್ಯರು ತೀವ್ರವಾಗಿ ವಿರೋಧಿಸಿದರು. ಬಹುಮತದಿಂದ ಗುತ್ತಿಗೆದಾರರಿಗೆ ನೀಡಲು ನಿರ್ಣಯಿಸಲಾಯಿತು. ಹರಾಜು ಮಾಡುವ ದಿನಾಂಕ ನಿಗದಿಯು ಆಯಿತು. ಹರಾಜಿನ ದಿನ ಪುಟ್ಟ ವ್ಯಾಪಾರಿಗಳ ಸಂಘದಿಂದ ಹರಾಜು ತಡೆಯುವ ಕ್ರಮ ಕೈಗೊಳ್ಳಲಾಯಿತು. ಸಿಪಿಐ(ಎಂ) ಸದಸ್ಯ ಶೇಕ್ಷಾ ಖಾದ್ರಿ ಇವರ ಹೋರಾಟಕ್ಕೆ ಬೆಂಬಲಿಸಿ ಪಿಕೆಟಿಂಗ್ ಕಾರ್ಯಕ್ರಮದಲ್ಲಿ ಭಾಗವಹಿಸಿದ ಕಾರಣ ಶೇಕ್ಷಾಖಾದ್ರಿ ಒಳಗೊಂಡಂತೆ 21 ಪುಟ್ಟ ವ್ಯಾಪಾರಿಗಳನ್ನು ಪೋಲೀಸರು ಬಂಧಿಸಿ ಕೇಸ್ ದಾಖಲಿಸಿ ನಂತರ ಬಿಡುಗಡೆ ಮಾಡಿದರು.

ಸಿಪಿಐ(ಎಂ) ಸದಸ್ಯರ ಕ್ಷೇತ್ರಗಳಲ್ಲಿ ಕೆಲಸ

19ನೇ ವಾರ್ಡಿನಲ್ಲಿ ರಸ್ತೆಗಳಿಗೆ ಮೊರಂ ಹಾಕಿಸುವ ಕೆಲಸ, ರಸ್ತೆಗಳಿಗೆ ದೀಪಗಳನ್ನು ಹಾಕಿಸಲಾಗಿದೆ. ಮಹಿಳೆಯರ ಶೌಚಾಲಯಕ್ಕೆ ಒತ್ತಾಯ ಮಾಡಲಾಗಿದೆ. ಶೇಕಡ 18 ರ ಯೋಜನೆಯಲ್ಲಿ ಒಬ್ಬರಿಗೆ 2 ಸಾವಿರ ಸಹಾಯಧನ ಹಾಗೂ ಭಾಗ್ಯಜ್ಯೋತಿ ಅಡಿಯಲ್ಲಿ ಒಬ್ಬರ ಮನೆಗೆ ವಿದ್ಯುಚ್ಛಕ್ತಿ ಹಾಕಿಸಲಾಗಿದೆ.

27 ನೇ ವಾರ್ಡಿನಲ್ಲಿ ರಸ್ತೆಗೆ ಮೊರಂ ಹಾಕಿಸುವ ಕೆಲಸ ಹೆಚ್.ಕೆ.ಡಿ.ಬಿ. ಯೋಜನೆ ಅಡಿಯಲ್ಲಿ ಮಹಿಳೆಯರ ಶೌಚಾಲಯ, ಕಿರುಸೇತುವೆ, ರಸ್ತೆಗಳಿಗೆ ದೀಪಗಳು, ಕುಡಿಯುವ ನೀರಿಗಾಗಿ 2 ಬೋರವೆಲ್‌ಗಳು ಶೇಕಡಾ 18 ಯೋಜನೆಯಲ್ಲಿ ನಾಲ್ಕು ಜನರಿಗೆ 2 ಸಾವಿರ ರೂಪಾಯಿಯಂತೆ ಧನಸಹಾಯ, ನಾಲ್ಕು ಜನರಿಗೆ ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ಮನೆಗಳಿಗೆ ವಿದ್ಯುಚ್ಛಕ್ತಿ ವ್ಯವಸ್ಥೆ.

ರಥಯಾತ್ರೆಯೋ ಮತಯಾತ್ರೆಯೋ?

ಪುಟ 1 ರಿಂದ

ಸನ್ನಿಹಿತವಾಗಿದೆಯೆಂದು ತಿಳಿದು ರಥ ಯಾತ್ರೆಯ ಮೂಲಕ ಬಂಡವಾಳ ಶಾಹಿ ಪತ್ರಿಕೆಗಳ ಮೂಲಕ ಪ್ರಚಾರ ಗಿಟ್ಟಿಸಿಕೊಂಡು ಕೇಂದ್ರ ಆಡಳಿತೆಯ ಚುಕ್ಕಾಣಿ ಹಿಡಿಯುವುದು ಸುಲಭೋಪಾಯವೆಂದು ತಿಳಿದಂತೆ ಕಂಡು ಬರುತ್ತದೆ.

1997 ಹತ್ತೊಂಭತ್ತು ನೂರು ತೊಂಭತ್ತೊಂದಲ್ಲವೆಂಬುದನ್ನು ಲಾಲಕೃಷ್ಣ ಅಡ್ವಾನಿಯವರು ತಿಳಿದುಕೊಳ್ಳಬೇಕು. ಹಿಂದಿನ ರಥಯಾತ್ರೆಯ ದಿನಗಳಲ್ಲಿ ಭಾಷಣದುದ್ದಕ್ಕೂ ಅಲ್ಪಮತೀಯರ ವಿರುದ್ಧ ವಿಷಕಾರುತ್ತ ಜಾತಿ ಭಾವನೆ ಕೆರಳಿಸಿ, ಹಿಂದುತ್ವಕ್ಕೆ ಪುಷ್ಟಿ ನೀಡುತ್ತಿದ್ದರು. ಇಂದು ಆ ರೀತಿಯ ಭಾಷಣಗಳಿಗೆ ಪುಷ್ಟಿ ದೊರಕಲಾರದು. ಕಳೆದ ಆರೇಳು ವರ್ಷಗಳಲ್ಲಿ ಮುಖ್ಯವಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಎಡ ಪಕ್ಷಗಳು ನಿರಂತರ ನಡೆಸಿದ ಪ್ರಚಾರ, ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳನ್ನು ಬಿಜೆಪಿ ವಿರುದ್ಧ ಒಂದೆಡೆ ಸೇರಿಸಿ ಅದರ ನೇತೃತ್ವದಲ್ಲಿ ಸಂಯುಕ್ತ ರಂಗ ರಚಿಸಿ, ಅದರ ಸರಕಾರದ ರಚನೆ ಈ ಹೊತ್ತು ಬಿಜೆಪಿ ಯನ್ನು ಜನರಿಂದ ಅಧಿಕಾರ ಗ್ರಹಣದಿಂದಲೂ ದೂರವಿಡಲು ಸಾಧ್ಯವಾಗಿದೆ. ಅದರ ಪರಿಣಾಮವಾಗಿ ಈಗ ಕೈಗೊಂಡಿರುವ ರಥ ಯಾತ್ರೆ ಸಾರ್ವಜನಿಕರನ್ನು ಆಕರ್ಷಿಸುತ್ತಿಲ್ಲ. ಜನರು ಅವರ ಭಾಷಣಗಳಿಗೆ ಸ್ಪಂದಿಸದಂತೆ ಮಾಡಿದೆ.

1942, ಆಗಸ್ಟ್ 2 ರಂದು ಭಾರತ ದೇಶ ಬಿಟ್ಟು ತೊಲಗಿ-ಕ್ವಿಟ್ ಇಂಡಿಯಾ ಕರೆ ನೀಡಿದ ಮುಂಬಯಿಯ ಗವಾಲಿಯ ಟ್ಯಾಂಕ್ ಮೈದಾನದಲ್ಲಿ ಈ ರಥ ಯಾತ್ರೆ ನಿಮಿತ್ತ ಅಡ್ವಾಣಿಯವರ ಭಾಷಣಕ್ಕಾಗಿ ರಚಿಸಿದ ಮಂಟಪದಲ್ಲಿ ಮಹಾತ್ಮ ಗಾಂಧಿಯವರ ದೊಡ್ಡ ಕಟ್‌ಔಟ ಕಾಣುತ್ತಿತ್ತು. ಇಷ್ಟು ದಿವಸ ಹಿಂದುತ್ವದ ಹೆಸರಿನಲ್ಲಿ ಅಲ್ಪಸಂಖ್ಯಾತರ, ದಲಿತರ ವಿರೋಧಿಯಾಗಿ ಮೇಲ್ವರ್ಗದವರ ಪ್ರತಿನಿಧಿಯಾಗಿದ್ದ ಅಡ್ವಾನಿಯವರ ಬಿಜೆಪಿ, ಈ ವಿಭಾಗದ ಜನರನ್ನು ಆಕರ್ಷಿಸಿ, ಚುನಾವಣೆ ಲಾಭ ಪಡೆಯುವ ಉದ್ದೇಶದಿಂದಲೇ ತಮ್ಮ ಕಡುವಿರೋಧಿ ಮಹಾತ್ಮ ಗಾಂಧಿಯವರ ಕಟ್‌ಔಟ್ ಆಶ್ರಯದಲ್ಲಿ ಭಾಷಣ ಮಾಡುವ ಮೂಲಕ ರಥ ಯಾತ್ರೆ ಪ್ರಾರಂಭಿಸಿದ್ದಾರೆ. ಆ ಭಾಷಣ ಭ್ರಷ್ಟಾಚಾರದ ವಿರುದ್ಧವಾಗಿರಲಿಲ್ಲ. ಜನರನ್ನೆದುರಿಸುತ್ತಿರುವ ಸಮಸ್ಯೆಗಳಿಗೆ ಸಂಬಂಧಿಸಿದ್ದಲ್ಲ, ಅವರು ಭಾಷಣದುದ್ದಕ್ಕೂ ಕಮ್ಯುನಿಸ್ಟ್, ಸಂಯುಕ್ತ ರಂಗ, ಕಾಂಗ್ರೆಸ್ ನಾಯಕರನ್ನು ಟೀಕಿಸುತ್ತಾ ಮುಂದಿನ ಚುನಾವಣೆಯಲ್ಲಿ ತಾವು ಅಧಿಕಾರಕ್ಕೆ ಬರುತ್ತೇವೆಂದೂ, ಸಂಯುಕ್ತ ರಂಗ ಸರಕಾರಕ್ಕೆ ದೇಶದಲ್ಲಿ ಅವಕಾಶವಿಲ್ಲೆಂದು ಹೇಳುತ್ತಾ, ಶಿವಸೇನೆ, ಅಕಾಲಿ ದಳ ಮೊದಲಾದ ಪ್ರಾದೇಶಿಕ ಸಣ್ಣ-ಪುಟ್ಟ ಪಕ್ಷಗಳು ತಮಗೆ ಬೆಂಬಲ ಕೊಡುತ್ತವೆಂದೂ, ಅಲ್ಪಮತಸ್ತರ, ದಲಿತರ ಮತಯಾಚನೆ ಮಾಡುತ್ತಾ ಹೊರಟಿದ್ದಾರೆ.

ಕರ್ನಾಟಕದಲ್ಲೂ ಸ್ಪಂದನವಿಲ್ಲ

ಮುಂಬಯಿಯಿಂದ ಈ ರಥಯಾತ್ರೆಗೆ ಮಹಾರಾಷ್ಟದಲ್ಲಿ ಅವರದೇ ಆದ ಸರಕಾರವಿದ್ದರೂ, ಜನಬೆಂಬಲ ಸಿಗಲಿಲ್ಲವಂತೆ. ಕರ್ನಾಟಕದ ಪರಿಸ್ಥಿತಿ ಕೂಡಾ ಅದೇ ರೀತಿಯಲ್ಲಿದೆ. ಬೆಳಗಾವಿಯಲ್ಲಿ ಅಡ್ವಾನಿಯವರ ರಥ ಯಾತ್ರೆ ಹಿಂದಿ-ಮರಾಠಿ ಕಾರ್ಯಕ್ರಮವಾಗಿ ಕೆಲವೇ ವೀಕ್ಷಕರ ಮಧ್ಯೆ ಕೊನೆಗೊಂಡಿದೆ. ಹುಬ್ಬಳ್ಳಿ-ಬೆಂಗಳೂರಿನ ಕಾರ್ಯಕ್ರಮಗಳೂ ಜನರನ್ನು ಆಕರ್ಷಿಸುವುದರಲ್ಲಿ ವಿಫಲಗೊಂಡಿವೆ. ಬಿಜೆಪಿಯ ಪ್ರಚಾರದ ಮೂಲಸ್ತಂಭವಾಗಿರುವ ಬಂಡವಾಳಶಾಹಿ ಪತ್ರಿಕೆಗಳು ಈ ಸಲದ ರಥಯಾತ್ರೆಗೆ ಪ್ರಚಾರ ಕೊಡುವುದರಲ್ಲಿ ಆಸ್ತೆ ವಹಿಸಿಲ್ಲ. ಬಿಜೆಪಿ ಕುರಿತು ಜನರ ಮೂಕ ಭಾವನೆಯ ಅರ್ಥವನ್ನು ಬಂಡವಾಳಶಾಹಿ ಪತ್ರಿಕೆಗಳು ಕಂಡುಕೊಂಡಿರಬೇಕು.

ಜನ ಈ ಹೊತ್ತು ಮೂಕಪ್ರೇಕ್ಷಕರಾಗಿ ಉಳಿಯಲು ತಯಾರಿಲ್ಲ. ತಮ್ಮ ಹಾಗೂ ದೇಶದ ಹಿತೈಶಿಗಳಾರೆಂಬುದನ್ನು ತಿಳಿದುಕೊಳ್ಳುವ ಪ್ರಯತ್ನ ನಡೆಸಿದ್ದಾರೆಂಬುದನ್ನು ಅರಿಯಬೇಕು. ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ನಿರಂತರ ಪ್ರಯತ್ನ ಸ್ವಲ್ಪ ಮಟ್ಟಿಗೆ ಫಲ ನೀಡುತ್ತಿದೆ. ಜನತೆ ಎಡ ಪಕ್ಷಗಳ ಧೋರಣೆಯನ್ನು, ನೀತಿ ನಿರೂಪಣೆಗಳನ್ನು ಅರ್ಥೈಸಿಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಬಿಜೆಪಿಯಂಥ ಕೋಮುವಾದಿ ರಾಜಕೀಯ ಪಕ್ಷಗಳಿಂದಾದ, ಆಗಬಹುದಾದ ಗಂಡಾಂತರವನ್ನು, ದೇಶಕ್ಕೆ ಆಗಬಹುದಾದ ಅಪಾಯದ ಅರಿವು ಜನರಿಗಾಗುತ್ತಿದೆ. ಆ ಕಾರಣದಿಂದಲೇ ದೇಶದ ಸ್ವಾತಂತ್ರ್ಯ ಚಳುವಳಿಯನ್ನು ವಿರೋಧಿಸುತ್ತಿದ್ದ, ಮಹಾತ್ಮಗಾಂಧಿಯವರನ್ನು ಕೊಲೆ ಮಾಡಿದ, ಮತೀಯ ದಂಗೆಗಳ ಮೂಲಕ ನಿರಪರಾಧಿಗಳ ಮಾರಣಹೋಮ ಮಾಡಿಸಿದ ಈಗ ಮತ ಯಾಚನೆಗಾಗಿ ಹೊರಟಿರುವ ಲಾಲ್‌ಕೃಷ್ಣ ಅಡ್ವಾನಿಯವರ ರಥ ಯಾತ್ರೆಗೆ ಜನ ಸ್ಪಂದಿಸದಿರಲು ನಿರ್ಧರಿಸಿದಂತೆ ಕಂಡುಬರುತ್ತದೆ. ಜನರ ಈ ಭಾವನೆಯನ್ನು ಸ್ವಾಗತಿಸುತ್ತೇವೆ. ಅದರ ಜೊತೆಯಲ್ಲಿಯೇ ಅವರು ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳಿಗೆ ಬೆಂಬಲ ನೀಡಿ ದೇಶದಲ್ಲಿ ರಾಜ್ಯದಲ್ಲೂ ಪರ್ಯಾಯ ವ್ಯವಸ್ಥೆ ಬೆಳೆದುಬರಲಿಕ್ಕೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ.

- ಎನ್.ಕೆ.ಉಪಾಧ್ಯಾಯ

ಅಡ್ವಾಣಿಯವರ ಯಾತ್ರೆಯ ಬಗ್ಗೆ ಟೈಮ್ಸ್ ಆಫ್ ಇಂಡಿಯಾದಲ್ಲಿ ಆರ್.ಕೆ.ಲಕ್ಷ್ಮಣ್ ವ್ಯಂಗ್ಯ



ಭಾ.ಜ.ಪ. ಧೋರಣೆ

ದೇಶದೊಳು ಅಷ್ಟು ಮಾರ್ಗಗಳು ಒಂದು
ಗುಡಿಯಿಂದ ರಸ್ತೆಯೊಳು ಬಿದ್ದಿಹವು ಇಂದು
ಇವುಗಳಿಗೆ ಗುಡಿಕಟ್ಟಿ ಮುಗಿದೊಡನೆ ಮತ್ತೆ
ನೋಡೋಣ ಬಿಡುವಿಳಿದ ಹಸಿದು ಹೊಟ್ಟೆ

- ಏಕಾಂಬಾರಿ

ಬ್ರಿಟನ್‌ನಲ್ಲಿ ಲೇಬರ್ ಪಕ್ಷಕ್ಕೆ ಅಭೂತ ಪೂರ್ವ ವಿಜಯ

ಲೋಕಸಂಚಾರ



ಶರತ್‌ಚಂದ್ರ

ಮೇ 1 ರಂದು ನಡೆದ ಬ್ರಿಟಿಷ್ ಚುನಾವಣೆಗಳಲ್ಲಿ ಲೇಬರ್ ಪಕ್ಷ ಭಾರಿ ವಿಜಯ ಸಾಧಿಸಿ, 18 ವರ್ಷಗಳಿಂದ ಆಳುತ್ತಿದ್ದ ಕನ್ಸರ್ವೇಟಿವ್ ಪಕ್ಷ(ಟೋರಿ)ವನ್ನು ಅಧಿಕಾರದಿಂದ ಇಳಿಸಿದೆ. 659 ಸದಸ್ಯರ ಬ್ರಿಟಿಷ್ ಪಾರ್ಲಿಮೆಂಟಿನ ಕೆಳಮನೆಯಲ್ಲಿ 4.19 ಸೀಟುಗಳನ್ನು ಲೇಬರ್ ಪಕ್ಷ ಗಳಿಸಿದೆ. ಟೋರಿ ಪಕ್ಷ ಭಾರಿ ಪರಾಭವ ಅನುಭವಿಸಿ ಅದರ ಬಲ 166 ಸೀಟುಗಳಿಗೆ ಕುಸಿದಿದೆ. ಲೇಬರ್ ಪಕ್ಷದ ಈ ಭಾರಿ ಜಯ ಹಾಗೂ ಟೋರಿ ಪಕ್ಷದ ಈ ಭಾರಿ ಪರಾಭವ ಸುಮಾರು 160 ವರ್ಷಗಳ ಎಲ್ಲಾ ವಿಕ್ರಮಗಳನ್ನು ಮುರಿದಿದೆ. 1830 ರಲ್ಲಿ ಒಂದು ಬಾರಿ ಈ ರೀತಿಯ ಪರಾಭವವನ್ನು ಟೋರಿ ಪಕ್ಷ ಅನುಭವಿಸಿತ್ತು. ಲೇಬರ್ ಪಕ್ಷ ತನ್ನ ಬಲವನ್ನು ಇಮ್ಮಡಿಗೊಳಿಸಿ 45 ಸೀಟುಗಳನ್ನು ಗಳಿಸಿದೆ-ಶೇಕಡಾ 45 ಮತ ಗಳಿಸಿ ಲೇಬರ್ ಪಕ್ಷ ತನ್ನ ಮತವನ್ನು ಹೆಚ್ಚಿಸಿಕೊಂಡಿದೆ. ಲೇಬರ್ ಪಕ್ಷದ ನಾಯಕ 43 ವರ್ಷದ ಟೋನಿ ಬ್ಲೇರ್ ಬ್ರಿಟಿಷ್ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಿ ದ್ದಾರೆ. ಇವರು ಕಳೆದ 200 ವರ್ಷಗಳಲ್ಲೇ ಅತ್ಯಂತ ಕಿರಿಯ ವಯಸ್ಸಿನ ಪ್ರಧಾನಿ ಯಾಗಿದ್ದಾರೆ.

ಟೋರಿ ಪರಾಭವ ಎಷ್ಟು ವ್ಯಾಪಕವಾಗಿತ್ತೆಂದರೆ ಅದು ಅರ್ಧದಷ್ಟು ಸೀಟುಗಳನ್ನು ಕಳೆದುಕೊಂಡಿದೆ. ಬ್ರಿಟನ್ ಸ್ಕಾಟ್ ಲ್ಯಾಂಡ್ ಹಾಗೂ ವೇಲ್ಸ್ ಪ್ರಾಂತ್ಯಗಳಲ್ಲಿ ಒಂದೇ ಒಂದು ಸೀಟು ಗೆದ್ದುಕೊಳ್ಳಲಾಗಲಿಲ್ಲ. ಮಾಜಿ ಪ್ರಧಾನಿ ಜಾನ್ ಮೇಜರ್ ಬಿಟ್ಟು ಮಂತ್ರಿಮಂಡಲದ ಹೆಚ್ಚಿನ ಪ್ರಮುಖ ಮಂತ್ರಿಗಳು ಪರಾಭವ ಹೊಂದಿದ್ದಾರೆ. ಜಾನ್ ಮೇಜರ್‌ರ ಮಂತ್ರಿ ಸಂಪುಟದ ಮೂರನೇ ಎರಡು ಭಾಗದಷ್ಟು ಮಂತ್ರಿಗಳು ಪರಾಭವ ಹೊಂದಿದ್ದಾರೆ.

ಬ್ರಿಟಿಷ್ ಮತದಾರರ ಸಂಖ್ಯೆ 4.4. ಕೋಟಿ. ಅವರಲ್ಲಿ ಶೇಕಡಾ 71 ಮತದಾರರು ಮತ ಚಲಾಯಿಸಿದ್ದರು. ಆದರೆ 1992 ರ ಚುನಾವಣೆಯಲ್ಲಿ ಮತ ಚಲಾಯಿಸಿದವರ ಸಂಖ್ಯೆ ಶೇಕಡಾ 77 ಆಗಿತ್ತು. ಬ್ರಿಟಿಷ್ ಲೇಬರ್ ಪಕ್ಷ ಇನ್ನೊಂದು ವಿಕ್ರಮವನ್ನು ಸಾಧಿಸಿದೆ. 102 ಲೇಬರ್ ಚುನಾಯಿತ ಪಾರ್ಲಿಮೆಂಟ್ ಸದಸ್ಯರು ಮಹಿಳೆಯರು. ಎಲ್ಲ ಪಕ್ಷದ ಮಹಿಳಾ ಸದಸ್ಯರು ಸೇರಿ ಸುಮಾರು 130 ಸದಸ್ಯರು ಮಹಿಳೆಯರು. ಲೇಬರ್ ಬಿಟ್ಟರೆ ಉಳಿದ ಸದಸ್ಯರಲ್ಲಿ ಹೆಚ್ಚಿನವರು ಲಿಬರಲ್ ಪಕ್ಷದವರು. ಟೋರಿ ಪಕ್ಷದ ಮಹಿಳಾ ಸದಸ್ಯರು ಬೆರಳೆಣಿಕೆಯವರು. ಒಟ್ಟಾರೆಯಾಗಿ ಐದು ಪಾರ್ಲಿಮೆಂಟ್ ಸದಸ್ಯರಲ್ಲಿ ಒಬ್ಬಾಕೆ ಮಹಿಳಾ ಸದಸ್ಯೆ. ಲೇಬರ್ ಪಕ್ಷದಿಂದ ಸ್ಪರ್ಧಿಸಿದ್ದ ಮಹಿಳಾ ಸದಸ್ಯರಲ್ಲಿ ಹೆಚ್ಚಿನವರು ಆಯ್ಕೆಯಾಗಿದ್ದಾರೆ ಎನ್ನಲಾಗಿದೆ. ಹೊಸ ಲೇಬರ್ ಮಂತ್ರಿಮಂಡಲದಲ್ಲಿ ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರಿದ್ದಾರೆ.

ಲೇಬರ್ ಪಕ್ಷದ ಈ ಭಾರೀ ವಿಜಯದ ಬಗ್ಗೆ ಹಲವಾರು ವಿವರಣೆಗಳನ್ನು ಕೊಡಲಾಗಿದೆ. ಅದರಲ್ಲಿ ಒಂದು ಭಾರಿ ಪ್ರಚಾರದಲ್ಲಿ ಇರುವಂತಹದು - ಲೇಬರ್ ಪಕ್ಷ, ಎಡಪಂಥೀಯತೆಯಿಂದ ಮಧ್ಯ ಪಂಥೀಯತೆಯೆಡೆಗೆ ಚಲಿಸಿದ್ದರಿಂದ ಈ ಭಾರಿ ವಿಜಯ ಎಂಬುದು. ಲೇಬರ್ ಪಕ್ಷದ ಈಗಿನ ಪ್ರಧಾನಿ ಟೋನಿಬ್ಲೇರ್‌ರ ನಾಯಕತ್ವದಲ್ಲಿ 1994 ರಿಂದ ಮಧ್ಯ ಪಂಥೀಯತೆಯೆಡೆಗೆ ಚಲಿಸಿದ್ದು ನಿಜ. ಲೇಬರ್ ಪಕ್ಷದಲ್ಲಿ ಟ್ರೇಡ್ ಯೂನಿಯನ್‌ಗಳಿಗಿದ್ದ ವಿಶಿಷ್ಟ ಪಾತ್ರ, ಸಾರ್ವಜನಿಕ ಕ್ಷೇತ್ರಗಳ, ಕೈಗಾರಿಕೆಗಳ ಬಗ್ಗೆ ಇದ್ದ ಒತ್ತು, ಸಮಾಜವಾದ ಸಾಧಿಸುವ ಗುರಿ-ಇವೆಲ್ಲ ಲೇಬರ್ ಪಕ್ಷ ಬಿಟ್ಟುಕೊಟ್ಟಿತು ನಿಜ, ಆದರೆ ಇದೇ ಈ ಭಾರಿ ವಿಜಯಕ್ಕೆ ಕಾರಣವಲ್ಲ. ಟೋರಿ ಪಕ್ಷದ ನೀತಿಗಳನ್ನು ಜನ ಸಾರಾಸಗಟಾಗಿ ತಿರಸ್ಕರಿಸಿದ್ದಾರೆ. ಟೋರಿ ಪಕ್ಷದ 18 ವರ್ಷಗಳ ಆರ್ಥಿಕ ನೀತಿಗಳಿಂದ ಜನ ಬೇಸತ್ತಿದ್ದಾರೆ. ಅದನ್ನು ತಿರಸ್ಕರಿಸಿದ್ದಾರೆ. ನೇರ ತೆರಿಗೆ (ಶ್ರೀಮಂತರಿಗೆ) ಕಡಿಮೆ ಮಾಡಿ, ಸಾರ್ವಜನಿಕ ಕಲ್ಯಾಣದ ವೆಚ್ಚದಲ್ಲಿ ಭಾರಿ ಕಡಿತವನ್ನು ತರುವ ಟೋರಿ ನೀತಿಗಳನ್ನು ಜನ ಸ್ಪಷ್ಟವಾಗಿ ತಿರಸ್ಕರಿಸುತ್ತಾರೆ ಎಂಬುದು ಹಲವು ಸಮೀಕ್ಷೆಗಳಿಂದ ಗೊತ್ತಾಗಿದೆ. ಅದೇ ರೀತಿ ಬ್ರಿಟನ್ ಯುರೋಪಿಯನ್ ಒಕ್ಕೂಟ ಸೇರಿ ಸಾಮಾನ್ಯ ನಾಣ್ಯ ಹೊಂದಿರುವ ಬಗ್ಗೆ ಜನರ ವಿರೋಧವಿದೆ ಎಂಬುದೂ ಹಲವು ಸಮೀಕ್ಷೆ ಗಳಿಂದ ಸ್ಪಷ್ಟವಾಗಿದೆ. ಟೋನಿಬ್ಲೇರ್ ನಾಯಕತ್ವದಲ್ಲಿ ಲೇಬರ್ ಪಕ್ಷ ಇವೆಲ್ಲ ದರಲ್ಲೂ ಟೋರಿ ಪಕ್ಷದ ನೀತಿಗಳನ್ನು ಮುಂದುವರಿಸುವ ಭರವಸೆ ನೀಡಿದೆ. ಯುರೋಪಿಯನ್ ಆರ್ಥಿಕ ಒಕ್ಕೂಟವನ್ನು ಸೇರುವ ಬಗ್ಗೆ ಎರಡೂ ಪಕ್ಷಗಳೂ ಜನಮತ ಸಂಗ್ರಹ ನಡೆಸುವ ಭರವಸೆ ನೀಡಿವೆ. ಹಾಗಾದರೆ ಲೇಬರ್ ಪಕ್ಷದ ವಿಜಯಕ್ಕೆ ಕಾರಣವೇನು ಎಂಬ ಪ್ರಶ್ನೆ ಹುಟ್ಟುತ್ತದೆ.

ಇದಕ್ಕೆ ಕಾರಣ ಲೇಬರ್ ಪಕ್ಷ ಟೋನಿ ಬ್ಲೇರ್‌ರ ಹೊಸ ಲೇಬರ್ ಘೋಷಣೆಯ ಪ್ರಕಾರ ಏನೇ ಹೇಳಲಿ, ಬ್ರಿಟಿಷ್ ಜನತೆಗೆ ಗೊತ್ತು. ಲೇಬರ್ ಪಕ್ಷ ಕಮ್ಯುನಿಸ್ಟರು, ಎಡ ಪಂಥೀಯತೆಯಿಂದ ಹಿಡಿದು ಟೋರಿ ನೀತಿಗಳನ್ನು ಅಪ್ಪಿಕೊಂಡ ಬಲಪಂಥೀಯತೆ ಎಲ್ಲರೂ ಇರುವ ವ್ಯಾಪಕ ರಂಗ ಅಂತ. ಆದರೆ ಸಾರ್ವಜನಿಕ ಸೇವೆ, ಕಲ್ಯಾಣ ಯೋಜನೆಗಳನ್ನು ಎತ್ತಿಹಿಡಿ ಯುವುದು, ಸಮಾಜವನ್ನು ವ್ಯಕ್ತಿಗಿಂತ ಮೇಲೆ ಇಡುವಂಥದು ಎಂದು ಗೊತ್ತು. ಆದ್ದರಿಂದ ಲೇಬರ್ ಪಕ್ಷದ ಇತರ ಘೋಷಣೆಗಳಾದ -ಶಿಕ್ಷಣ ಹಾಗೂ ಆರೋಗ್ಯ ಸೇವೆಗಳನ್ನು ಸುಧಾರಿಸುವ, ವೇಲ್ಸ್, ಸ್ಕಾಟ್‌ಲ್ಯಾಂಡ್ ಹಾಗೂ ಲಂಡನ್‌ಗಳಿಗೆ ಪ್ರಾಂತೀಯ ಚುನಾಯಿತ ಸದನಗಳನ್ನು ಕೊಡುವ, ಚುನಾವಣಾ ಸುಧಾರಣೆಗಳು, ರಹಸ್ಯ ಮತದಾನದಿಂದ ಯೂನಿಯನ್ನುಗಳನ್ನು ಚುನಾಯಿಸುವ ಸುಧಾರಣೆಗಳು, ಕನಿಷ್ಠ ವೇತನದ ಬಗ್ಗೆ ಕಾನೂನು-ಜನರನ್ನು ಆಕರ್ಷಿಸಿರಬೇಕು. ಅಲ್ಲದೆ ಲೇಬರ್ ಪಕ್ಷ ಏನೇ ಹೇಳಲಿ ಟೋರಿ ಪಕ್ಷಕ್ಕಿಂತ ಹೆಚ್ಚು ಜನಪರ ನೀತಿಗಳನ್ನು ಜಾರಿಗೆ ತರುತ್ತಾರೆ ಎಂಬ ಭರವಸೆ(ಇದು ಹುಸಿಯೋ ಎಂಬುದನ್ನು ಕಾದು ನೋಡಬೇಕು) ಸಹ ಭಾರಿ ವಿಜಯಕ್ಕೆ ಕಾರಣ. ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರನ್ನು ಚುನಾವಣಾ ಕಣಕ್ಕಿಳಿಸಿದ್ದು ಮುಂತಾದ ಲೇಬರ್ ನೀತಿಗಳನ್ನೂ ಜನ ಮೆಚ್ಚಿಕೊಂಡಿದ್ದು ಸ್ಪಷ್ಟ.

ಇಡೀ ಯುರೋಪ್‌ನಲ್ಲಿ ರಾಜಕೀಯ ಬೆಳವಣಿಗೆಯ ದೃಷ್ಟಿಯಲ್ಲಿ ಈ ಲೇಬರ್ ವಿಜಯದ ಮಹತ್ವವೇನು? ಇದು ಬಲ ಪಂಥೀಯರು ಎಲ್ಲೆಡೆ ಹಿಂದೆ ಸರಿಯುವ ಸೂಚನೆಯೋ? ಫ್ರಾನ್ಸ್, ಇಟಲಿ, ಜರ್ಮನಿಗಳಲ್ಲಿ ಸೋಶಲಿಸ್ಟ್ ಹಾಗೂ ಇತರ ಎಡಪಂಥೀಯ ಪಕ್ಷಗಳ ಅಧಿಕಾರಕ್ಕೆ ಬರುವ ಮುನ್ಸೂಚನೆಯೆ? ಇಲ್ಲವೆ ರಾಜಕೀಯ ಮಧ್ಯಗಾಮಿಯತ್ತ ತಿರುಗುತ್ತಿರುವುದರ ಸೂಚನೆಯೇ? ಬಲಪಂಥೀಯ ರಾಜಕೀಯದ ಬಗ್ಗೆ ಜನ ಭ್ರಮನಿರಸನಗೊಂಡಿದ್ದಾರೆ. ಜನವಿರೋಧಿ ನೀತಿಗಳನ್ನು ಜನ ಸ್ಪಷ್ಟ ಗುರುತಿಸುತ್ತಿದ್ದಾರೆ. ಯುರೋಪಿಯನ್ ಒಕ್ಕೂಟದ ಹೆಸರಲ್ಲಿ ಕಲ್ಯಾಣ ಯೋಜನೆ, ಶಿಕ್ಷಣ, ಆರೋಗ್ಯ ಸೇವೆಗಳಲ್ಲಿ ಕಡಿತದ ನೀತಿಗಳನ್ನು ವಿರೋಧಿ ಸುತ್ತದೆ. ಬಲ ಪಂಥೀಯ ನೀತಿಗಳಿಗೆ ಬದಲಿ ಕೊಡಬಲ್ಲ ತಾಕತ್ತುಳ್ಳ ಯಾವುದೇ ಎಡ, ಮಧ್ಯಮ ಪಂತೀಯ ಸರಕಾರಗಳಿಗೆ ಬೆಂಬಲ ಕೊಡುತ್ತಾರೆ ಎಂಬುದು ಹೆಚ್ಚು ಸರಿಯಾದುದು.

ನಾಟೋ ವಿರೋಧಿ ಕಮಿಶನ್ ಸ್ಥಾಪನೆ - ರಶ್ಯನ್ ಡೂಮಾದಲ್ಲಿ

ರಶ್ಯ ಕೆಳಮನೆ(ದೂಮಾ) ನಾಟೋ-ವಿರೋಧಿ ಕಮಿಶನ್ ಸ್ಥಾಪಿಸಿದೆ. 15 ಸರ್ವಪಕ್ಷ ಸದಸ್ಯರಿರುವ ಈ ಕಮಿಷನ್ ನಾಟೋದ ವಿಸ್ತರಣೆ ಬಗ್ಗೆ ಮಾಹಿತಿ ಸಂಗ್ರಹಿಸಿ, ವಿಶ್ಲೇಷಿಸುತ್ತದೆ. ಕಮಿಷನ್ ಮೇ 5 ರಂದು ನಾಟೋ-ವಿರೋಧಿ ದಿನಾಚರಣೆಯಾಗಿ ಆಚರಿಸಲು ಕರೆ ನೀಡಿದ್ದು, ಮೇ 9ರಂದು ಮಾಜಿ ಸೋವಿಯತ್ ಒಕ್ಕೂಟದ ಪಡೆಗಳು ಫ್ಯಾಸಿಸ್ಟ್ ಪಡೆಗಳ ವಿರುದ್ಧ ಜಯಗಳಿಸಿದ ದಿನ.

ಇತ್ತೀಚೆಗೆ 240 ಪಾರ್ಲಿಮೆಂಟ್ ಸದಸ್ಯರ ನಾಟೋ - ವಿರೋಧಿ ಗುಂಪನ್ನು ರಚಿಸಲಾಗಿತ್ತು. ಈ ಗುಂಪಿಗೆ ಕಮಿಷನ್ ನೆರವು ನೀಡುತ್ತದೆ.

ಝೈರೆಯಿಂದ ಅಧ್ಯಕ್ಷ ಮೊಬುಟು ಪಲಾಯನ - ಕಬಿಲಾನ ಹೊಸ ಸರಕಾರ

ಸುಮಾರು ಏಳು ತಿಂಗಳುಗಳಿಂದ ತೀಕ್ಷ್ಣ ಗಂಭೀರ ಆಂತರಿಕ ಯುದ್ಧದಲ್ಲಿ ಮುಳುಗಿದ್ದ ಝೈರೆಯಿಂದ ಅಧ್ಯಕ್ಷ ಮೊಬುಟು ಹತ್ತಿರದ ಮೊರೊಕ್ಕೊಗೆ ಪಲಾಯನ ಮಾಡುವ ಮೂಲಕ ಬಿಕ್ಕಟ್ಟು ಪರಿಹಾರವಾಗಿದೆ. ಕಬಿಲಾ ಹಾಗೂ ಇತರ ದಂಗೆಕೋರ ಗೆರಿಲ್ಲಾಗಳ 'ಕಾಂಗೋ ಝೈರೆಯ ವಿಮೋಚನೆಗೆ ಪ್ರಜಾಸತ್ತಾತ್ಮಕ ಶಕ್ತಿಗಳ ರಂಗ' ರಾಜಧಾನಿ ಕಿನ್‌ಶಾಸಾ ಪ್ರವೇಶಿಸಿ, ನಗರವನ್ನು ವಶಪಡಿಸಿ ಕೊಂಡಿದೆ. ಅಧಿಕಾರ ವಹಿಸಿಕೊಂಡ ಕೂಡಲೇ ಕಬಿಲಾದ ನಾಯಕತ್ವದ ಸರಕಾರ ದೇಶದ ಹೆಸರನ್ನು ಕಾಂಗೋ ಎಂದು ಬದಲಾಯಿಸಿದೆ. 1960 ರಲ್ಲಿ ಮಾಜಿ ವಸಾಹತು ದೇಶ ಬೆಲ್ಜಿಯಂನಿಂದ ಸ್ವಾತಂತ್ರ್ಯ ಪಡೆದಾಗ, ಕಾಂಗೋ ಎಂದೇ ಹೆಸರಾಗಿತ್ತು ಈ ದೇಶ. 1971 ರಲ್ಲಿ ಅಧ್ಯಕ್ಷ ಮೊಬುಟುರ ಆಡಳಿತ ದೇಶದ ಹೆಸರನ್ನು ಝೈರೆ ಎಂದು ಬದಲಾಯಿಸಿತ್ತು. 1965 ರಲ್ಲಿ ಅಧಿಕಾರ ಕಸಿದುಕೊಂಡ ಮೊಬುಟು ಮೂವತ್ತು ವರ್ಷಗಳ ಕಾಲ ಸರ್ವಾಧಿಕಾರಿಯಾಗಿ ಆಳಿದ - ಸಾಮ್ರಾಜ್ಯಶಾಹಿ ಬೆಂಬಲದಿಂದ. ಬೆಲ್ಜಿಯಂ, ಅಮೆರಿಕಾ, ಫ್ರಾನ್ಸ್‌ಗಳು ಮೊಬುಟುನ ಸರ್ವಾಧಿಕಾರಕ್ಕೆ ಪೂರ್ಣ ಬೆಂಬಲ ನೀಡಿದ್ದವು. ಅಮೆರಿಕ, ಬೆಲ್ಜಿಯಂಗಳು ಮೊಬುಟುನನ್ನು ಇತ್ತೀಚೆಗೆ ಬಿಟ್ಟುಕೊಟ್ಟಿದ್ದರು. ಫ್ರಾನ್ಸ್ ಮೊಬುಟುಗೆ ಕೊನೆಯ ದಿನದವರೆಗೂ ಬೆಂಬಲ ನೀಡಿತ್ತು. ಮೊಬುಟು ದೇಶದ ಮೇಲೆ ಹಿಡಿತ ಕಳೆದುಕೊಂಡಿರುವುದು ಜನರ ಕೋಪಕ್ಕೆ ತುತ್ತಾಗಿರುವುದು ಕಂಡ ಅಮೆರಿಕ, ಬೆಲ್ಜಿಯಂಗಳು ಆತನಿಗೆ ತನ್ನ ಬೆಂಬಲ ವಾಪಸು ತೆಗೆದಿದ್ದವು. ಮೂವತ್ತು ವರ್ಷದ ದುರಾಡಳಿತದಲ್ಲಿ ಆಫ್ರಿಕಾದಲ್ಲಿ ಅತ್ಯಂತ ಶ್ರೀಮಂತ ದೇಶವೆಂದು ಹೇಳಲಾಗುವ ಈ ದೇಶ ಬಡತನ, ದಾರುಣ್ಯಗಳ ಬೀಡಾಗಿತ್ತು. ದೇಶವನ್ನು ಲೂಟಿ ಹೊಡೆದು ಮೊಬುಟು ಭಾರಿ ಹಣ ಸಂಪಾದಿಸಿ ವಿದೇಶಿ ಬ್ಯಾಂಕುಗಳಲ್ಲಿ ಇಟ್ಟಿದ್ದ ಎನ್ನಲಾಗಿದೆ.

ಭಾರಿ ಸಾವು ನೋವುಗಳಿಗೆ ಕಾರಣವಾದ ಕಳೆದ ಕೆಲವು ತಿಂಗಳುಗಳ ಕಾಂಗೋದ ಆಂತರಿಕ ಯುದ್ಧವನ್ನು ನಿಲ್ಲಿಸಲು ಹಲವು ಅಂತರ್ರಾಷ್ಟ್ರೀಯ ಪ್ರಯತ್ನಗಳಾಗಿದ್ದವು. ಇದರಲ್ಲಿ ಮಹತ್ವದ್ದು ಹಾಗೂ ಸಫಲವಾದದ್ದೆಂದರೆ ದಕ್ಷಿಣ ಆಫ್ರಿಕಾದ ಅಧ್ಯಕ್ಷ ನೆಲ್ಸನ್ ಮಂಡೇಲಾರವರದ್ದು. ಅವರು ಹಡಗೊಂದರಲ್ಲಿ (ಮಾಜಿ ಅಧ್ಯಕ್ಷ) ಮೊಬುಟು ಹಾಗೂ ದಂಗೆಕೋರರ ನಾಯಕ ಕಬಿಲಾ ಮಧ್ಯೆ ಮಾತುಕತೆ ಏರ್ಪಡಿಸಿದ್ದರು. ಮೊಬುಟು ತನ್ನ ಅಧ್ಯಕ್ಷಗಿರಿ ಬಿಟ್ಟುಕೊಡಲು ಒಪ್ಪದ್ದರಿಂದ ಮಾತುಕತೆಗಳು ಮುರಿದು ಬೀಳುತ್ತಿದ್ದವು. ಈ ನಡುವೆ ಕಬಿಲಾದ ಸೈನ್ಯ ರಾಜಧಾನಿಯನ್ನು ಸುತ್ತುವರೆದಿದ್ದು, ದೇಶದ ಹೆಚ್ಚಿನ ಭಾಗವನ್ನು ವಶಪಡಿಸಿಕೊಂಡಿದ್ದವು. ಆಗ ಮೊಬಟು ಮಣಿದು, ದೇಶ ಬಿಟ್ಟು ಓಡಿಹೋಗಬೇಕಾಯಿತು.

ಮೊಬಟುನ ಪಲಾಯನ ಉತ್ತರ ಆಫ್ರಿಕಾದ ತನ್ನ ಹಿತ್ತಲು ಎಂಬಂತೆ ಆಡುತ್ತಿದ್ದ ಫ್ರೆಂಚ್‌ರಿಗೆ ತಪರಾಕಿ ಕೊಟ್ಟಂತೆ. ಫ್ರೆಂಚರು ತಮ್ಮ ಸೈನ್ಯವನ್ನು ಉತ್ತರ ಆಫ್ರಿಕಾದಲ್ಲಿ ನೆಲೆಸಿ ಎಲ್ಲೆಂದರಲ್ಲಿ ತಮ್ಮ ಹಿತಾಸಕ್ತಿ ಕಾಪಾಡಲು ಸೈನ್ಯವನ್ನು ಕಳಿಸುತ್ತಿದ್ದರು. ತಮಗೆ ವಿಧೇಯವಾದ ಸರಕಾರವನ್ನು ಕಾಪಾಡುತ್ತಿದ್ದರು. ಇತರರ ವಿರುದ್ಧ ಪಿತೂರಿ ಮಾಡುತ್ತಿದ್ದರು. ಅದು ನಡೆಯುವ ಕಾಲ ದಾಟಿ ಹೋಗಿದೆ ಎದು ಝೈರೆ ತೋರಿಸಿಕೊಟ್ಟಿದೆ.

ಸಾಮ್ರಾಜ್ಯ ಮಾಧ್ಯಮಗಳು ಆಫ್ರಿಕಾದ ಎಲ್ಲಾ ಸಮಸ್ಯೆಗಳಲ್ಲಿ ದಾರುಣ ಮಾನವ ಪರಿಸ್ಥಿತಿಯೆಲ್ಲವೂ, ಅಂತಃಕಲಹದಿಂದ ಬರುವಂತದ್ದು ಎಂದು ಬಿತ್ತರಿಸುತ್ತದೆ. ಝೈರೆಯ ಸಾಮ್ರಾಜ್ಯಶಾಹಿ ಕೈವಾಡ ಸ್ಪಷ್ಟ. ಇದು ನಡೆಯಲಾರದು ಎಂದು ಝೈರೆ ತೋರಿಸಿಕೊಟ್ಟಿದೆ.

ಎಂತಹ ನಾಚಿಕೆಗೇಡಿ ಕೂಟ!

ಪುಟ 1ರಿಂದ

ಪಾರ್ಟಿಯ ನಿತಿಶ್ ಕುಮಾರ್, ಬಿಜೆಪಿಯ ಉಮಾಭಾರತಿ ಮತ್ತು ಹರಿಚರಣ್ ರಜಪೂತ್, ಮುಸ್ಲಿಂ ಲೀಗ್‌ನ ಬನಾತ್ ವಾಲಾ ಮತ್ತಿತರರು ದೊಡ್ಡ ರಂಪವನ್ನೇ ಎಬ್ಬಿಸಿದರು. ಮಾಜಿ ಪ್ರಧಾನಿ ಚಂದ್ರಶೇಖರ್‌ವರೂ ಈ ರೀತಿ ಅಡ್ಡಿ ಪಡಿಸುವವರ ಬೆಂಬಲಕ್ಕೆ ಎದ್ದು ನಿಂತರು! ಇವರು ನಿಜವಾಗಿಯೂ ಹಿಂದುಳಿದ ಮಹಿಳೆಯರ ಪ್ರತಿನಿಧಿಗಳೇ?

ಈ ಮಸೂದೆಯನ್ನು ಒಬಿಸಿ ಗಳಿಗೆ ಮೀಸಲಾತಿಯ ಹೆಸರಲ್ಲಿ ವಿರೋಧಿಸುವವರು ನಿಜವಾಗಿಯೂ ಒಬಿಸಿ ಮಹಿಳೆಯರ ಪ್ರತಿನಿಧಿಗಳೇ ಎಂದು ಖಾರವಾಗಿ ಪ್ರಶ್ನಿಸಿರುವ ಎಐಡಿಡಬ್ಲ್ಯುಎ ಮಹಿಳಾ ಮೀಸಲಾತಿಯಿಂದ ಒಬಿಸಿ ಮಹಿಳೆಯರಿಗೂ ಪ್ರಯೋಜನವಾಗುತ್ತದೆ ಎಂದು ವಾದಿಸಿದೆ. ಒಂದರೆ ಜಾತಿಆಧಾರದಲ್ಲಿ ಚುನಾವಣಾ [illegible]ಗಳನ್ನು ಆರಿಸುವ ಈ ಪಕ್ಷಗಳು ಮಹಿಳಾ ಮೀಸಲು ಸ್ಥಾನಗಳಲ್ಲೂ ಅದನ್ನೇ ಮಾಡುತ್ತವೆ ತಾನೇ? ಆದ್ದರಿಂದ ಈ ಮಸೂದೆಯನ್ನು ವಿರೋಧಿಸುವವರ ಮನಸ್ಸಿನಲ್ಲಿರುವ ನಿಜವಾದ ಕಾರಣ ಅದಲ್ಲ, ಸಂಸತ್ತಿನ 181ನೇ ಸ್ಥಾನಗಳನ್ನು ಮಹಿಳೆಯರಿಗೆ ಬಿಟ್ಟುಕೊಡಬೇಕಲ್ಲ ಎಂಬ ಭಯವೇ ಈ ವಿರೋಧಕ್ಕೆ ನಿಜವಾದ ಕಾರಣ. ಕಳೆದ ದಶಕದಲ್ಲಿ ಈ ಹಿಂದುಳಿದ ವಿಭಾಗಗಳ ಮಹಿಳೆಯರ ಮೇಲಿನ ಹಿಂಸಾಚಾರದ ವಿರುದ್ಧ ಹಲವಾರು ಹೋರಾಟಗಳು ನಡೆದವು. ಆದರೆ ಈಗ ಒಬಿಸಿ ಮಹಿಳೆಯರ ಬಗ್ಗೆ ಆತಂಕ ವ್ಯಕ್ತಪಡಿಸುವ ಈ ಮಹನೀಯರಾರೂ ಈ ಹೋರಾಟಗಳತ್ತ ಹೊರಳಿಯೂ ನೋಡಿದವರಲ್ಲ. ರಾಜಸ್ಥಾನದಲ್ಲಿ ಬಾಂವ್ರಿ ದೇವಿಯ ಮೇಲಿನ ಅತ್ಯಾಚಾರದ ವಿರುದ್ಧವಾಗಲೀ, ಬಿಹಾರದಲ್ಲಿ ಭುಕ್ಷಿದೇವಿಯನ್ನು ನಗ್ನಗೊಳಿಸಿ ಬೀದಿಯಲ್ಲಿ ಮೆರವಣಿಗೆ ಮಾಡಿದುದರ ವಿರುದ್ಧವಾಗಲೀ ಅಥವಾ ಸಹಾರನಪುರ ನ್ಯಾಯಾಲಯದಲ್ಲಿ ಉಷಾ ಧೀಮನ್‌ಳ ವಸ್ತ್ರಾಪಹರಣ ಮಾಡಿ ಪ್ರತಿಭಟಿಸಿದಾಗಲಾಗಲೀ ಹೋರಾಟ ಮಾಡಿದವರು ವಿವಿಧ ಮಹಿಳಾ ಸಂಘಟನೆಗಳೇ ಹೊರತು ಈ ಮಹನೀಯರುಗಳಲ್ಲ ಎಂದಿರುವ ಎಐಡಿಡಬ್ಲ್ಯುಎ ಮಹಿಳೆಯರಿಗೆ ನ್ಯಾಯವೆಂಬುದು ಸಾಮಾಜಿಕ ನ್ಯಾಯಕ್ಕಾಗಿ ನಡೆಯುತ್ತಿರುವ ಹೋರಾಟದ ಅಂಗ ಎಂದು ಪ್ರಗತಿಪರ ಮಹಿಳಾ ಚಳುವಳಿ ನಂಬಿರುವುದರಿಂದಲೇ ಅದು ಇಂತಹ ಹೋರಾಟಕ್ಕಿಳಿಯಿತು ಎಂದು ನೆನಪಿಸಿದೆ.

ತಾಲಿಬಾನ್ ಮತ್ತು ಶರದ್ ಯಾದವ್

ಶರದ್ ಯಾದವ್‌ರವರು ಈ ಸಂದರ್ಭದಲ್ಲಿ ಮಹಿಳೆಯರ ಒಂದು ವಿಭಾಗದ ಬಗ್ಗೆ ಹೇಳಿದ ಮಾತುಗಳು ಅತ್ಯಂತ ಆಕ್ಷೇಪಣೀಯ ಎಂದೂ ಎಐಡಿಡಬ್ಲ್ಯುಎ ಖಂಡಿಸಿದೆ. "ತಲೆಗೂದಲು ಕತ್ತರಿಸಿಕೊಂಡ ಈ ಮಹಿಳೆಯರು ನಮ್ಮ ಮಹಿಳೆಯರ ಬಗ್ಗೆ ಮಾತನಾಡಬಲ್ಲರೇ?" ಎಂದು ಅವರು ಕುಹಕವಾಡಿದ್ದಾರೆ. ಇದು ಅಫಘಾನಿಸ್ತಾನದ ಮೂಲಭೂತವಾದಿ ತಾಲಿಬಾನ್‌ರವರ ಆದೇಶವನ್ನು ನೆನಪಿಸುವಂತಹ ಮಾತು. ಅದು ಕಾಬೂಲಿನಲ್ಲಿ ಉದ್ದ ಗಡ್ಡವಿಲ್ಲದ ಪುರುಷರ ವಿರುದ್ಧ ಆದೇಶ ಹೊರಡಿಸಿದೆ. ತಾಲಿಬಾನ್ ಉದ್ದ ಗಡ್ಡದ ಪುರುಷರಿಗೆ ಮಾತ್ರ ಗೌರವ ನೀಡಿದರೆ, ಶರದ್ ಯಾದವ್ ಬಹುಶ ಉದ್ದ ಕೂದಲಿನ ಮಹಿಳೆಯರಿಗೆ ಮಾತ್ರವೇ ಗೌರವ ನೀಡಬಲ್ಲರು -ಇಂತಹ ಮಾತಿನ ಮೂಲಕ ಅವರು ಜನತಾದಳದ ಕಾರ್ಯಾಧ್ಯಕ್ಷ ಸ್ಥಾನಕ್ಕೆ ಅಪಚಾರವೆಸಗಿದ್ದಾರೆ ಎಂದು ಎಐಡಿಡಬ್ಲ್ಯುಎ ಖೇದ ವ್ಯಕ್ತಪಡಿಸಿದೆ. ಈ ಬಗ್ಗೆ ಕ್ರಮ ಕೈಗೊಳ್ಳುವುದು ಆ ಪಕ್ಷಕ್ಕೇ ಬಿಟ್ಟಿದ್ದು. ಆದರೆ ಇಂತಹ ಹೀನ ಮಾತಿಗೆ ಅವರು ಈ ದೇಶದ ಮಹಿಳೆಯರ ಕ್ಷಮೆ ಕೇಳಬೇಕು ಎಂದು ಎಐಡಿಡಬ್ಲ್ಯುಎ ಒತ್ತಾಯಿಸಿದೆ.

ಅರ್ಥವಿಲ್ಲದ ಹೋಲಿಕೆ

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್‌ರವರು ಮೀಸಲಾತಿಗೆ ಸಂಬಂಧಪಟ್ಟಂತೆ ಮಹಿಳೆಯರು ಮತ್ತು ಇತರ ಹಿಂದುಳಿದ ವರ್ಗಗಳನ್ನು ಹೋಲಿಸುವುದು ಸರಿಯಲ್ಲ, ಇದು ನಿಜವಾದ ಪ್ರಶ್ನೆಯಿಂದ ಗಮನವನ್ನು ಬೇರೆಡೆಗೆ ಸೆಳೆಯುವ ತಂತ್ರವಷ್ಟೆ ಎಂದು ಒಂದು ಲೇಖನದಲ್ಲಿ ಸ್ಪಷ್ಟವಾಗಿ ಅಭಿಪ್ರಾಯಪಟ್ಟಿದ್ದಾರೆ. 'ಒಬಿಸಿ'ಗಳು ರಾಜಕೀಯದಲ್ಲಿ ಹೆಚ್ಚೆಚ್ಚು ಭಾಗವಹಿಸುವಂತೆ ಜನತಾದಳವೂ ಸೇರಿದಂತೆ ಎಲ್ಲಾ ರಾಜಕೀಯ ಪಕ್ಷಗಳೂ ಪ್ರಯತ್ನಿಸಬೇಕು. ಆದರೆ ಮಹಿಳೆಯ 33% ಮೀಸಲಾತಿಯೊಳಗೇ 'ಒಬಿಸಿ' ಮಹಿಳೆಯರಿಗೆ ಮೀಸಲಾತಿ ನೀಡುವುದು ಈ ಉದ್ದೇಶವನ್ನು ಈಡೇರಿಸುವುದಿಲ್ಲ, ಅದೇ ರೀತಿ ಮುಸ್ಲಿಮರ ಪ್ರಾತಿನಿಧ್ಯ ಕಮ್ಮಿಯಿದೆ ಎಂಬ ಬಗ್ಗೆ ಎರಡು ಮಾತಿಲ್ಲವಾದರೂ ಕೋಮು ಆಧಾರದಲ್ಲಿ ಮೀಸಲಾತಿ ನೀಡುವುದು ಅದಕ್ಕೆ ಪರಿಹಾರವಲ್ಲ, ಬದಲಾಗಿ ಅದು ಅಲ್ಪ ಸಂಖ್ಯಾತರ ಮೇಲೆಯೇ ದುಷ್ಪರಿಣಾಮ ಬೀರುತ್ತದೆ. ಅಲ್ಪಸಂಖ್ಯಾತರ ಭವಿಷ್ಯ ಅವರು ಒಟ್ಟಾರೆ ಪ್ರಜಾಪ್ರಭುತ್ವ ಆಂದೋಲನದ ಮುಖ್ಯ ಪ್ರವಾಹದಲ್ಲಿ ಬೆರೆಯುವುದರಲ್ಲೇ ಅಡಗಿದೆಯೇ ಹೊರತು ಕೋಮು ಧ್ರುವೀಕರಣದಲ್ಲಿ ಅಲ್ಲ ಎಂದೂ ಸುರ್ಜಿತ್ ತಮ್ಮ ಲೇಖನದಲ್ಲಿ ಹೇಳಿದ್ದಾರೆ.

ಮಹಿಳೆಯರಿಗೆ ಮೀಸಲಾತಿ ನೀಡಿದರೆ ಪುರುಷ ಎಂ.ಪಿ.ಗಳು ಎಲ್ಲಿಗೆ ಹೋಗುವುದು ಎಂದೂ ಕೆಲವರು ತರ್ಕ ಹೂಡಿದ್ದಾರೆ. ಇದು ಹಾಸ್ಯಾಸ್ಪದ. ಲೋಕಸಭೆ, ವಿಧಾನ ಸಭೆಗಳಲ್ಲಿ ತಮ್ಮ ಗುತ್ತೇದಾರಿಕೆಯನ್ನು ಉಳಿಸಿಕೊಳ್ಳುವ ಪುರುಷ ಸಂಕುಚಿತತೆಯನ್ನು ತೋರಿಸುವ ಮಾತಿದು. ಇದು ಪ್ರಜಾಪ್ರಭುತ್ವ ಪ್ರಜ್ಞೆಗೆ ಹಾಗೂ ನಮ್ಮ ಸಂವಿಧಾನದ ಮೂಲಭೂತ ಆಶಯಕ್ಕೆ ವಿರುದ್ಧವಾದ ಭಾವನೆ ಎಂದಿರುವ ಸುರ್ಜಿತ್ ಅವರು ಈ ಎಲ್ಲಾ ಕುತರ್ಕಗಳು, ತಂತ್ರಗಳನ್ನು ದೃಢ ನಿರ್ಧಾರದಿಂದ ಎದುರಿಸಬೇಕು, ಯಾವುದೇ ಹಿಂಜರಿಕೆ ತೋರದೆ, ಇನ್ನಷ್ಟು ವಿಳಂಬ ಮಾಡದೆ ಈ ಮಸೂದೆಯನ್ನು ಅಂಗೀಕರಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಪುಸ್ತಕ ಪರಿಚಯ

ಆತ್ಮೀಯತೆ ತರುವ ಆತ್ಮಕಥನ

> ಅಂಚೆಪೇದೆಯ ಆತ್ಮ ಕಥನ
> ಲೇ: ವಿಡಂಬಾರಿ
> ರಾಘವೇಂದ್ರ ಪ್ರಕಾಶನ:
> ಅಂಕೋಲ(ಉ.ಕ)

ಮರಾಠಿಯಲ್ಲಿ ಬಂದ 'ಅಕ್ಕರಮಾಶಿ', 'ಉಚಲ್ಯಾ', 'ಬಲೂತ' ಮೊದಲಾದ ಆತ್ಮ ಚರಿತೆಗಳು ಆತ್ಮ ಚರಿತ್ರೆಯ ಬಗ್ಗೆ ಇದ್ದ ಅಕಾಡೆಮಿಕ್ ಆದ ಎಲ್ಲಾ ನಂಬಿಕೆಯನ್ನು ಮುರಿದು, ಸಾಮಾನ್ಯ ವ್ಯಕ್ತಿ ಬದುಕಿನ ಜತೆ ನಡೆಸುವ ಗುದ್ದಾಟದ ಹಸಿ ಹಸಿ ವಿವರ ಕೂಡ ಮೌಲಿಕ ಆಗಬಹುದು. ಹೊಸ ಲೋಕವೊಂದನ್ನು ಪರಿಚಯಿಸಬಹುದು ಎಂದು ತೋರಿಸಿ ಕೊಟ್ಟವು. ಈ ಮಾದರಿಯಲ್ಲಿ ಇತ್ತೀಚೆಗೆ ಕನ್ನಡದಲ್ಲಿ ಪ್ರಕಟವಾದ ಚುಟುಕು ಕವಿ ವಿಡಂಬಾರಿ(ವಿ.ಜಿ.ಬಂಡಾರಿ, ಶಿರಾಲಿ) ಅವರ ಬದುಕಿನ ಕಥೆ. "ಅಂಚೆ ಪೇದೆಯ ಆತ್ಮ....." ಅತ್ಯಂತ ಮುಖ್ಯವಾದದ್ದು.

ಈಗಾಗಲೇ 'ಒಗ್ಗರಣೆ', 'ಕವಳ' ಎನ್ನುವ ಎರಡು ಚುಟುಕು ಸಂಕಲನಗಳ ಮೂಲಕ ನಾಡಿಗೆ ಪರಿಚಿತರಾದ ವಿಡಂಬಾರಿಯವರ ಈವರೆಗಿನ ಸಾಧನೆ ಬೆರಗುಗೊಳಿಸುವಂತದ್ದು.

ಇದುವರೆಗೆ ಕನ್ನಡದಲ್ಲಿ ಬಂದ ಉತ್ತಮ ಆತ್ಮ ಕಥನಗಳಲ್ಲಿ ಇದೊಂದು. ಕೇವಲ 50 ಪುಟಗಳಲ್ಲಿ ತಾನುಕಂಡ 58 ವೈಶಾಖಗಳನ್ನು ಲೇಖಕರು ಇಲ್ಲಿ ತೆರೆದಿಟ್ಟಿದ್ದಾರೆ. ಈ ಐವತ್ತೆಂಟು ವೈಶಾಖಗಳಲ್ಲಿ ಸೂಳೆಯ ಮಗನಾಗಿ ಹುಟ್ಟಿದ್ದು, ಬಾಲ್ಯ ಕಳೆದದ್ದು, ಒಡ ಹುಟ್ಟಿದ ಅಕ್ಕನ ಮಾರಾಟ ಆದ್ದದ್ದು, ಬದುಕುವುದಕ್ಕಾಗಿ ಹವ್ಯಕರ ಮನೆಯಲ್ಲಿ ಉಂಡಿದ್ದು, ಮಲತಾಯಿಯಿಂದ ಹಿಂಸೆಗೊಳಗಾದದ್ದು, ಮನೆ ಮನೆಗೆ ತಿರುಗಿ ಪತ್ರ ಮುಟ್ಟಿಸುವ ಅಂಚೆಪೇದೆ ಆದದ್ದು, ಈ ಮಧ್ಯ ಬಡತನದ, ಕೆಳಜಾತಿಯ ಕಾರಣಕ್ಕಾಗಿ ಅವಮಾನಿತ ಆದದ್ದು, ಚುಟುಕು ಕವಿಯಾಗಿ ಹೆಸರುಗಳಿಸಿದ್ದು, ಗೆಳೆಯರನ್ನು ಗಳಿಸಿದ್ದು, ಸನ್ಮಾನಗಳನ್ನು ಸ್ವೀಕರಿಸಿದ್ದು, ಎಡಪಂಥೀಯ ವಿಚಾರಧಾರೆಯ ಕಡೆ ಆಕರ್ಷಿತ ಆಗಿದ್ದು-ಹೀಗೆ ಪುಟ ಪುಟದಲ್ಲೂ ಅನುಭವ ತುಂಬಿದ ಸಂಚಿಕೆ ಇದು.

"ಹಿರಿಯರ ಮುಗ್ಧತನ, ದೇವಸ್ಥಾನಕ್ಕೆ(ಈಗಿನ ಪ್ರಸಿದ್ಧ ಪುಣ್ಯಕ್ಷೇತ್ರ ಎಂದು ಹೆಸರಾದ ಹೊನ್ನಾವರದ ಇಡಗುಂಜಿ ಗಣಪತಿಯ ದೇವಸ್ಥಾನ) ಸಂಬಂಧಪಟ್ಟವರ ಸ್ವಾರ್ಥಕ್ಕೆ ಬಲಿಯಾಗಿ ತನ್ನ ತಾಯಿಯಾದ ಗಣಪಿದೇವರ ಹೆಸರಿನಲ್ಲಿ ಸೂಳೆ(ವೇಶ್ಯೆ) ಆದಳಂತೆ ಎಂದು ಲೇಖಕ ಮೊದಲೇ ಹೇಳಿಕೊಳ್ಳುತ್ತಾನೆ. 'ಉಚಲ್ಯಾ' ದಲ್ಲಿ ನಾವು 'ಕಳ್ಳರ ವಂಶದವರು' ಎಂದು ಹೇಳಿಕೊಳ್ಳಲು ಹೇಗೆ ಮುಜುಗರ ಪಡುವುದಿಲ್ಲವೋ ಹಾಗೆ ವಿಡಂಬಾರಿಯವರೂ ಹೀಗೆ ಹೇಳಲು ನಾಚುವುದಿಲ್ಲ. ಈ ನಾಚಿಕೆ, ಅವಮಾನಕ್ಕೆ ಬದಲು ತಾಯಿಯನ್ನು ಸೂಳೆಯಾಗಿಸಿದ ಸಮಾಜದ ಬಗ್ಗೆ, ಅದರ ಕಟ್ಟಳೆಗಳ ಬಗ್ಗೆ ಸಿಟ್ಟಿದೆ. ದ್ವೇಷವಿದೆ, ಅನುಕಂಪವಿದೆ. ಈ ಸಮಸ್ಯೆ ವಿಡಂಬಾರಿಯವರದು ಮಾತ್ರವಲ್ಲ ಇಡೀ 'ಭಂಡಾರಿ' ಸಮಾಜದ್ದೇ ಆಗಿದೆ. ಇದು ಲೇಖಕರು ಹೇಳುವ ಹಾಗೆ ಪುರೋಹಿತರ ಮತ್ತು ಹಣವುಳ್ಳವರ ದೈಹಿಕ ತೀಟೆ ತೀರಿಸಿಕೊಳ್ಳುವ ಉದ್ದೇಶಕ್ಕಾಗಿಯೇ ದೇವರ ಹೆಸರಿನಲ್ಲಿ ಹೆಣ್ಣನ್ನು ದೇವದಾಸಿ ಆಗಿಸುವ ಒಂದು ಅನಿಷ್ಟ ಪದ್ಧತಿ ಇವರ ಪಳೆಯುಳಿಕೆಗಳನ್ನು ಇಂದೂ ನೋಡಬಹುದು.

ಕೇವಲ ಮೂರನೇ ಕ್ಲಾಸನ್ನು ಕಲಿತು 23 ರೂಪಾಯಿ ಸಂಬಳಕ್ಕೆ ನೌಕರಿ ಸೇರಿದ ಇವರು ಅಂಚೆ ಇಲಾಖೆಯಲ್ಲಾದ ಅನೇಕ ಕಹಿ-ಸಿಹಿ ಘಟನೆಗಳನ್ನು ಈ ಪುಸ್ತಕದಲ್ಲಿ ಮೆಲುಕು ಹಾಕಿದ್ದಾರೆ.

ಜಿಲ್ಲೆಯ, ರಾಜ್ಯದ ಪ್ರಮುಖ ಸಾಹಿತಿಗಳನ್ನು ಭೇಟಿ ಆದ ಅನುಭವವನ್ನು ಇಲ್ಲಿ ಲೇಖಕರು ಹಂಚಿಕೊಂಡಿದ್ದಾರೆ. ಅವರ ಸಂಘ ಮತ್ತು ಪ್ರೋತ್ಸಾಹದಿಂದಾಗಿ ತಾನು ಕವಿ ಆದ ಬಗ್ಗೆ ಕೃತಜ್ಞಾಭಾವ ಇಲ್ಲಿದೆ.

ಭಟ್ಕಳದಲ್ಲಿ ಕೋಮುದಳ್ಳುರಿ ಹತ್ತಿ ಉರಿಯುವಾಗ ಇವರ ಮನಕಲಕಿದ ಘಟನೆಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ. ಹಿಂದುಗಳಿಗೆ ಮುಸ್ಲಿಂರು ರಕ್ಷಣೆ ಕೊಟ್ಟ, ಮುಸ್ಲಿಂ ಮಕ್ಕಳು/ಹೆಂಗಸರಿಗೆ ಹಿಂದೂ ಮನೆಯಲ್ಲಿ ಆಶ್ರಯಕೊಟ್ಟ ಸೌಹಾರ್ಧತಾ ವಾತಾವರಣದ ಬಗ್ಗೆ ಬರೆಯುತ್ತಾ ಉದ್ದೇಶಪೂರ್ವಕವಾಗಿ ಕೆಲವು ಶಕ್ತಿಗಳು ನಡೆಸಿದ ಈ ಆಟದ ಬಗ್ಗೆ ಮರುಗುತ್ತಾರೆ.

ಈ ಎಲ್ಲಾ ಘಟ್ಟಗಳನ್ನು ದಾಟಿ ಬಂದ ವಿಡಂಬಾರಿಯವರು ತಲುಪುವ ನೆಲೆಕೂಡ ಎಡಪಂಥೀಯವಾದದ್ದೇ ಆಗಿದೆ.

ಸದಾ ಎಡಪಂಥೀಯ ಸಂಘಟನೆ/ಕಾರ್ಯಕ್ರಮಗಳೊಂದಿಗೆ ಗುರುತಿಸಿಕೊಳ್ಳುತ್ತಿರುವ ಲೇಖಕರು ಅದನ್ನು ಹೀಗೆ ನೆನಪಿಸಿಕೊಳ್ಳುತ್ತಾರೆ. "ಆದರೆ ಕೆಲವರೇ, ಹಲವರನ್ನು ದುಡಿಸಿ ತಾವು ಮಾತ್ರ ಕುಳಿತುಂಡು ಹಲವರಿಗೆ ಅರೆಹೊಟ್ಟೆ ಉಣ್ಣುವಂತೆ ವ್ಯವಸ್ಥೆ ಮಾಡಿದ್ದು ನನ್ನನ್ನು ಚಿಂತೆಗೀಡುಮಾಡಿತ್ತು., ಸಮಾಜದ ಈ ಅನಿಷ್ಟವನ್ನು ಕಂಡು ಇದಕ್ಕೆ ಪರ್ಯಾಯ ವ್ಯವಸ್ಥೆಯ ಬಗ್ಗೆ ಯೋಚಿಸುತ್ತಿದ್ದೆ. ಆಗ ನಾನು ಓದಿದ ಕೆಲವು ಪುಸ್ತಕಗಳಿಂದ ಮತ್ತು ನನ್ನ ಸನ್ಮಿತ್ರರುಗಳಿಂದ ತಿಳಿದುಕೊಂಡ ಎಡಪಂಥೀಯ ಧೋರಣೆ ಮಾತ್ರ ಈ ಅನಿಷ್ಟಗಳಿಗೆ ಸವಾಲಾಗಬಹುದೆಂದು ದೃಢವಾಗಿ ನಂಬಿದೆ. ಈ ಸಮಯದಲ್ಲಿಯೇ ಶಿರಾಲಿಯಲ್ಲಿ ಸುಭಾಸ್ ಕೊಪ್ಪಿಕರ ಅವರ ಮಾರ್ಗದರ್ಶನದಲ್ಲಿ ಎಸ್‌ಎಫ್‌ಐ ಎಂಬ ಸಂಘಟನೆ ಪ್ರಾರಂಭ ಆಯಿತು. ನನಗೆ ಬಿಡುವಿದ್ದಾಗಲೆಲ್ಲಾ ಅವರ ಕಾರ್ಯಕ್ರಮದಲ್ಲಿ ಭಾಗವಹಿಸಲು ಉಪಕ್ರಮಿಸಿದೆ, ಮುಂದೆ ಡಿವೈಎಫ್‌ಐ, ಸಿಐಟಿಯು ಕಾರ್ಯಕ್ರಮದಲ್ಲೂ ಭಾಗವಹಿಸಿದೆ"

ಹೀಗೆ 3ನೇ ಈಯತ್ತಿನವರೆಗೆ ಓದಿ, ಮನೆ ಮನೆಗಳಲ್ಲಿ ತಂಗಳನ್ನು ಉಂಡು, ಸ್ವಂತ ಪರಿಶ್ರಮದಿಂದ ಖ್ಯಾತ ಚುಟುಕ ಕವಿಯಾಗಿ ಎಂದೂ ಪ್ರತಿಗಾಮಿ ಮೌಲ್ಯಗಳನ್ನು ನಿರ್ಭಿಡೆಯಿಂದ ವಿರೋಧಿಸಿ, ಆ ಕಾರಣಕ್ಕಾಗಿಯೇ ಜೀವನದ ಅನೇಕ ಸುಖಗಳನ್ನು ಬಲಿಕೊಟ್ಟ ಇವರ ಈ ಆತ್ಮ ಕಥನ ಓದಿ ಮುಗಿಸುವುದರೊಳಗೆ ಲೇಖಕರು ಆತ್ಮೀಯರಾಗಿರುತ್ತಾರೆ.

- ವಿಠ್ಠಲ

ಮಾನವನು ನೀನಾಗು

ಸಂತ ನೀನಾಗದಿರು ಓ ಕಂದ ಕೊನೆಗೆ
ದೇವದೂತನು ಕೂಡ ಬೇಕಿಲ್ಲ ನಮಗೆ
ಇವು ಎಲ್ಲ ವೇಷಗಳ ಮನದಾಚೆ ನೂಕು
ಮಾನವನು ನೀನಾಗಿ ಬಾಳಿದರೆ ಸಾಕು

- ವಿಡಂಬಾರಿ

ಎನ್.ಟಿ.ಸಿ. ಗಿರಣಿಗಳ ಪುನರುಜ್ಜೀವನಕ್ಕೆ ತ್ರಿಪಕ್ಷೀಯ ಸಮಿತಿಯ ಒಪ್ಪಂದದ ಜಾರಿಗೆ ನಿರ್ಧಾರ

ಮೇ13 ರಂದು ಕಾರ್ಮಿಕ ಪ್ರತಿನಿಧಿಗಳು ಮತ್ತು ಲೋಕಸಭಾಧ್ಯಕ್ಷ ಪಿ.ಎ.ಸಂಗ್ಮಾರವರ ನಡುವೆ ನಡೆದ ಮಾತುಕತೆಗಳಲ್ಲಿ ಎನ್.ಟಿ.ಸಿ ಗಿರಣಿಗಳ ಪುನರುಜ್ಜೀವನ ಕುರಿತಂತೆ ಏಪ್ರಿಲ್9,1994ರಂದು ವಿಶೇಷ ತ್ರಿಪಕ್ಷೀಯ ಸಮಿತಿಯ ಸಭೆಯಲ್ಲಿ ಏರ್ಪಟ್ಟ 8 ಅಂಶ ಗಳ ಸರ್ವಾನುಮತದ ಒಪ್ಪಂದವನ್ನು ವಿಳಂಬವಿಲ್ಲದೆ ಜಾರಿಗೆ ತರಬೇಕೆಂದು ನಿರ್ಧರಿಸಲಾಯಿತು. ಈ ಒಪ್ಪಂದ ಜವಳಿ ಸಂಶೋಧನೆಯ ಸಂಸ್ಥೆಗಳ(ಟಿಆರ್‌ಎ ಗಳ) ವರದಿಯನ್ನು ಆಧರಿಸಿದ ಸರ್ವಾನುಮತದ ಒಪ್ಪಂದವಾದ್ದರಿಂದ ಈ ಗಿರಣಿಗಳನ್ನು ಮುಚ್ಚಬೇಕೆಂಬ ಬೇರಾವ ಶಿಫಾರಸು, ವರದಿಗಳನ್ನು ಪರಿಶೀಲಿಸಬಾರದು ಎಂದು ನಿರ್ಧರಿಸಲಾಯಿತು.

ಮೇ 8ರಂದು ಲೋಕಸಭೆಯಲ್ಲಿ ಸಂಗ್ಮಾರವರು ತಾನು ಮಧ್ಯ ಪ್ರವೇಶ ಮಾಡುವು ದಾಗಿ ನೀಡಿದ ಭರವಸೆಯ ಪ್ರಕಾರ ಈ ಮಾತುಕತೆ ನಡೆಯಿತು. ಅವರು ಕಾರ್ಮಿಕ ಮಂತ್ರಿಯಾಗಿದ್ದಾಗ ಈ ಸರ್ವಾನುಮತದ ಒಪ್ಪಂದ ಏರ್ಪಟ್ಟಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಸಂಗ್ಮಾರವರಿಗೆ ಮೇ12 ರಂದು ನೀಡಿದ ಒಂದು ಸಂಕ್ಷಿಪ್ತ ಮನವಿ ಪತ್ರದಲ್ಲಿ ಕಾರ್ಮಿಕ ಸಂಘಗಳು ಈ ಒಪ್ಪಂದದ ಬಗ್ಗೆ ಪ್ರಸ್ತಾಪಿಸಿ ದ್ದವು. 79 ರೋಗಗ್ರಸ್ತ ಎನ್‌ಟಿಸಿ ಜವಳಿ ಗಿರಣಿಗಳ ಪುನರಜ್ಜೀವನ ಯೋಜನೆಗಳನ್ನು ತಯಾರಿಸಲು ನಾಲ್ಕು ಜವಳಿ ಪರಿಶೋಧ ನಾ ಸಂಸ್ಥೆಗಳಿಗೆ 19992-93ರಲ್ಲಿ ಕೇಳಿಕೊಳ್ಳ ಲಾಗಿತ್ತು. ಎರಡು ವರ್ಷಗಳ ಆಮೂಲಾಗ್ರ ಚರ್ಚೆಯ ನಂತರ ಒಂದು ಸಮಗ್ರ ಯೋಜನೆಯನ್ನು ತಯಾರಿಸಲಾಯಿತು. ಏಪ್ರಿಲ್ 9, 1994 ರಂದು ಈ ಬಗ್ಗೆ ಸರ್ವಾನುಮತದ ಒಪ್ಪಂದಕ್ಕೆ ಬರಲಾಯಿತು.

ಆದರೆ ಕಾರ್ಮಿಕ ಸಂಘಗಳು ಹಲವು ಬಾರಿ ನೆನಪಿಸಿದರೂ ಈ ಒಪ್ಪಂದವನ್ನು ಜಾರಿಗೊಳಿಸಲಿಲ್ಲ, ಅದಕ್ಕೆ ನೀಡುತ್ತಿದ್ದ ಕಾರಣವೆಂದರೆ ಮಹಾರಾಷ್ಟ್ರ ಸರಕಾರ ಆಧುನೀಕರಣಕ್ಕೆ ಬೇಕಾಗುವ ಹಣವನ್ನು ಪಡೆಯಲು ಗಿರಣಿಗಳ ಹೆಚ್ಚುವರಿ ಜಮೀನು ಗಳನ್ನು ಮಾರಲು ಅನುಮತಿ ನೀಡುತ್ತಿಲ್ಲ ಎಂದು. ಆದರೆ ಇತ್ತೀಚೆಗೆರಾಜ್ಯಸರಕಾರಇದ ಕ್ಕೆ ಒಪ್ಪಿಗೆ ನೀಡಿದೆ ಎಂದು ತಿಳಿದು ಬಂದಿದೆ.

ಈ ನಡುವೆ ಸರ್ವಾನುಮತದ ಒಪ್ಪಂ ದವನ್ನು ಬದಿಗೊತ್ತಿ ಆರು ಮಂದಿ ಕಾರ್ಯ ದರ್ಶಿಗಳ ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿ 70 ಗಿರಣಿಗಳನ್ನು ಮುಚ್ಚಲು ಶಿಫಾರಸು ಮಾಡಿದರೆ ಹಣಕಾಸು ಇಲಾಖೆ ಇನ್ನೂ ಮುಂದೆ ಹೋಗಿ 107 ಗಿರಣಿಗಳನ್ನು ಮುಚ್ಚುವ ಶಿಫಾರಸು ಮಾಡಿತು. ಇದರಿಂದ 1,02,526 ಕಾರ್ಮಿಕರು ಕೆಲಸ ಕಳಕೊಂಡಂತಾಗುತ್ತದೆ.

ಇಂತಹ ತೀವ್ರ ಸ್ವರೂಪದ ಶಿಫಾರಸ್ಸಿಗೆ ಮುಖ್ಯ ಕಾರಣ ಸರಕಾರದ 'ಪ್ರಧಾನವಲ್ಲದ, ಮಹತ್ವವಲ್ಲದ ವಲಯಗಳಿಂದ ಸಾರ್ವಜನಿಕ ಕ್ಷೇತ್ರವನ್ನು ಹಿಂತೆಗೆದುಕೊಳ್ಳುವ" ನೀತಿಯೆಂದು ಕಾರ್ಮಿಕ ಸಂಘಗಳ ಮನವಿ ಪತ್ರ ಅಭಿಪ್ರಾಯ ಪಟ್ಟಿತ್ತು. ಜವಳಿಯಂತಹ ಪಥಪ್ರದರ್ಶಕ ಉದ್ದಿಮೆಯಿಂದ ಪ್ರಭುತ್ವ ಹಿಂತೆಗೆಯುವುದು, ಅದರಿಂದ ಲಕ್ಷಾಂತರ ಕಾರ್ಮಿಕರ ರಿಟ್ರೆಂಚ್‌ಮೆಂಟ್ ಇವನ್ನು ಖಂಡಿತಾ ಸಹಿಸಲು ಸಾಧ್ಯವಿಲ್ಲ ಎಂದ ಕಾರ್ಮಿಕ ಸಂಘಗಳು ಸಂಯುಕ್ತ ರಂಗ ಸರಕಾರ ಇನ್ನೂ ವಿಳಂಬ ಮಾಡದೆ 1994ರ ಸರ್ವಾನುಮತದ ಒಪ್ಪಂದವನ್ನು ಜಾರಿಗೆ ತಂದು ಈ ಗಿರಣಿಗಳನ್ನು ಪುನರುಜ್ಜೀವನಗೊ ಳಿಸಬೇಕೆಂದು ಆಗ್ರಹಿಸಿದವು.

ಮೇ 12 ರಂದುನಡೆದಸಭೆಯಲ್ಲಿಮಾಜಿ ಜವಳಿ ಮಂತ್ರಿ ವೆಂಕಟಸ್ವಾಮಿ ಯವರೂ ಹಾಜರಿದ್ದು ಈ ಸರ್ವಾನುಮತದ ಒಪ್ಪಂದ ದ ಆಧಾರದ ಮೇಲೆ ಜವಳಿ ಗಿರಣಿಗಳ ಪುನರುಜ್ಜೀವನವಾಗಬೇಕೆಂದು ನಿರ್ಧರಿಸಲಾ ಯಿತು. ಸಂಸತ್ ಸದಸ್ಯರ ಹಾಗೂ ಸಂಬಂಧ ಪಟ್ಟ ಮಂತ್ರಿಗಳ ಸಭೆ ಕರೆದು ಈ ಎಲ್ಲಾ ಪ್ರಶ್ನೆಗಳನ್ನು ಚರ್ಚಿಸಿ ಒಂದು ಸರ್ವಸಮ್ಮತಿಗೆ ಬಂದು ಅದರ ಆಧಾರದ ಮೇಲೆ ಜವಳಿ ಮಂತ್ರಿಗಳು ಸಂಸತ್ತಿನಲ್ಲಿ ಹೇಳಿಕೆ ನೀಡುವಂತೆ ಮಾಡುವುದಾಗಿ ಲೋಕಸಭಾಧ್ಯಕ್ಷರು ಭರವಸೆ ನೀಡಿದರು.

ಸಿಐಟಿಯುವಿನ ಪಿ.ಕೆ.ಗಂಗೂಲಿ, ಎಐಟಿಯುಸಿಯ ಡಿ.ಎಂ.ಸಚ್‌ದೇವ, ಇಂಟಕ್‌ನ ಎಸ್.ಎಸ್.ಚೌಹಾಣ್ ಹಾಗೂ ಯುಟಿಯುಸಿಯ ಅಬನಿ ರಾಯ್ ಲೋಕಸಭಾಧ್ಯಕ್ಷರೊಡನೆ ಮಾತುಕತೆ ನಡೆಸಿದ ಕಾರ್ಮಿಕ ಮುಖಂಡರ ನಿಯೋಗದ ಸದಸ್ಯರು. ಇವರಲ್ಲದೆ ಎಡಪಕ್ಷಗಳ ಸಂಸತ್ ಸದಸ್ಯರಾದ ಅಜಯ್ ಮುಖ್ಯೋಪಾಧ್ಯಾಯ, ತರಿತ್ ತೇಪ್‌ದಾರ್, ಜೀವನ್ ರಾಯ್, ದೀಪಂಕರ್ ಮುಖರ್ಜಿ ಮತ್ತಿತರರೂ ಸಭೆಯಲ್ಲಿ ಭಾಗವಹಿಸಿದ್ದರು.

(ಐಎನ್‌ಎನ್

ಮೇ ತಿಂಗಳಿಂದ ಅಂಗನವಾಡಿ ಕಾರ್ಯಕರ್ತರಿಗೆ ಹೆಚ್ಚಿನ ಗೌರವ ಧನ


- ಹಣಕಾಸು ಮಂತ್ರಿಗಳ ಭರವಸೆ

ಅಂಗನವಾಡಿ ಕಾರ್ಯಕರ್ತರಿಗೆ ಹೆಚ್ಚಿನ ಗೌರವಧನವನ್ನು ಮೇ 1997 ರಿಂದ ಕೊಡಲಾಗುವುದು ಎಂದು ಹಣಕಾಸು ಮಂತ್ರಿ ಪಿ.ಚಿದಂಬರಂ ಅಂಗನವಾಡಿ ಕಾರ್ಯಕರ್ತರ ಸಂಯುಕ್ತ ಸಂಘರ್ಷ ಸಮಿತಿಯ ಒಂದು ನಿಯೋಗಕ್ಕೆ ಭರವಸೆ ನೀಡಿದ್ದಾರೆ.

ಸಿಐಟಿಯು, ಎಐಟಿಯುಸಿ, ಹೆಚ್‌ಎಂಎಸ್ ಮತ್ತು ಹೆಚ್‌ಎಂಕೆಪಿಯ ಪ್ರತಿನಿಧಿಗಳಿದ್ದ ಈ ನಿಯೋಗ ಮೇ 19 ರಂದು ಹಣಕಾಸು ಮಂತ್ರಿಗಳು ಮತ್ತು ಮಾನವ ಸಂಪನ್ಮೂಲಗಳ ಮಂತ್ರಿ ಬೊಮ್ಮಾಯಿಯವರನ್ನು ಭೇಟಿಯಾದರು. ಅಂಗನವಾಡಿ ವಲಯದಲ್ಲಿ ಬೇಕಾದ್ದಕ್ಕಿಂತ ಹೆಚ್ಚು ಮಂದಿಯನ್ನು ನೇಮಿಸಿಕೊಂಡಿರುವುದನ್ನು ಕುರಿತಂತೆ ತಾನು ಎತ್ತಿದ ಕೆಲವು ಪ್ರಶ್ನೆಗಳಿಗೆ ಮಾನವ ಸಂಪನ್ಮೂಲ ಮಂತ್ರಿಗಳಿಂದ ಸ್ಪಷ್ಟನೆ ಬಂದ ಕೂಡಲೇ ಹೆಚ್ಚಿನ ಗೌರವ ಧನವನ್ನು ಪ್ರಕಟಿಸುವುದಾಗಿ ಹಣಕಾಸು ಮಂತ್ರಿಗಳು ಹೇಳಿದರು. ನಿಯೋಗ ಬೊಮ್ಮಾಯಿಯವರನ್ನು ಭೇಟಿ ಮಾಡಿ ಇದನ್ನು ತಿಳಿಸಿದಾಗ ಈಗಾಗಲೇ ಮೇ 13 ರಂದು ಸಂಬಂಧಪಟ್ಟ ಕಡತವನ್ನು ಹಣಕಾಸು ಇಲಾಖೆಗೆ ಕಳಿಸಿರುವುದಾಗಿ ತಿಳಿಸಿದರು. ಇದನ್ನು ಹಣಕಾಸು ಮಂತ್ರಿಗಳಿಗೆ ಹೇಳಿದಾಗ ಈಗ ಹೆಚ್ಚಿನ ಗೌರವಧನವನ್ನು ಪ್ರಕಟಿಸಲು ಯಾವುದೇ ಅಡ್ಡಿ ಇಲ್ಲ ಎಂದರು.

ವಿಮಲಾ ರಣದಿವೆ(ಸಮಿತಿಯ ಸಂಯೋಜಕರು), ಅಹಲ್ಯಾ ರಂಗ್ನೇಕರ್, ಸಂಧ್ಯಾ ಶೈಲಿ(ಸಿಐಟಿಯು), ಅಮರಜಿತ್ ಕೌರ್(ಎಐಟಿಯುಸಿ), ಸುಧಾ(ಹೆಚ್‌ಎಂಎಸ್) ಹಾಗೂ ಜಯಾ ಜೈತ(ಹೆಚ್‌ಎಂಕೆಪಿ) ಈ ನಿಯೋಗದಲ್ಲಿದ್ದರು. ಇವರ ಜತೆಗೆ ಸಂಸತ್ ಸದಸ್ಯರಾದ ಬಾಸುದೇವ ಆಚಾರ್ಯ ಮತ್ತು ನೀನಾ ಮುಖರ್ಜಿ ಇದ್ದರು.

(ಐಎನ್‌ಎನ್)



ಹವಾಲಾ ಹಗರಣ - ಮೇವು ಹಗರಣ

ವ್ಯಂಗ್ಯ ಚಿತ್ರ: ಕಮೇಜ್

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶಕ: ಪಿ. ರಾಮಚಂದ್ರರಾವ್ ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು-9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು